ಜೂನ್ 29, 2025

41ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1991


ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ಬಾ 'ನಲ್ಲ' ಮಧುಚಂದ್ರಕೆ!

# ಶಿಲ್ಲಾಂಗ್ ಹನಿಮೂನ್ ಕಿಲ್ಲಿಂಗ್!



## ಜೆಜೆ ನಗರದ ರೌಡಿ ವಿಜಿ ಹಂತಕರಿಗೆ ಗುಂಡೇಟು!

## ಭೂ ವ್ಯಾಜ್ಯಕ್ಕೆ ಬಿತ್ತು ಮಲ್ಲಪ್ಪನ ಹೆಣ!



## ಲೋಕಾಯುಕ್ತದಲ್ಲೇ ಭ್ರಷ್ಟಾಚಾರ!



## ನನಗೆ ಮದುವೆಯಾಗಿ ಮಕ್ಕಳಿವೆ!



## ಪ್ರೀತಿ ಕೊಂದ ಕೊಲೆಗಾರ 6 ತಿಂಗಳ ಬಳಿಕ ಸಿಕ್ಕಿಬಿದ್ದ!



ಈಗಿನ ಸರಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಇವರಿಗೆ ಸರಕಾರ ನಡೆಸುವ ನೈತಿಕತೆ ಇಲ್ಲ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗೆ ತಾಕತ್ತಿದ್ದರೆ ಸರಕಾರದ ವಿರುದ್ಧ ಗಂಭೀರ ಆರೋಪ ಮಾಡಿರುವ ಅವರದ್ದೇ ಸರ್ಕಾರದ ಸಚಿವ ಬಿ.ಆರ್. ಪಾಟೀಲರ ವಿರುದ್ಧ ಕ್ರಮ ಕೈಗೊಳ್ಳಲಿ. ಇಲ್ಲವಾದರೆ ನೈತಿಕ ಹೊಣೆ ಹೊತ್ತು ತಾವೇ ರಾಜೀನಾಮೆ ನೀಡಲಿ ಎಂದು ಸವಾಲು ಹಾಕಿದರು. ನಮ್ಮ ಬಿಜೆಪಿ ಸರಕಾರದ ಬಗ್ಗೆ 40% ಕಮೀಷನ್ ಸರಕಾರ ಎಂದು ಆರೋಪಿಸಿದ್ದ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮೂರು ತಿಂಗಳಲ್ಲಿ ನಮ್ಮನ್ನೆಲ್ಲಾ ಜೈಲಿಗೆ ಹಾಕುತ್ತೇನೆ ಎಂದಿದ್ದರು. ಈಗ ಇವರ ಸರಕಾರ ಬಂದು ಎರಡು ವರ್ಷವಾಗಿದೆ. ಏನು ಮಾಡಿದ್ದಾರೆ?! ಶೇ.60 ರಷ್ಟು ಕಮಿಷನ್ ದಂಧೆಯಲ್ಲಿ ಮುಳುಗಿದ್ದಾರೆ ಎಂದು ಆರೋಪಿಸಿದ್ದಾರೆ.

ಹೇಳಿದ್ದಾರೆ! ಕಾಂಗ್ರೆಸ್ ಸರಕಾರಕ್ಕೆ ಇದಕ್ಕಿಂತಲೂ ಛೀಮಾರಿ ಬೇಕೆ? ಕಾಂಗ್ರೆಸ್

ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ತನಿಖಾ ತಂಡ ರಚಿಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೂಕರಾಗಿರದೆ ಬಾಯಿ ಬಿಟ್ಟು ಮಾತನಾಡಬೇಕು.

# ಮನಿ ಕೊಟ್ಟರೆ ಮಾತ್ರ ಮನೆ!

# ಹೌಸಿಂಗ್ ಬೋರ್ಡ್‌ನ ಲಂಚಾವತಾರ ಬಿಚ್ಚಿಟ್ಟ ಆರ್. ಅಶೋಕ್!!

ವಸತಿ ಯೋಜನೆಯಲ್ಲಿ 2137.44 ಕೋಟಿ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆ... ಎಂಬುದಾಗಿ ವಿಪಕ್ಷ ನಾಯಕ ಆರ್. ಅಶೋಕ್ ಬಾಂಬ್ ಸಿಡಿಸಿದ್ದಾರೆ. ಅನ್ನ ಕೊಡಿ ಅಂದರೆ ಕಂಡ ಕಂಡಲ್ಲಿ ಕನ್ನ ಹಾಕಲಾಗುತ್ತಿದೆ. ಹೌಸಿಂಗ್ ಬೋರ್ಡ್ ಕಮಿಷನ್ ಬೋರ್ಡ್ ಆಗಿದೆ. ಮನಿ ಕೊಟ್ಟರೆ ಮನೆ ಎಂಬುದು ಹೌಸಿಂಗ್ ಬೋರ್ಡ್‌



ನ ಹೊಸ ಸ್ಲೋಗನ್ ಆಗಿದೆ ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಈ ಕಾಂಗ್ರೆಸ್ ಸರ್ಕಾರ ಬಡವರಿಗೆ ಅನ್ನ ಕೊಡಿ ಅಂದ್ರೆ ಬಡವರ ಮನೆಗೆ ಕನ್ನ ಹಾಕಿದೆ. ಈ ಸರ್ಕಾರದಲ್ಲಿ ಹೌಸಿಂಗ್ ಬೋರ್ಡ್ ಕಲೆಕ್ಷನ್ ಬೋರ್ಡ್ ಆಗಿದೆ. ಮನಿ ಕೊಟ್ರೆ ಮನೆ ಎಂಬ ಹೊಸ ಸ್ಲೋಗನ್ ಬಿಟ್ಟಿದ್ದಾರೆ. ವಸತಿ ಇಲಾಖೆಯಲ್ಲಿ ರಕ್ತ ಹೀರುವ ಜಿಗಣೆಗಳು ಸೇರಿಕೊಂಡಿದೆ. ಬಡವರಿಗೆ ಮನೆ ನೀಡುವ ಬದಲು ಸೇಲ್ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ. ಅಬಕಾರಿ, ವಾಲ್ಮೀಕಿ ನಿಗಮದ ಬಳಿಕ ವಸತಿ ಇಲಾಖೆಯ ಭ್ರಷ್ಟಾಚಾರ ಬಯಲಿಗೆ ಬಂದಿದೆ.

### ಮನೆಗಾಗಿ ಕಾಸು

ಈ ವಿಷಯ ಇದೀಗ ಎಲ್ಲೆಡೆ ಚರ್ಚಿತವಾಗುತ್ತಿದೆ. ಕಾಂಗ್ರೆಸ್‌ನವರೇ ಆದ ಶಾಸಕ ಬಿ.ಆರ್.ಪಾಟೀಲ್ ಅವರೇ ವಸತಿ ಇಲಾಖೆಯ ಭ್ರಷ್ಟಾಚಾರದ ಬಗ್ಗೆ ಗಂಭೀರ ಆರೋಪ ಮಾಡಿದ್ದಾರೆ. ಪ್ರಸ್ತುತ ವೈರಲ್ ಆಗಿರುವ ಆಡಿಯೋದಲ್ಲಿನ ಮಾತುಗಳು ತಮ್ಮದೇ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಜತೆಗೆ, ಭ್ರಷ್ಟಾಚಾರದ ತನಿಖೆಗೂ ಒತ್ತಾಯಿಸಿದ್ದಾರೆ. ಹೀಗಾಗಿ ಇದರ ಸತ್ಯಾಸತ್ಯತೆ ಹೊರಬೀಳಬೇಕೆಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಆಗ್ರಹಿಸಿದ್ದಾರೆ.

ವಸತಿ ಇಲಾಖೆಯು ಉಳ್ಳವರು, ಸಾಹುಕಾರರಿಗೆ ಸೈಟ್ ಹಂಚಲು ಇರುವುದಲ್ಲ, ಬದಲಿಗೆ ಬಡವರು, ಮನೆ ಇಲ್ಲದವರು, ನಿರಾಶ್ರಿತರಿಗೆ ಸೂರು ಕೊಡುವುದು ಹೌಸಿಂಗ್ ಬೋರ್ಡ್ ಕೆಲಸ. ಹಿಂದುಳಿದವರಿಗೆ ಮನೆ ಸಿಗಬೇಕು. ಆದರೆ, ವಸತಿ ಇಲಾಖೆಯಲ್ಲಿ ರಕ್ತ ಹೀರುವ ಜಿಗಣೆಗಳು ಸೇರಿಕೊಂಡಿವೆ. ಬಡವರಿಗೆ ಮನೆಗಳನ್ನು ಕೊಡುವ ಬದಲು ಮಾರಾಟ ಮಾಡಲಾಗುತ್ತಿದೆ ಎಂದು ರಾಜ್ಯ ಸರಕಾರದ ವಿರುದ್ಧ ಆರೋಪ ಮಾಡಿದ್ದಾರೆ.

### ಟಿಪ್ಪು ವಂಶಜರಿಗೆ ಶೇ.15 ರಷ್ಟು ಮೀಸಲಾತಿ

ಬಳ್ಳಾರಿಯಲ್ಲಿ ಸಂಕಲ್ಪ ಸಮಾವೇಶ ಮಾಡಿದರು. ಆದರದು ಅಭಿವೃದ್ಧಿ ಸಂಕಲ್ಪ ಸಮಾವೇಶವಲ್ಲ, ಬಡವರನ್ನು ನಾಶ ಮಾಡುವ ಸಂಕಲ್ಪ ಸಮಾವೇಶವಾಗಿದೆ.



ಮನೆ ಪಡೆಯಲು ಅರ್ಜಿ ಬೇಡ, ಮುಖ್ಯಮಂತ್ರಿ ಮರ್ಜಿ ಇದ್ದರಷ್ಟೇ ಸಾಕು. ಇದು ಶೇ.60ರಷ್ಟು ಕಮೀಷನ್ ಸರಕಾರ. ಬೇಕಿದ್ದರೆ ದಾಖಲೆಗಳನ್ನು ಕೊಡುತ್ತೇನೆ. ವಸತಿ ಇಲಾಖೆಯಲ್ಲೂ ಮುಸ್ಲಿಂರಿಗೆ ಶೇ.15 ರಷ್ಟು ಮೀಸಲು ತರಲಾಗಿದೆ. ಟಿಪ್ಪು ವಂಶಜರಿಗೆ ಶೇ.15 ರಷ್ಟು ಮೀಸಲಾತಿ. ನಮ್ಮವರಿಂದ ಶೇ. 60 ರಷ್ಟು ಕಮೀಷನ್. ಇದೇ ಸರಕಾರದ ಸಾಧನೆ ಎಂದು ಟೀಕಿಸಿದ್ದಾರೆ.

### ಬಿ.ಆರ್ ಪಾಟೀಲ್ ಬಾಂಬ್!

ನಾನು ಬಾಯಿ ಬಿಟ್ಟರೆ ಈ ಸರಕಾರ ಮೂರು ದಿನ ಉಳಿಯೋದಿಲ್ಲ ಎಂದು ಶಾಸಕ ಬಿ.ಆರ್. ಪಾಟೀಲ್





ಸರಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಇವರಿಗೆ ಸರಕಾರ ನಡೆಸುವ ನೈತಿಕತೆ ಇಲ್ಲ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗೆ ತಾಕತ್ತಿದ್ದರೆ ಸರಕಾರದ ವಿರುದ್ಧ ಗಂಭೀರ ಆರೋಪ ಮಾಡಿರುವ ಅವರದ್ದೇ ಸರ್ಕಾರದ ಸಚಿವ ಬಿ.ಆರ್. ಪಾಟೀಲರ ವಿರುದ್ಧ ಕ್ರಮ ಕೈಗೊಳ್ಳಲಿ. ಇಲ್ಲವಾದರೆ ನೈತಿಕ ಹೊಣೆ ಹೊತ್ತು ತಾವೇ ರಾಜೀನಾಮೆ ನೀಡಲಿ ಎಂದು ಸವಾಲು ಹಾಕಿದರು.

ನಮ್ಮ ಬಿಜೆಪಿ ಸರಕಾರದ ಬಗ್ಗೆ 40% ಕಮೀಷನ್ ಸರಕಾರ ಎಂದು ಆರೋಪಿಸಿದ್ದ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮೂರು ತಿಂಗಳಲ್ಲಿ ನಮ್ಮನ್ನೆಲ್ಲಾ ಜೈಲಿಗೆ ಹಾಕುತ್ತೇನೆ ಎಂದಿದ್ದರು. ಈಗ ಇವರ ಸರಕಾರ ಬಂದು ಎರಡು ವರ್ಷವಾಗಿದೆ. ಏನು ಮಾಡಿದ್ದಾರೆ?! ಶೇ.60 ರಷ್ಟು ಕಮಿಷನ್ ದಂಧೆಯಲ್ಲಿ ಮುಳುಗಿದ್ದಾರೆ ಎಂದು ಆರೋಪಿಸಿದ್ದಾರೆ.

### ಎಲೆಕ್ಷನ್ ಗಾಗಿ ಕಲೆಕ್ಷನ್!

ಬಿಹಾರ ಚುನಾವಣೆಗಾಗಿ ಕರ್ನಾಟಕದಲ್ಲಿ ಕಲೆಕ್ಷನ್ ಮಾಡಲಾಗುತ್ತದೆ. ದೊಡ್ಡಮಟ್ಟದ ಭ್ರಷ್ಟಾಚಾರಕ್ಕೆ ರಾಜ್ಯದ ಕಾಂಗ್ರೆಸ್ ಸರಕಾರ ಮುಂದಾಗಿದೆ. ಗ್ಯಾರಂಟಿಗಳಿಗೂ ಗ್ಯಾರಂಟಿ ಇಲ್ಲ, ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಬೆಲೆ ಏರಿಕೆ ಮಾಡಲಾಗುತ್ತಿದೆ. ಆರು ತಿಂಗಳಿಂದ ಹಾಲಿನ ಪ್ರೋತ್ಸಾಹಧನ ನೀಡಿಲ್ಲ. ಈ ಬಗ್ಗೆ ವಿಧಾನಸಭೆ ಅಧಿವೇಶನದಲ್ಲಿ ನಿಲುವಳಿ ಮಂಡಿಸಿ ಚರ್ಚಿಸಲಾಗುವುದು ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ್ ತಿಳಿಸಿದರು.

### ಸಿಬಿಐ ತನಿಖೆ ನಡೆಯಲಿ!

ವಸತಿ ಯೋಜನೆ ಭ್ರಷ್ಟಾಚಾರದ ಬಗ್ಗೆ ರಾಜ್ಯ ಸರಕಾರ ಸಿಬಿಐ ತನಿಖೆ ನಡೆಸಬೇಕು. ಇಲ್ಲದಿದ್ದರೆ ಹೈಕೋರ್ಟ್

ಮಾತೆತ್ತಿದರೆ ಮೋದಿ ವಿರುದ್ಧ ಮಾತನಾಡುವವರು ಈಗ ತಮ್ಮದೇ ಸರಕಾರದ ಹುಳುಕಿನ ಬಗ್ಗೆಯೂ ಮಾತನಾಡಲಿ ಎಂದು ಆಗ್ರಹಿಸಿದರು.

### ಬೀಡಿ ಕಾರ್ಮಿಕರಿಗೆ ಅನ್ಯಾಯ

ಮಂಡ್ಯದ ಬೀಡಿ ಕಾರ್ಮಿಕರ ಕಾಲೋನಿಯಲ್ಲಿ ತಮಿಳುಕಾಲನಿ ನಿವಾಸಿಗಳಿಗೆಂದು ನಿರ್ಮಿಸಿದ್ದ ಮನೆಗಳಿಗೆ ಏಕಾಏಕಿ ಅಲ್ಪಸಂಖ್ಯಾತರನ್ನು ಕಳುಹಿಸಲಾಗಿದೆ. ಮನೆ ಖಾಲಿ ಇವೆ ಎಂದ ಮಾತ್ರಕ್ಕೆ ಯಾರು ಬೇಕಾದರೂ ಹೋಗಿ ಇರಬಹುದಾ? ಇದೆಲ್ಲವೂ ಜಿಲ್ಲೆಯ ಕಾಂಗ್ರೆಸ್ ಸಚಿವರು, ಶಾಸಕರ ಕುತಂತ್ರ. ಅವರ ಪ್ರೇರಣೆಯಿಂದಲೇ ಮುಸ್ಲಿಂರು ಖಾಲಿ ಮನೆಗಳನ್ನು ವಶಕ್ಕೆ ತೆಗೆದುಕೊಳ್ಳಲು ಮುಂದಾಗಿದ್ದಾರೆ ಎಂದು ಆರ್. ಅಶೋಕ್ ವಾಗ್ದಾಳಿ ನಡೆಸಿದ್ದಾರೆ.


ಶಾಸಕರ ಅನುಮತಿ ಇಲ್ಲದೆ ಹೇಗೆ ಮುಸ್ಲಿಂರು ಖಾಲಿ ಮನೆಗಳಿಗೆ ಹೋಗಲು ಸಾಧ್ಯ? ಅಧಿಕಾರಿಗಳು, ಜಿಲ್ಲಾಡಳಿತ ಕತ್ತೆ ಕಾಯುತ್ತಿದೆಯೇ? ಈ ಘಟನೆಯನ್ನು ಜಿಲ್ಲಾಡಳಿತ, ರಾಜ್ಯ ಸರಕಾರ ಗಂಭೀರವಾಗಿ ಪರಿಗಣಿಸಿ, ಕ್ರಮ ವಹಿಸಬೇಕು. ಆಸ್ಪತ್ರೆಗೆ ಸೇರಿದ ತಮಿಳು ಕಾಲನಿ ಜಾಗದ ಒತ್ತುವರಿಯನ್ನು ತೆರವುಗೊಳಿಸಬೇಕು. ಯಾವುದೇ ಪಕ್ಷದವರಾದರೂ ಇರಲಿ, ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

### ಕಾವೇರಿ ಪೂಜೆಗೆ 100 ಕೋಟಿ?!

ಕೆ.ಆರ್.ಎಸ್.ನಲ್ಲಿ ರಾಜ್ಯ ಸರ್ಕಾರದಿಂದ ಕಾವೇರಿ ಆರತಿ ನಡೆಸುವ ವಿಚಾರವಾಗಿ ಮಾತನಾಡಿರುವ ಆರ್ ಅಶೋಕ್, ಕಾವೇರಿ ಆರತಿ ಹೆಸರಲ್ಲಿ ಇವರು ಕೀರ್ತಿ ಪಡೆಯೋಕೆ ಹೋಗುತ್ತಿದ್ದಾರೆ. ಸರ್ಕಾರ ಅಲ್ಲಿನ ಜನರ ಜೀವನ ಕಿತ್ತುಕೊಳ್ಳುವ ಕೆಲಸ ಮಾಡುತ್ತಿದೆ. ಅಲ್ಲಿ ಆರತಿಗೆ ನೂರು ಕೋಟಿ ಖರ್ಚು ಮಾಡ್ತಿರೋದು ಯಾಕೆ? ಇದರಲ್ಲಿ ಕಾಂಗ್ರೆಸ್ ಖರ್ಚು ಮಾಡುವುದು 30 ರಿಂದ 40 ಕೋಟಿ ರೂ. ಅಷ್ಟೇ. ಇನ್ನುಳಿದ ಹಣ ತಮ್ಮ ಜೇಬಿಗೆ ಹಾಕಿಕೊಳ್ಳುತ್ತಾರೆ. ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ವಿರುದ್ಧ ಕಾನೂನಾತ್ಮಕ ಹೋರಾಟ ಮಾಡುತ್ತೇವೆ. ಜೊತೆಗೆ ಸದನದೊಳಗೆ ಹಾಗೂ ಹೊರಗೆ ಹೋರಾಟ ಮಾಡುತ್ತಿದ್ದೇವೆ ಎಂದಿದ್ದಾರೆ.

# ಬಾ ನಲ್ಲ ಮಧುಚಂದ್ರಕೆ!

# ಶಿಲ್ಲಾಂಗ್ ಹನಿಮೂನ್ ಕಿಲ್ಲಿಂಗ್!!



ಸೋನಮ್ - ರಾಜಾ ರಘುವಂಶಿ



ಕಸ್ಟಡಿಯಲ್ಲಿ ವಂಚಕಿ ಸೋನಮ್

**ನಾಗತಿಹಳ್ಳಿ ಚಂದ್ರಶೇಖರ ಅವರ ಪ್ರಸಿದ್ಧ ಕಾದಂಬರಿ 'ಬಾ ನಲ್ಲೆ ಮಧುಚಂದ್ರಕೆ' ಕೆಎಎಸ್ ಅಧಿಕಾರಿ ಕೆ. ಶಿವರಾಮ್ ಅಭಿನಯದಲ್ಲಿ ಸಿನಿಮಾ ಆಗಿ ಸೂಪರ್ ಹಿಟ್ ಆಗಿತ್ತು. ಅದರಲ್ಲಿ ಹೀರೋ ಹೀರೋಯಿನ್ ಅನ್ನು ಪ್ರೇಮಿಸಿ ಮದುವೆಯಾಗುತ್ತಾನೆ. ಆಕೆಗೆ ಕಾಲೇಜ್‌ನಲ್ಲಿ ಓರ್ವ ಹಳೇ ಪ್ರೇಮಿ ಇರುವುದು ಗೊತ್ತಾಗಿ, ಮಧುಚಂದ್ರಕೆ ಕರೆದೊಯ್ದು ಅವಳನ್ನು ಪ್ರಪಾತಕ್ಕೆ ತಳ್ಳಿ ಒಬ್ಬನೇ ವಾಪಸ್ ಬಂದು ಪೊಲೀಸ್‌ಗೆ ಸಿಕ್ಕಿ ಬೀಳುತ್ತಾನೆ. ಆತ ಸಿಕ್ಕಿಬೀಳಲು ಕಾರಣವೇನೆಂದರೆ, ಹೋಗ್ತಾ ಎರಡು ಟಿಕೆಟ್, ರಿಟರ್ನ್ ಒಂದೇ ಟಿಕೆಟ್ ಬುಕಿಂಗ್ ಮಾಡಿದ್ದು! ಈ ಕೊಲೆ ಕೇಸ್‌ನಲ್ಲಿಯೂ ಸೇಮ್ ಟು ಸೇಮ್ ಇನ್ಸಿಡೆಂಟ್!! ಒಂದು ವ್ಯತ್ಯಾಸ ಏನೆಂದರೆ, ಅಲ್ಲಿ ಹೀರೋ ಹೀರೋಯಿನ್ ಕೊಂದರೆ, ಇಲ್ಲಿ ಹೀರೋಯಿನ್ ಹೀರೋನ ಕೊಂದು ಸಿಕ್ಕಿ ಬಿದ್ದಿದ್ದಾಳೆ!!!**

ಇದು ಬಾ ನಲ್ಲೆ ಮಧು ಚಂದ್ರಕೆ ಅಲ್ಲ....

ಬಾ ನಲ್ಲ ಮಧು ಚಂದ್ರಕೆ ಕಿಲ್ಲಿಂಗ್ ಸ್ಟೋರಿ!

ಇಂದೋರ್ ಮೂಲದ ಉದ್ಯಮಿ ರಾಜಾ ರಘುವಂಶಿ (29) ಮತ್ತು ಅವರ ಪತ್ನಿ ಸೋನಮ್(25) 'ಹನಿಮೂನ್'ಗಾಗಿ ಮೇಘಾಲಯದ ಅದ್ಭುತ ಪ್ರವಾಸಿ ಕೇಂದ್ರ ಶಿಲ್ಲಾಂಗ್ (ಸಿಮ್ಲಾ)ಗೆ ತೆರಳಿದ್ದರು. ಈ ದಂಪತಿಗಳು ಮೇ 23ರಂದು ಸೊಹ್ರಾ (ಚಿರಾಪುಂಜಿ)ದಲ್ಲಿ ಇದ್ದಕ್ಕಿದ್ದಂತೆ ನಾಪತ್ತೆ ಯಾಗಿದ್ದರು! ಇಬ್ಬರ ಸಂಪರ್ಕವು ಸಿಗದೇ ಕುಟುಂಬದವರು ಗಾಭರಿಯಾಗಿ ಹುಡುಕಾಟ ಆರಂಭಿಸಿದಾಗ, ಜೂನ್ 2ರಂದು ವೈಸಾವ್ಡಾಂಗ್ ಜಲಪಾತದ ಕಮರಿಯಲ್ಲಿ ರಾಜಾ ರಘುವಂಶಿ ಅವರ ಮೃತ ದೇಹವು ಪತ್ತೆಯಾಗಿತ್ತು!!



ಸೋನಮ್ ಲವರ್ ರಾಜ್ ಕುಶ್ವಾ

ಇದೇನಾಯಿತು? ಏಕಾಯಿತು?? ಎಂಬ ಪ್ರಶ್ನೆಗಳಿಗೆ ಉತ್ತರ ಸಿಗಬೇಕು ಅಂದ್ರೆ, ಸೋನಮ್ ಸಿಗಬೇಕಿತ್ತು. ಆಕೆಗಾಗಿ ಹುಡುಕಾಟ ಸಾಗಿದ್ದು, ವಾರಣಾಸಿ-ಗಾಜಿಪುರ ಹೆದ್ದಾರಿಯ ರಸ್ತೆ ಬದಿಯ ಧಾಬಾವೊಂದರಲ್ಲಿ ಸೋನಂ ರಘುವಂಶಿ ಸಿಕ್ಕಿದಳು. ಅವಳನ್ನು ವಿಚಾರಿಸಿದಾಗ, ತನಗೇನು ಗೊತ್ತಿಲ್ಲ... ಬೈಲ್ ನಲ್ಲಿ ಮಾತಾಡುತ್ತ ಹೋದವರು ದಿಢೀರ್ ನಾಪತ್ತೆ ಯಾದ್ರು.... ನಾನು ಹುಡುಕಿದೆ... ಕೂಗಿದೆ... ಕಾಣಿಸಲೇ ಇಲ್ಲಾ.... ಏನು ಮಾಡಬೇಕೆಂದು ಅರ್ಥವಾಗದೆ ಶಾಕ್ ನಲ್ಲಿ ಕುಳಿತಿದ್ದೆ. ಆಮೇಲೆ ಹಸಿವು ನೀಗಿಸಿಕೊಳ್ಳಲಿಕ್ಕಾಗಿ ಇಲ್ಲಿಗೆ ಬಂದೆ.... ಇತ್ಯಾದಿಯಾಗಿ ಕತೆ ಹೇಳಿದಳು!



ಕಣಿವೆಯಲ್ಲಿ ರಘುವಂಶಿ ಶವಕ್ಕಾಗಿ ಹುಡುಕಾಟ

ಖಾಸಿ ಹಿಲ್ಸ್ ಎಸ್ಪಿ ವಿವೇಕ್ ಸೈಮನ್ ಬಲೇ ಚಾಣಕ್ಷ. ಅಷ್ಟು ಸುಲಭಕ್ಕೆ ಬಿಡುತ್ತಾರ.... ಹೌದಾ ಬಂಗಾರಿ, ನಿನಗೇನೂ ಗೊತ್ತೇ ಇಲ್ವಾ.... ಸರಿ, ತಿಂಡಿ ತಿನ್ನುತ್ತಾ ಕುಳಿತಿರು... ಅಂತೇಳಿ, ಆಕೆಯ ಬ್ಯಾಕ್ ಗ್ರೌಂಡ್ಸ್ ಕೆದಕಿದ್ದಾರೆ. ಆಗ ಅವಳಿಗೆ ರಾಜ್ ಕುಶ್ವಾ ಎಂಬ ಲವರ್ ಇದ್ದ ಅಂಶ ಪತ್ತೆ ಆಗಿದೆ. ಅವನನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಿದಾಗ... ಸತ್ಯ ಹೊರಬಿದ್ದಿದೆ!

## ಪ್ರೀ ಪ್ಲಾನ್ಡ್ ಮರ್ಡರ್!

ಸೋನಮ್‌ಗೆ ರಾಜಾ ರಘುವಂಶಿಯನ್ನು ಮದುವೆಯಾಗಲು ಇಷ್ಟವಿರಲಿಲ್ಲ, ಅಪಾರ ಶ್ರೀಮಂತಿಕೆ, ಮನೆಯವರ ಒತ್ತಾಯಕ್ಕೆ ಮಣಿದು ಆತನನ್ನು ವರಿಸಿದ್ದಳು ಆದರೆ, ಅವಳ ಪ್ರಿಯಕರ ರಾಜ್ ಕುಶ್ವ ಬೇರೆ ಬೆನ್ನು ಬಿದ್ದಿದ್ದ! ಗಂಡನೊಡನೆ ಹನಿಮೂನ್‌ಲಿದ್ರೂ ಕೂಡ ಅವಳು ಅವನೊಂದಿಗೆ ಸಂಪರ್ಕದಲ್ಲಿದ್ದು ಮಾತಾಡುತ್ತಿದ್ದಳು. ಆತ ದಂಪತಿಗಳನ್ನು ಹಿಂಬಾಲಿಸುತ್ತಿದ್ದ! ಹೀಗಿರುವಾಗ, ರಾಜ್ ತನ್ನ ಸೋದರ ಸಂಬಂಧಿ ಆಕಾಶ್ ರಜಪೂತ್ ಹಾಗೂ ಅವನ ಸ್ನೇಹಿತರಾದ ವಿಶಾಲ್ ಸಿಂಗ್, ಆನಂದ್ ಕುರ್ಮಿ ಮೂವರನ್ನು ತನ್ನ ಬಳಿಗೆ ಕರೆಸಿಕೊಂಡ. ಸೋನಮ್-ರಾಜಾ ರಘುವಂಶಿ ಖಾಸಿ ಹಿಲ್ಸ್ ಕಣಿವೆ ಪ್ರದೇಶದಲ್ಲಿ ಎಂಜಾಯ್ ಮಾಡುತ್ತಿದ್ದಾಗ... ರಾಜಾ ಬೆನ್ನಿಗೆ ಚೂರಿ ಇರಿದು ಕೊಂದು ಕಣಿವೆಗೆ ಹೆಣ ಎಸೆದು ಎಸ್ಕೇಪ್ ಆಗಿದ್ದರು!



ಎಸ್ಪಿ ವಿವೇಕ್ ಸೈಮನ್

ಪೊಲೀಸರು ಸೋನಮ್‌ಗೆ ಗೊತ್ತೇ ಇಲ್ಲದಂತೆ ಆರೋಪಿಗಳನ್ನು ಬೆನ್ನಟ್ಟಿ ಬಂಧಿಸಿ, ಅವಳ ಮುಂದೆ ನಿಲ್ಲಿಸಿ ಹೀಗೇನು ಹೇಳ್ತಿಯ... ನಿನಗೇನೂ ಗೊತ್ತೇ ಇಲ್ವಾ?! ಎಂದಾಗ, ಅವಳು ಕಂಪಿಸುತ್ತ ನಿಂತಿದ್ದಳು!

ಜೂನ್ 11ರಂದು ಐದು ಮಂದಿ ಆರೋಪಿಗಳನ್ನು ಶಿಲ್ಲಾಂಗ್‌ನ ಗಣೇಶ್ ದಾಸ್ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೊಳಪಡಿಸಿ ನಂತರ ಕೋರ್ಟ್ ಮುಂದೆ ನಿಲ್ಲಿಸಿ ವಾಪಸ್

☞ 11

## ಸಂಜಯ್ ವರ್ಮಾ ಮತ್ತು 119 ಕರೆಗಳು...!

ನಲ್ಲನೊಂದಿಗೆ ಮಧುಚಂದ್ರಕೆ ತೆರಳಿ ಪತಿ ರಾಜಾ ರಘುವಂಶಿಯನ್ನು ಕೊಲ್ಲಿಸಿರುವ ಸೋನಮ್‌ಳ ಮೊಬೈಲ್ ಈಗ ಪೊಲೀಸ್ ಬಳಿ ಇದ್ದು, ಕಾಲ್ ರೆಕಾರ್ಡ್ ಓಪನ್ ಮಾಡಿದಾಗ, ಅಚ್ಚರಿಯ ಅಂಶವೊಂದು ಪತ್ತೆಯಾಗಿದೆ. ಅದೇನೆಂದರೆ, ಸೋನಮ್, ರಾಜಾ ರಘುವಂಶಿ ಅವರನ್ನು ಮದುವೆಯಾಗಿ ಅವರ ಜೊತೆ ಮೇಘಾಲಯದಲ್ಲಿ ಹನಿಮೂನ್ ಪ್ರವಾಸಕ್ಕೆ ತೆರಳಿ, ರಾಜಾ ರಘುವಂಶಿ ಕೊಲೆಯಾಗುವ ತನಕ, ಸೋನಮ್‌ಗೆ ಸಂಜಯ್ ವರ್ಮಾ ಎಂಬ ವ್ಯಕ್ತಿಯಿಂದ ಬರೋಬ್ಬರಿ 119 ಕರೆಗಳು ಬಂದಿವೆ! ಮದುವೆಗೂ ಮುನ್ನ ಮತ್ತು ನಂತರ ಸೋನಮ್ ಜೊತೆ ಅತಿ ಹೆಚ್ಚು ದೂರವಾಣಿ ಸಂಪರ್ಕ ಹೊಂದಿದ್ದ ವ್ಯಕ್ತಿ ಸಂಜಯ್ ವರ್ಮಾ ಎಂದು ಗುರುತಿಸಲಾಗಿದೆ!!

ಯಾರೀತ?

ಮೇ 1ರಿಂದ ಮೇ 25ರ ನಡುವೆ, ಸೋನಮ್ ಮತ್ತು ಸಂಜಯ್ 119 ಬಾರಿ ಮಾತಾಡಿದ್ದಾರೆ! ರಘುವಂಶಿ ಕೊಲೆಯಾದದ್ದು ಮೇ 23ರಂದು. ಆಕೆ ಪೊಲೀಸ್ ಕೈಗೆ ಸಿಕ್ಕಿದ್ದು 25ರಂದು. ಆ ಬಳಿಕ ಸಂಜಯ್ ವರ್ಮಾನ ಮೊಬೈಲ್ ಸ್ವಿಚ್ ಆಫ್ ಆಗಿದೆ!!

ರಾಜಾ ರಘುವಂಶಿ ಕೊಲೆ ಕೇಸ್‌ನಲ್ಲಿ ಅರೆಸ್ಟ್ ಆಗಿರುವ ರಾಜ್ ಕುಶ್ವಾ ಸೋನಮ್ ಲವರ್ ಅಂತ ಗೊತ್ತಾಗಿದೆ! ಹಾಗಾದರೆ ಈ ಸಂಜಯ್ ವರ್ಮಾ ಯಾರು? ಈತನೂ ಅವಳ ಇನ್ನೊಬ್ಬ ಬಾಯ್ ಫ್ರೆಂಡಾ?? ಪೊಲೀಸ್ ತನಿಖಾಧಿಕಾರಿಗಳು ಶರಂಪ್ಜರತಲೆ ಕೆರೆದುಕೊಂಡು ತನಿಖೆ ಮುಂದುವರೆಸಿದ್ದಾರೆ...

# ಭ್ರಷ್ಟರನ್ನು ಬಗ್ಗು ಬಡಿಯುವ ಲೋಕಾಯುಕ್ತರೇ ಭ್ರಷ್ಟರಾದರೆ ಹೇಗೆ?!

**ಭ್ರಷ್ಟರ ಹೆಡೆಮುರಿಕಟ್ಟುವ ಲೋಕಾಯುಕ್ತ ಅಧಿಕಾರಿಗಳ ವಿರುದ್ಧವೇ ಗಂಭೀರ ಆರೋಪ ಕೇಳಿಬಂದಿದ್ದು, ಅಕ್ರಮವೊಂದರಲ್ಲಿ ಸ್ವತಃ ಲೋಕಾಯುಕ್ತರೇ ಶಾಮೀಲಾಗಿರುವ ಆರೋಪವಿದೆ! ಸದ್ಯ, ಲೋಕಾಯುಕ್ತ ಎಸ್ಪಿ ಶ್ರೀನಾಥ್ ಮಹದೇವ್ ಜೋಶಿಯವರನ್ನು ರಾಜ್ಯ ಸರ್ಕಾರ ಕರ್ತವ್ಯದಿಂದ ರಿಲೀವ್ ಮಾಡಿದೆ! ಬಂಧನ ಭೀತಿ ಎದುರಿಸಿದ್ದ ಶ್ರೀನಾಥ್ ಸದ್ಯ ನಿರೀಕ್ಷಣ ಜಾಮೀನು ತೆಗೆದುಕೊಂಡು ಸೇಫ್ ಆಗಿರುವ ಮಾಹಿತಿ ಇದೆ! ಬ್ರೇಕಿಂಗ್ ನ್ಯೂಸ್ ಏನೆಂದರೆ, ಪ್ರಭಾವಿ ಸಚಿವರು ಹಾಗೂ ಅವರ ಆಪ್ತ ಕಾರ್ಯದರ್ಶಿಗಳ ಹೆಸರೂ ಈ ಪ್ರಕರಣದಲ್ಲಿ ತಳುಕು ಹಾಕಿಕೊಂಡಿದೆ!!**



ಮಾಜಿ ಲೋಕಾಯುಕ್ತ ಎಸ್ಪಿ ಶ್ರೀನಾಥ್ ಜೋಶಿ

ಇದು ಒಂದು ರೀತಿಯಲ್ಲಿ 'ಬೇಲಿಯೇ ಎದ್ದು ಹೊಲ ಮೇದಂತೆ'. ಏಕೆಂದರೆ ಲೋಕಾಯುಕ್ತರೇ ಅಕ್ರಮದಲ್ಲಿ ಶಾಮೀಲಾಗಿರುವ ಆರೋಪ ಕೇಳಿಬಂದಿದೆ. ಆ ಮೂಲಕ ರಾಜ್ಯ ಸರ್ಕಾರಕ್ಕೆ ಮತ್ತೊಂದು ಮುಜುಗರ ಎದುರಾಗುವ ಆತಂಕ ಶುರುವಾಗಿದೆ. ಅಕ್ರಮದಲ್ಲಿ ಶಾಮೀಲಾಗಿರುವ ಲೋಕಾಯುಕ್ತ ಎಸ್‌ಪಿಯನ್ನು ರಾಜ್ಯ ಸರ್ಕಾರ ಕರ್ತವ್ಯದಿಂದ ರಿಲೀವ್ ಕೂಡ ಮಾಡಿದ್ದು, ಪೊಲೀಸರು ಬಂಧಿಸಿದ್ದಾರೆ.

ಇನ್ನು ಬಂಧನಕ್ಕೆ ಒಳಗಾಗಿರುವ ಲೋಕಾಯುಕ್ತ ಎಸ್‌ಪಿ ಹಾಗೂ ಪ್ರಭಾವಿ ಸಚಿವರಿಬ್ಬರ ಆಪ್ತ ಕಾರ್ಯದರ್ಶಿಗಳ ಹೆಸರುಗಳನ್ನು ಉಲ್ಲೇಖಿಸಿದ್ದಾರೆ! ಸಚಿವರ




ಹಾಗೂ ಅವರ ಆಪ್ತ ಕಾರ್ಯದರ್ಶಿಗಳ ಪಾತ್ರದ ಬಗ್ಗೆ ಗುಮಾನಿ ಎದ್ದಿದ್ದು, ಇದು ಸರ್ಕಾರದ ವಿರುದ್ಧ ವಿಪಕ್ಷಗಳಿಗೆ ಮತ್ತೊಂದು 'ಅಸ್ತ್ರ' ದೊರೆತಂತೆ ಆಗಿದೆ. ಈ ಹಿಂದೆಯೂ ಕೂಡ ಸಿದ್ದರಾಮಯ್ಯ ಮೊದಲ ಸಲ ಸಿಎಂ ಆಗಿದ್ದ ಸಂದರ್ಭದಲ್ಲಿ ಲೋಕಾಯುಕ್ತರೇ ಅಕ್ರಮದಲ್ಲಿ ಶಾಮೀಲಾಗಿದ್ದ ಘಟನೆ ನಡೆದು ಸರ್ಕಾರಕ್ಕೆ ಮುಜುಗರ ಉಂಟಾಗಿತ್ತು!

ಇತ್ತೀಚೆಗೆ ಕೋಲಾರದಲ್ಲಿ ಏಕಕಾಲಕ್ಕೆ ಎರಡು ಸ್ಥಳಗಳಲ್ಲಿ ಲಂಚಬಾಕ ಅಧಿಕಾರಿಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿದ್ದರು. ಕೋಲಾರ ಜಿಲ್ಲಾಧಿಕಾರಿ ಕಚೇರಿ ಹಾಗೂ ಮುಳಬಾಗಿಲು ನಂಗಲಿ ಪೊಲೀಸ್ ಠಾಣೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ಭರ್ಜರಿ ಕಾರ್ಯಾಚರಣೆ ಮಾಡಿದ್ದರು. ನಂಗಲಿ ಪೊಲೀಸ್ ಠಾಣೆಯ ಪಿಎಸ್‌ಐ ಅರ್ಜುನ್‌ಗೌಡ ಹಾಗೂ ಎಸ್.ಬಿ. ಕಾನ್‌ಸ್ಟೇಬಲ್ ಸುರೇಶ್ ಲೋಕಾಯುಕ್ತ ಅಧಿಕಾರಿಗಳು ತೋಡಿದ್ದ ಖೆಡ್ಡಾಕ್ಕೆ ಬಿದ್ದಿದ್ದರು.



ಬಾರ್ ಅಂಡ್ ರೆಸ್ಟೋರೆಂಟ್ ಓನರ್ ಪ್ರಶಾಂತ್ ಎಂಬುವರಿಂದ ತಿಂಗಳ ಮಾಮೂಲಿ ಪಡೆಯುವ ವೇಳೆ ಲೋಕಾ ಬಲೆಗೆ ನಂಗಲಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಹಾಗೂ ಪೊಲೀಸ್ ಪೇದೆ ಲೋಕಾಯುಕ್ತ ಬಲೆಗೆ ಬೀಳಿಸಿದ್ದರು. ಇನ್ನೂ ಕೋಲಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಶಿರಸ್ತೇದಾರ್ ಚಂದ್ರಪ್ಪ ಹಾಗೂ ಕಂದಾಯ ನಿರೀಕ್ಷಕ, ಸರ್ಕಾರಿ ನೌಕರರ ಸಂಘದ ಕೋಲಾರ ಜಿಲ್ಲಾ



ಅಧ್ಯಕ್ಷ ಸಹಾಯಕ ಅಜಯ್ ಅನುಪಸ್ಥಿತಿಯಲ್ಲಿ ಸಹಾಯಕ ಮುನಿರಾಜು ಲಂಚ ಪಡೆಯುವ ವೇಳೆ ಲೋಕಾ ಬಲೆಗೆ ಬಿದಿದ್ದರು. ಭೂ ಪರಿವರ್ತನೆಗಾಗಿ ಮಂಜುನಾಥ್ ಎಂಬುವವರಿಂದ 25 ಸಾವಿರ ರೂ. ಹಣದ ಬೇಡಿಕೆ ಇಟ್ಟಿದ್ದ ಜಿಲ್ಲಾಧಿಕಾರಿ ಕಚೇರಿಯ ಅಧಿಕಾರಿಗಳು ಎನ್ನಲಾಗಿತ್ತು. ಪಿಎಸ್‌ಐ ಅರ್ಜುನ್‌ಗೌಡ ಮತ್ತು ಸುರೇಶ್ ಪೊಲೀಸರ ವಶಕ್ಕೆ ಪಡೆದು ವಿಚಾರಣೆ ಮಾಡಲಾಗಿತ್ತು.

### ಕ್ರಿಪ್ಟೋ ಕರೆನ್ಸಿಯಲ್ಲಿ ಹೂಡಿಕೆ ಮಾಡಿದ ಮಾಜಿ ಪೊಲೀಸ್!

ಇನ್ನೂ, ಮಾಜಿ ಹೆಡ್ ಕಾನ್‌ಸ್ಟೇಬಲ್ ನಿಂಗಪ್ಪನ ಕತೆ ಹೇಳಬೇಕು ಅಂದ್ರೆ, ಸರ್ಕಾರಿ ಅಧಿಕಾರಿಗಳಿಗೆ ಬೆದರಿಕೆ ಹಾಕಿ ಲೋಕಾಯುಕ್ತ ಪೊಲೀಸರ ಸಂಭಾವ್ಯ ದಾಳಿಗಳ ಬಗ್ಗೆ ಮಾಹಿತಿ ಸೋರಿಕೆ ಮಾಡುವ ಮೂಲಕ ಹಲವು ಕೋಟಿ ರೂ.ಗಳನ್ನು ಸಂಗ್ರಹಿಸಿ, ಅಷ್ಟೂ ಹಣವನ್ನು ಕ್ರಿಪ್ಟೋ ಕರೆನ್ಸಿಯಾಗಿ ಪರಿವರ್ತಿಸಿ ರಹಸ್ಯವಾಗಿಟ್ಟಿರುವ ಆರೋಪ ಇದೆ!

ಲೋಕಾಯುಕ್ತ ಕಚೇರಿಯೊಳಗೆ ತನ್ನದೇ ನೆಟ್ ವರ್ಕ್ಸ್ ಹೊಂದಿದ್ದು, ಭ್ರಷ್ಟರ ಮನೆಗಳ ಮೇಲೆ ನಡೆಯಬಹುದಾದ ದಾಳಿಯ ಬಗ್ಗೆ ಮಾಹಿತಿ ಎತ್ತಿಕೊಂಡು, ಆಯಾ ಭ್ರಷ್ಟರಿಗೆ ತಿಳಿಸಿ, ರೇಡ್ ಆಗಬಾರದು ಅಂದ್ರೆ ಇಷ್ಟು ಲಕ್ಷ ಕೊಡಿ.... ಲೋಕಾಯುಕ್ತರನ್ನು ನಾನು ಅಡ್ಜೆಸ್ಟ್ ಮಾಡುತ್ತೇನೆ... ಎಂದು ಡೀಲ್ ಕುದುರಿಸುತ್ತಿದ್ದ. ಈ ಮಾಹಿತಿ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಗೊತ್ತಾಗಿ ಕಳೆದ ಜೂನ್ 2 ರಂದು ಲೋಕಾಯುಕ್ತ ಪೊಲೀಸರು ನಿಂಗಪ್ಪ ಸಾವಂತ್ (46) ಅಲಿಯಾಸ್ ಜಿ. ನಿಂಗಪ್ಪನನ್ನು ಬಂಧಿಸಿದ್ದರು. ವಿಚಾರಣೆ ವೇಳೆ ಈತ ಸರ್ಕಾರಿ ಭ್ರಷ್ಟ ಅಧಿಕಾರಿಗಳಿಂದ ಸುಲಿಗೆ ಮಾಡಿದ್ದ ವಿವರಗಳು ಸಿಕ್ಕಿಬಿದ್ದವು. ಸುಲಿಗೆ ಮಾಡಿದ್ದ ಹಣವನ್ನು ಹಾಲಿ ಲೋಕಾಯುಕ್ತದಲ್ಲಿ ಸೇವೆ ಸಲ್ಲಿಸುತ್ತಿರುವ ಕೆಲವು ಐಪಿಎಸ್ ಅಧಿಕಾರಿಗಳ ಹೆಸರುಗಳು ಸೇರಿದಂತೆ ಇತರೆ ರಹಸ್ಯ ಹೆಸರುಗಳಲ್ಲಿ ನೋಂದಾಯಿಸಲಾದ ಕ್ರಿಪ್ಟೋ ಕರೆನ್ಸಿ ವ್ಯಾಲೆಟ್‌ಗಳಲ್ಲಿ ಹೂಡಿಕೆ ಮಾಡಿದ್ದೇನೆ ಎಂದು ತಿಳಿಸಿದ್ದಾನೆ!

ಇನ್ನೂ, ಕೇಂದ್ರೀಕೃತ ಮತ್ತು ವಿಕೇಂದ್ರೀಕೃತ ಕ್ರಿಪ್ಟೋ ಕರೆನ್ಸಿ ವಹಿವಾಟಿನ ಮೂಲಕ ನಿಂಗಪ್ಪ ಹೂಡಿಕೆ ಮಾಡಿದ ಒಟ್ಟು ಮೊತ್ತ ಎಷ್ಟೆಂದು ಖಚಿತಪಡಿಸಿಕೊಳ್ಳಲು ಲೋಕಾಯುಕ್ತ ಪೊಲೀಸರು ಸುಮಾರು 25 ಕಂಪನಿಗಳಿಗೆ ಪತ್ರ ಬರೆದಿದ್ದಾರೆ! ಈ ಮೊದಲು ಚಿತ್ರದುರ್ಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಹೆಚ್‌ಸಿ ನಿಂಗಪ್ಪನನ್ನು ದುರ್ನಡೆ

☞ 12

## ಅಬಕಾರಿ ಸಚಿವ ತಿಮ್ಮಾಪೂರ....?!

ಲೋಕಾಯುಕ್ತ ಸಂಸ್ಥೆಯ ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧಿತನಾಗಿ ಜೈಲಿನಲ್ಲಿರುವ ಮಾಜಿ ಪೊಲೀಸ್ ಪೇದೆ ನಿಂಗಪ್ಪ, ಲೋಕಾಯುಕ್ತ ಎಸ್ಪಿ ಶ್ರೀನಾಥ್ ಜೋಶಿ ಅವರನ್ನು ಅಬಕಾರಿ ಸಚಿವ ತಿಮ್ಮಾಪೂರ ಅವರಿಗೆ ಪರಿಚಯಿಸಿ ಆಗಾಗ ಊಟ ಮಾಡಿಸುತ್ತಿದ್ದ ಎಂಬ ಸಂಗತಿ ಇದೀಗ ಚರ್ಚೆಯಾಗುತ್ತಿದೆ!

ಜೋಶಿ ಅವರಿಗೆ ಸಿಸಿಬಿಯಲ್ಲಿ ಡಿಸಿಪಿ ಪೋಸ್ಟ್ ಕೊಡಿಸುವ ಆಮಿಷವೊಡ್ಡಿ ತಿಮ್ಮಾಪೂರ ರೊಂದಿಗೆ ಡೀಲ್ ಕುದುರಿಸಿದ್ದನಂತೆ! ಜೋಶಿ ಅವರು ಡಿಸಿಪಿ-1 ಆದರೆ ಮಾತ್ರ ಓಕೆ ಎಂದಿದ್ದರು ಎಂಬ ಪುಕಾರು ಹಬ್ಬಿದೆ!!

ಗಮನಿಯ ಸಂಗತಿ ಏನೆಂದರೆ, ಆರೋಪಿ ನಿಂಗಪ್ಪ ಲೋಕಾಯುಕ್ತ ದಾಳಿ ಮಾಹಿತಿ ನೀಡಿ ಭ್ರಷ್ಟ ಅಧಿಕಾರಿಗಳ ಹೆದರಿಸಿ ಸುಲಿಗೆ ಮಾಡಿದ ಪೈಕಿ ಅಬಕಾರಿ ಇಲಾಖೆ ಭ್ರಷ್ಟರೆ ಹೆಚ್ಚಿದ್ದಾರೆ ಎನ್ನಲಾಗಿದೆ. ಹಾಗಾದರೆ, ಈ ಹಿನ್ನಲೆಯಲ್ಲಿ ಸಚಿವ ತಿಮ್ಮಾಪುರ ಹಾಗೂ ಅವರ ಕಾರ್ಯದರ್ಶಿಗಳ ಪಾತ್ರವೇನು?! ಈ ಬಗ್ಗೆ ತನಿಖೆ ನಡೆಯುವುದೇ?? ಸತ್ಯ ಬಹಿರಂಗ ಆಗುವುದೇ???

## ಕೇಸ್ ರದ್ದು ಕೋರಿ ಹೈ ಕೋರ್ಟ್‌ಗೆ....



ಆರೋಪಿ ಕಾನ್‌ಸ್ಟೇಬಲ್ ನಿಂಗಪ್ಪ

ಬೆಂಗಳೂರಿನಲ್ಲಿ ಸರಕಾರಿ ಅಧಿಕಾರಿಗಳನ್ನು ಬ್ಲ್ಯಾಕ್‌ಮೇಲ್ ಮಾಡುವ ಮೂಲಕ ಹಣ ವಸೂಲಿಯಲ್ಲಿ ಭಾಗಿಯಾದ ಆರೋಪದಡಿ ಬಂಧನಕ್ಕೊಳಗಾಗಿರುವ ವಜಾಗೊಂಡಿರುವ ಮುಖ್ಯಪೇದೆ ನಿಂಗಪ್ಪ ಸಾವಂತ್ ವಿರುದ್ಧದ ತನಿಖೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ. ತಮ್ಮ ವಿರುದ್ಧದ ಎಫ್‌ಐಆರ್ ರದ್ದು ಕೋರಿ ಹೊಳಲ್ಕೆರೆ ತಾಲೂಕು ತಾಳಿಕಟ್ಟೆಯ ನಿಂಗಪ್ಪ ಸಾವಂತ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ಪೀಠ, ಬುಧವಾರ ಈ ಆದೇಶ ಮಾಡಿದೆ. ಅಲ್ಲದೆ, ಅರ್ಜಿಯಲ್ಲಿ ಪ್ರತಿವಾದಿಗಳಾಗಿರುವ ಲೋಕಾಯುಕ್ತ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆಯನ್ನು ಜುಲೈ 15ಕ್ಕೆ ಮುಂದೂಡಿದೆ.

ಭ್ರಷ್ಟ ಅಧಿಕಾರಿಗಳ ವಿರುದ್ಧ ನಡೆಸಲಾಗುವ ದಾಳಿ ಕುರಿತಂತೆ ಸರಕಾರಿ ಅಧಿಕಾರಿಗಳನ್ನು ಬ್ಲ್ಯಾಕ್‌ಮೇಲ್ ಮಾಡುವ ಮತ್ತು ದಾಳಿ ಬಗ್ಗೆ ಮುಂಚಿತವಾಗಿಯೇ ಮಾಹಿತಿ ನೀಡಿ ಹಣ ವಸೂಲಿ ಮಾಡುತ್ತಿದ್ದರೆಂಬ ಆರೋಪದಡಿ ಅರ್ಜಿದಾರ ನಿಂಗಪ್ಪ ವಿರುದ್ಧ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಇದರಿಂದ ಪ್ರಕರಣ ರದ್ದು ಕೋರಿ ನಿಂಗಪ್ಪ ಹೈಕೋರ್ಟ್ ಮೊರೆ ಹೋಗಿದ್ದಾರೆ. ಈ ಮಧ್ಯೆ, ನಿಂಗಪ್ಪ ಅವರ ಬಂಧನ ಪ್ರಶ್ನಿಸಿ ಆತನ ಪತ್ನಿ ಚಂದ್ರಕಲಾ ಹೈಕೋರ್ಟ್‌ಗೆ ಪ್ರತ್ಯೇಕವಾಗಿ ತಕರಾರು ಅರ್ಜಿ ಸಲ್ಲಿಸಿದ್ದಾರೆ. ಲೋಕಾಯುಕ್ತ ಪೊಲೀಸರು ತಮ್ಮ ಪತಿಯನ್ನು 2025ರ ಮೇ 31ರಂದು ಹೊಸದುರ್ಗದಲ್ಲಿ ಬಂಧಿಸಿದ್ದಾರೆ. ಆದರೆ, 2025ರ ಜೂನ್ 2ರಂದು ಬೆಂಗಳೂರಿನ ರಾಜಾಜಿನಗರದ ಮಾರುತಿ ಮೈದಾನದಲ್ಲಿ ಬಂಧಿಸಲಾಗಿದೆ ಎಂದು ದಾಖಲೆಗಳಲ್ಲಿ ತೋರಿಸಲಾಗಿದೆ. ಪೊಲೀಸರು ಬಂಧನಕ್ಕೂ ಮುನ್ನ ಆರೋಪಿಗೆ ನೀಡಬೇಕಾದ ಸೂಕ್ತ ಕಾರಣ/ಆಧಾರಗಳನ್ನು ಒದಗಿಸಿಲ್ಲ. ಹಾಗಾಗಿ, ಈ ಬಂಧನ ಅಕ್ರಮವೆಂದು ಘೋಷಿಸಬೇಕು. ಪತಿಯನ್ನು ಕೂಡಲೇ ಬಿಡುಗಡೆಗೊಳಿಸಲು ಲೋಕಾಯುಕ್ತ ಪೊಲೀಸರಿಗೆ ಆದೇಶಿಸಬೇಕು ಎಂದು ಕೋರಿದ್ದಾರೆ. ಅರ್ಜಿ ಸಂಬಂಧ ಲೋಕಾಯುಕ್ತ ಪೊಲೀಸರಿಗೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ. ಅಬಕಾರಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸರಕಾರಿ ಅಧಿಕಾರಿಗಳಿಗೆ ಬೆದರಿಕೆಯೊಡ್ಡಿ ಮಾಜಿ ಹೆಡ್‌ಕಾನ್‌ಸ್ಟೇಬಲ್ ನಿಂಗಪ್ಪ ಸಾವಂತ್ 4.9 ಕೋಟಿ ರೂ. ಸುಲಿಗೆ ಮಾಡಿದ್ದ ಎಂದು ಹೇಳಲಾಗಿದೆ. ಇದರಲ್ಲಿ ಭ್ರಷ್ಟ ಲೋಕಾಯುಕ್ತ ಪೊಲೀಸರ ಪಾಲೆಷ್ಟು ಎಂಬುದು ಕೂಡ ಚರ್ಚೆಗೆ ಗ್ರಾಸವಾಗಿದೆ!!


ಕೊಲೆಯಾದ ಮಲ್ಲಪ್ಪ

**ಚಾಮರಾಜನಗರ ತಾಲೂಕಿನ ವಡ್ಗಲ್‌ಪುರ ಗ್ರಾಮದಲ್ಲಿ ಜಮೀನು ವಶಕ್ಕೆ ಪಡೆಯುವ ವಿಚಾರಕ್ಕೆ ದಾಯಾದಿಗಳ ನಡುವೆ ಉಂಟಾಗಿದ್ದ ವಿವಾದ ನ್ಯಾಯಾಲಯದ ಮೆಟ್ಟಿಲೇರಿತ್ತು. ಎರಡು ಕುಟುಂಬಕ್ಕೂ ಜಮೀನಿನ ವಿಚಾರಕ್ಕೆ ನಡೆಯುತ್ತಿದ್ದ ವ್ಯಾಜ್ಯ ಚಾಮರಾಜನಗರ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿದ್ದು, ಈ ವಿಚಾರದಲ್ಲಿ ಎರಡು ಕುಟುಂಬಗಳ ನಡುವೆ ಆಗಾಗ ಗಲಾಟೆ ನಡೆಯುತ್ತಿತ್ತು. ಆದರೆ ಮೇ 5ರಂದು ಇದೇ ಜಮೀನಿನ ವಿಚಾರಕ್ಕೆ ನಡೆಯುತ್ತಿದ್ದ ಗಲಾಟೆ ವಿಕೋಪಕ್ಕೆ ತಿರುಗಿ ವೃದ್ಧ ಮಲ್ಲಪ್ಪನ ಹೆಣ ಉರುಳಿದೆ.**

# ಜಮೀನಿನ ವಿವಾದಕ್ಕೆ ವೃದ್ಧ ಮಲ್ಲಪ್ಪನ ಹೆಣ ಉರುಳಿತು!

**ಚಾಮರಾಜನಗರ**


✍ ಎಸ್. ಸ್ವಾಮಿ

ಚಾಮರಾಜನಗರ ತಾಲೂಕಿನ ವಡ್ಗಲ್‌ಪುರ ಗ್ರಾಮದ ಲಿಂಗಾಯತ ಜನಾಂಗದ ಮಲ್ಲಪ್ಪ(60) ಮೃತ ದುರ್ದೈವಿ. ಮೃತ ಮಲ್ಲಪ್ಪನ ಪತ್ನಿ ಮಹಾದೇವಮ್ಮ ಈ ದಂಪತಿಗಳಿಗೆ ಇಬ್ಬರು ಮಕ್ಕಳು ಮೊದಲನೆಯವನು ನಿಂಗಪ್ಪ, ಕಿರಿಯವನು ಮಲ್ಲೇಶ. ಹಿರಿಯ ಮಗ ನಿಂಗಪ್ಪನಿಗೆ ಮದುವೆಯಾಗಿ ತನ್ನ ಹೆಂಡತಿ ಮಕ್ಕಳೊಡನೆ ಬಂದಿಗೌಡನಹಳ್ಳಿಯಲ್ಲಿ ವಾಸವಾಗಿದ್ದು, ಈತನ ಹಿರಿಯ ಮಗ 7 ವರ್ಷದ ಚಂದನ್ ವಡ್ಗಲ್‌ಪುರದಲ್ಲಿ ಅಜ್ಜ ಮಲ್ಲಪ್ಪ ಹಾಗೂ ಅಜ್ಜಿ ಮಹಾದೇವಮ್ಮನ ಜೊತೆ ವಾಸವಾಗಿದ್ದಾನೆ. ಸುಮಾರು 32 ವರ್ಷದ ಕಿರಿಯ ಮಗ ಮಲ್ಲೇಶ ಹಾಸನ ಜಿಲ್ಲೆಯ ರಾಮನಾಥಪುರದ ಹೋಟೆಲ್ ಒಂದರಲ್ಲಿ ಅಡುಗೆ ಕೆಲಸ ಮಾಡಿಕೊಂಡಿದ್ದು, ಮಲ್ಲೇಶ ಹಾಗೂ ನಿಂಗಪ್ಪ ಇಬ್ಬರು ಆಗಾಗ ಊರಿಗೆ ಬಂದು ತಂದೆ ತಾಯಿಯರನ್ನು ನೋಡಿಕೊಂಡು ಹೋಗುತ್ತಿದ್ದರು.

ಈ ಹಿಂದೆ ವಡ್ಗಲ್‌ಪುರದಲ್ಲಿ ಮಲ್ಲಪ್ಪನ ಹೆಸರಿನಲ್ಲಿದ್ದ 1 ಎಕರೆ 20 ಗುಂಟೆ ಜಮೀನನ್ನು ಮೀನಾಳ ಕುಟುಂಬಕ್ಕೆ ಮಾರಾಟ ಮಾಡಿದ್ದರು. ಮಾರಾಟದ ಪತ್ರದಲ್ಲಿ ಮಗನ ಸಹಿ ಇಲ್ಲ, ಆದ್ದರಿಂದ ಜಮೀನು ಬಿಟ್ಟು ಕೊಡುವುದಿಲ್ಲ ಎಂದು ಮೀನಾಳ ಕುಟುಂಬದವರಿಗೆ ಉಳುಮೆ ಮಾಡಲು ಮಲ್ಲಪ್ಪನ ಕುಟುಂಬ ಬಿಟ್ಟು ಕೊಟ್ಟಿರಲಿಲ್ಲ. ಹಾಗಾಗಿ ಮೃತ ಮಲ್ಲಪ್ಪನ ಕುಟುಂಬಕ್ಕೂ ಹಾಗೂ ಇದೇ ಗ್ರಾಮದ ಇವರ ದಾಯಾದಿಗಳಾದ ಲೇ. ಚಿಕ್ಕಣ್ಣಪ್ಪನ ಮಗ ನಾಗಪ್ಪರವರ ಕುಟುಂಬಕ್ಕೂ ಜಮೀನಿನ ವಿಚಾರಕ್ಕೆ ವ್ಯಾಜ್ಯ ನಡೆಯುತ್ತಿದ್ದು ಮೃತ ಮಲ್ಲಪ್ಪನ ಕುಟುಂಬ ನಾಗಪ್ಪರವರ ಕುಟುಂಬದ ಮೇಲೆ ಚಾಮರಾಜನಗರ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ಪ್ರಕರಣ ವಿಚಾರಣೆಯ ಹಂತದಲ್ಲಿದೆ. ಹಾಗಾಗಿ ಜಮೀನು ವಶಕ್ಕೆ ಪಡೆಯುವ ವಿಚಾರದಲ್ಲಿ ಮಲ್ಲಪ್ಪ ಮತ್ತು ನಾಗಪ್ಪ ಕುಟುಂಬದ ನಡುವೆ ಆಗಾಗ ಗಲಾಟೆ ನಡೆಯುತ್ತಿತ್ತು. ಆದರೆ ಮೇ 5ರ ಸೋಮವಾರ ಇದೇ ಜಮೀನಿನ ವಿಚಾರಕ್ಕೆ ನಡೆಯುತ್ತಿದ್ದ ಗಲಾಟೆ ವಿಕೋಪಕ್ಕೆ ತಿರುಗಿ ವೃದ್ಧ ಮಲ್ಲಪ್ಪನ ಹೆಣ ಉರುಳಿದೆ.

ಮೇ 5ರ ಸೋಮವಾರ ವಡ್ಗಲ್‌ಪುರ ಗ್ರಾಮದಲ್ಲಿ ಬಸವ ಜಯಂತಿ ಇದ್ದ ಕಾರಣ ಮೇ 4ರಂದು ಭಾನುವಾರ ಸಂಜೆಯೇ ಕಿರಿಯ ಮಗ ಮಲ್ಲೇಶ್ ರಾಮನಾಥಪುರದಿಂದ ಊರಿಗೆ ಬಂದು ಉಳಿದು ಕೊಂಡಿದ್ದ. ಆದರೆ ಜಮೀನು ವಿಚಾರಕ್ಕೆ ಮೇ 5ರಂದು ಸಂಜೆ 6 ಗಂಟೆ ವೇಳೆಯಲ್ಲಿ ಗಲಾಟೆಯಾಗಿ ಮಲ್ಲಪ್ಪನ ಮಗ ಮಲ್ಲೇಶ ಮೀನಾ ಎಂಬಾಕೆಯ ಮೇಲೆ ಹಲ್ಲೆ ನಡೆಸಿ ಹಿಡಿದುಕೊಂಡಿದ್ದ ಎಂದು ಹೇಳಲಾಗಿದೆ. ಇದರಿಂದ ಕೋಪಗೊಂಡ ಮೀನಾಳ ಕುಟುಂಬದವರು ಮಲ್ಲೇಶನ ಮೇಲೆ ಹಲ್ಲೆ ನಡೆಸಲು ಬಡಿಗೆಗಳನ್ನು ತಂದಿದ್ದಾರೆ. ಆದರೆ ಈ ವೇಳೆ ಮಲ್ಲೇಶ ತಪ್ಪಿಸಿಕೊಂಡಿದ್ದು ಈತನ ತಂದೆ ಮಲ್ಲಪ್ಪ ಹಲ್ಲೆಗೆ ಸಿಕ್ಕಿಬಿದ್ದಿದ್ದಾನೆ.


ಎಸ್ಪಿ ಡಾ. ಬಿ.ಟಿ. ಕವಿತಾ


ಡಿವೈಎಸ್ಪಿ ಲಕ್ಷ್ಮಯ್ಯ


ಸಿಪಿಐ ಪಿ.ಎನ್. ಶೇಷಾದ್ರಿ

ಮಲ್ಲಪ್ಪನನ್ನು ಮೀನಾಳ ಕುಟುಂಬ ವರ್ಗದವರಾದ ನಾಗಪ್ಪ, ಆತನ ಅಳಿಯ ನಾಗರಾಜು, ಮಗಳು ಮೀನಾ ಮಗ ದೊರೆಸ್ವಾಮಿರವರುಗಳು ಗುರುಮಲ್ಲಪ್ಪನ ಮಗ ಅಂಗಡಿ ದೊಡ್ಡಪ್ಪ ಮತ್ತು ಚಿನ್ನಪ್ಪನ ಮಗ ಚಿಕ್ಕಮಾದಪ್ಪರವರುಗಳ ಕುಮ್ಮಕ್ಕಿನಿಂದ ಬಡಿಗೆಯಿಂದ ಬಡಿದು ಮಾರಣಾಂತಿಕ ಹಲ್ಲೆ ನಡೆಸಿ ಅಲ್ಲಿಂದ ಓಡಿ ಹೋಗಿದ್ದಾರೆ. ಮಲ್ಲಪ್ಪ ಸಾವು ಬದುಕಿನ ನಡುವೆ ಹೋರಾಡುತ್ತ ರಕ್ತದ ಮಡುವಿನಲ್ಲಿ ಬಿದ್ದಿದ್ದಾನೆ. ಅಷ್ಟಕ್ಕೆ ಓಡಿಹೋಗಿದ್ದ ಮಲ್ಲೇಶನಿಗೆ ವಿಷಯ ತಿಳಿದು ತಂದೆಯ ಬಳಿ ಹೋಗಿ ನೋಡಲಾಗಿ ಮಲ್ಲಪ್ಪನಿಗೆ ತೀವ್ರ ರಕ್ತಸ್ರಾವವಾಗಿತ್ತು. ಅಷ್ಟರಲ್ಲಿ ಅಲ್ಲಿಗೆ ಬಂದ ಊರಿನ ಕಾಳಪ್ಪನ ಮಗ ನಿಂಗಪ್ಪ ಮತ್ತು ಆತನ ಹೆಂಡತಿ ನಾಗಮ್ಮರವರುಗಳು ಬಂದು ಮಲ್ಲಪ್ಪನಿಗೆ ನೀರು ಕುಡಿಸಿದರು. ಅಷ್ಟರಲ್ಲಾಗಲೇ ಗ್ರಾಮದಲ್ಲೆಲ್ಲಾ ವಿಷಯ ಹಬ್ಬಿದ್ದು ವಿಷಯ ತಿಳಿದು ಮಲ್ಲಪ್ಪನ ಹೆಂಡತಿ ಮಹದೇವಮ್ಮ ಸ್ಥಳಕ್ಕೆ ಓಡಿ ಬಂದಿದ್ದಾರೆ.

ತಕ್ಷಣ 112 ಪೊಲೀಸರಿಗೆ ಮಾಹಿತಿ ನೀಡಿದ್ದು ಸ್ಥಳಕ್ಕೆ ಬಂದಿದ್ದಾರೆ. ಈ ವೇಳೆ ತುರ್ತು ವಾಹನದ ಮೂಲಕ ಗಾಯಾಳು ಮಲ್ಲಪ್ಪನನ್ನು ಸಿಮ್ಸ್ ಆಸ್ಪತ್ರೆಗೆ ಸಾಗಿಸಲಾಗಿದೆ. ಆದರೆ ಗಾಯಾಳು ಮಲ್ಲಪ್ಪ ಚಿಕಿತ್ಸೆ ನೀಡುವ ಮೊದಲೇ ಮೃತಪಟ್ಟಿದ್ದು. ಅದಾಗಲೇ ಮಲ್ಲಪ್ಪ ಮೃತಪಟ್ಟಿದ್ದಾನೆ ಎಂದು ಆತನನ್ನು ಆಸ್ಪತ್ರೆಯಲ್ಲಿ ಪರೀಕ್ಷಿಸಿದ ವೈದ್ಯರು ದೃಢಪಡಿಸಿದ್ದಾರೆ. ವಿಷಯ ತಿಳಿದು ಕೂಡಲೇ ಚಾಮರಾಜನಗರ ಗ್ರಾಮಾಂತರ ಠಾಣೆ ಪೊಲೀಸ್ ಆರಕ್ಷಕ ನಿರೀಕ್ಷಕ ಪಿಎನ್. ಶೇಷಾದ್ರಿರವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತ ದೇಹವನ್ನು ಅಲ್ಲಿನ ವೈದ್ಯರಿಂದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ನೀಡಿದ್ದಾರೆ. ಬಳಿಕ ಘಟನಾ ಸ್ಥಳಕ್ಕೆ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ. ಕವಿತ, ಚಾಮರಾಜನಗರ ಡಿವೈಎಸ್ಪಿ ಗಂಗಾಧರ ಇಲ್ಲಿನ ಗ್ರಾಮಾಂತರ ಠಾಣೆ ವೃತ್ತ ನಿರೀಕ್ಷಕ ಪಿ.ಎನ್. ಶೇಷಾದ್ರಿರವರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು.


ಬಂಧಿತ ಆರೋಪಿಗಳು


ಕೃತ್ಯಕ್ಕೆ ಬಳಸಿದ ಬಡಿಗೆಗಳನ್ನು ತೋರಿಸುತ್ತಿರುವ ಆರೋಪಿಗಳು


ಕೃತ್ಯ ನಡೆದ ಸ್ಥಳ

ಈ ಸಂಬಂಧ ಮೃತನ ಕಿರಿಯ ಮಗ ಮಲ್ಲೇಶ ಎಂಬಾತ ನಮಗೂ ಮತ್ತು ನಮ್ಮೂರಿನ ನಮ್ಮ ದಾಯಾದಿ ಲೇಟ್ ಚಿಕ್ಕಣ್ಣಪ್ಪ ಮಗ ನಾಗಪ್ಪ ರವರಿಗೂ ಜಮೀನಿನ ವಿಚಾರದಲ್ಲಿ ವ್ಯಾಜ್ಯ ಇದ್ದು ಬಗ್ಗೆ ನಾವು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ. ಈ ಜಮೀನಿನ ವಿಚಾರವಾಗಿಯೇ ನಾಗಪ್ಪ ಮತ್ತು ಅವರ ಮನೆಯವರು ಆಗಾಗ್ಗೆ ನಮ್ಮ ತಂದೆಗೂ ನನಗೂ ಗಲಾಟೆ ಮಾಡಿ ಇವರಿಗೆ ಒಂದು ಗತಿ ಕಾಣಿಸಬೇಕೆಂದು ಹೇಳುತ್ತಿದ್ದರೂ ನಾವು ಸಮಾಧಾನವಾಗಿಯೇ ಇದ್ದೆವು. ಈಗಿರುವಾಗ್ಗೆ ಈ ದಿನ ದಿನಾಂಕ 05/05/2025ರಂದು ನಮ್ಮೂರು ವಡ್ಗಲ್‌ಪುರ ಗ್ರಾಮದಲ್ಲಿ ಬಸವ ಜಯಂತಿ ಕಾರ್ಯಕ್ರಮವಿದ್ದುದ್ದರಿಂದ ನಾನು ನೆನ್ನೆ ದಿನವೇ ಊರಿಗೆ ಬಂದು ಊರಿನಲ್ಲಿ ಇದ್ದೆನು.

ಮಾರನೆಯ ದಿನ ಸಂಜೆ ಸುಮಾರು 6-00 ಗಂಟೆ ಸಮಯದಲ್ಲಿ ನಮ್ಮ ತಂದೆ ಮಲ್ಲಪ್ಪರವರು ಎಂದಿನಂತೆ ಮನೆಯಿಂದ ಜಮೀನಿನ ಕಡೆಗೆ ನಡೆದುಕೊಂಡು ನಾಗಪ್ಪನ ಮನೆ ಮುಂದೆ ಹೋಗುತ್ತಿದ್ದಾಗ ಅಲ್ಲೇ ಮನೆಯ ಬಳಿಯೇ ಇದ್ದ ನಾಗಪ್ಪ ಏಕಾಏಕಿ ನನ್ನ ತಂದೆಯ ಜೊತೆಗೆ ಜಗಳ ತೆಗೆದು ಏನೋ ಬೋಳಿಮಗನೇ ನೀನು ಜಮೀನಿನ ವಿಚಾರವಾಗಿ ನಮ್ಮ ಮೇಲೆ ಕೇಸ್ ಹಾಕಿ ಕೋರ್ಟ್ ಮೆಟ್ಟಿಲು ಹತ್ತಿಸಿದ್ದೀಯಾ ಎಂದವನೇ ಒಂದು ದೊಣ್ಣೆಯನ್ನು ತೆಗೆದುಕೊಂಡು ಬಂದು ನನ್ನ ತಂದೆಯ ತಲೆಗೆ ಹೊಡೆದು ರಕ್ತಗಾಯ ಮಾಡಿದನು. ಅಷ್ಟಕ್ಕೆ ನಮ್ಮ ತಂದೆ ಬಿಡಿಸಿಕೊಂಡು ಹೋಗಲು ಪ್ರಯತ್ನಿಸಿದಾಗ ನಾಗಪ್ಪನ ಅಳಿಯ ನಾಗರಾಜು, ಮಗಳು ಮೀನಾ ಮತ್ತು ಮಗ ದೊರೆಸ್ವಾಮಿರವರುಗಳು ಅಲ್ಲಿಗೆ ಬಂದರು. ಈ ಪೈಕಿ ನಾಗಪ್ಪನ ಮಗಳು ಮೀನಾ ನಮ್ಮ ತಂದೆಯನ್ನು ಮುಂದೆ ಹೋಗದಂತೆ ತಬ್ಬಿಹಿಡಿದುಕೊಂಡಾಗ ನಾಗರಾಜು ಒಂದು ಕೊಡಲಿಯನ್ನು ತಂದು ನನ್ನ ತಂದೆಯ ಎಡಗಾಲಿಗೆ ಹೊಡೆದು ರಕ್ತಗಾಯ ಮಾಡಿದನು. ಅಷ್ಟಕ್ಕೆ ನನ್ನ ತಂದೆ ಕೂಗಿಕೊಂಡು ಕೆಳಕ್ಕೆ ಬಿದ್ದಾಗ ನಾಗಪ್ಪನ ಮಗ ದೊರೆಸ್ವಾಮಿ ಈ ಸೂಳೇಮಗ ಬದುಕಿದ್ದರೆ ತಾನೆ ನಮ್ಮ ಮೇಲೆ ಕೋರ್ಟ್‌ನಲ್ಲಿ ಕೇಸ್ ಹಾಕುತ್ತಾನೆಂದು ಹೇಳುತ್ತ ಕೆಳಕ್ಕೆ ಬಿದ್ದ ನಮ್ಮ ತಂದೆಯನ್ನು ಕಾಲಿನಿಂದ ತುಳಿದನು. ಆಗ ಗುರುಮಲ್ಲಪ್ಪನ ಮಗ ಅಂಗಡಿ ದೊಡ್ಡಪ್ಪ ಮತ್ತು ಚಿನ್ನಪ್ಪನ ಮಗ ಚಿಕ್ಕಮಾದಪ್ಪರವರುಗಳು ಸಹ ಅಲ್ಲಿಗೆ ಬಂದು ನಾಗಪ್ಪ ಮತ್ತು ಅವರ ಮಕ್ಕಳು ಮತ್ತು ಅಳಿಯನಿಗೆ ಈ ಸೂಳೇಮಗನನ್ನು ಹೊಡೆದು ಸಾಯಿಸಿರಿ ಎಂದು ಅಲ್ಲಿಯೇ ನಿಂತುಕೊಂಡು ಕುಮ್ಮಕ್ಕು ನೀಡುತ್ತಿದ್ದರು. ಅಷ್ಟಕ್ಕೆ ನಾನು ಬರ್ಹಿದೆಸೆ ಹೋಗಿ ಅದೇ ದಾರಿಯಲ್ಲಿ ಬರುತ್ತಿದ್ದಾಗ ನಾಗರಾಜು, ನಾಗಪ್ಪರವರು ತಮ್ಮ ಕೈಯಲ್ಲಿದ್ದ ಕೊಡಲಿ, ದೊಣ್ಣೆಯನ್ನು ತೆಗೆದುಕೊಂಡು ಎಲ್ಲರೂ ಅಲ್ಲಿಂದ ಓಡಿಹೋದರು.

☞ 7

## ನಿಲ್ಲದ ಮೈಕ್ರೋ ಫೈನಾನ್ಸ್ ಕಿರುಕುಳ!

# ಅಪ್ಪ-ಅಮ್ಮನ ಸಾಲಕ್ಕೆ ಮನೆಗೆ ನುಗ್ಗಿ ಏಳು ವರ್ಷದ ಹೆಣ್ಣು ಮಗಳ ಹೊತ್ತೊಯ್ದ ಫೈನಾನ್ಸ್ ಸಿಬ್ಬಂದಿ!


ಆರೋಪಿ ಅಜಿತ್

30 ಸಾವಿರ ಸಾಲ ಪಡೆದಿದ್ದ ದಂಪತಿಗಳು ತಾಳಿ ಅಡವಿಟ್ಟು ದುಡ್ಡು ಕೊಡ್ತೀವಿ ಅಂದು ಬಿಡಲಿಲ್ಲ. ಬಡ್ಡಿ ಹಣವನ್ನ ಬಲವಂತದ ವಸೂಲಿ ಮಾಡುವಂತಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಸರ್ಕಾರ ಸುಗ್ರೀವಾಜ್ಞೆ ತಂದ್ರೂ ಮೈಕ್ರೋ ಫೈನಾನ್ಸ್ ಕಾಟ ಮಾತ್ರ ತಪ್ಪಿಲ್ಲ! ಅಪ್ಪ-ಅಮ್ಮ ಮಾಡಿದ ಸಾಲಕ್ಕೆ 7 ವರ್ಷದ ಮಗಳನ್ನ ಕರೆದೊಯ್ದು ಚಿತ್ರಹಿಂಸೆ ಕೊಟ್ಟಿರುವ ಘಟನೆ ಮೈಸೂರಿನ ಟಿ. ನರಸಿಪುರ ತಾಲೂಕಿನ ಜಾಲಹಳ್ಳಿ ಗ್ರಾಮದಲ್ಲಿ ನಡೆದಿದೆ!

ಮೈಕ್ರೋ ಫೈನಾನ್ಸ್ ವರ್ತನೆಗೆ ಬೇಸತ್ತ ಬಾಲಕಿ ಪೋಷಕರು ಆಕ್ರೋಶ ಹೊರಹಾಕಿದ್ದಾರೆ. ನಾಗರೀಕ ಸಮಾಜ ತಲೆ ತಗ್ಗಿಸುವ ರೀತಿ ಮೈಕ್ರೋ ಫೈನಾನ್ಸ್ ಸಿಬ್ಬಂದಿ ನಡೆದುಕೊಳ್ಳುತ್ತಿದ್ದಾರೆ.

### ಕೇವಲ 1280 ರೂಪಾಯಿ

ಈ ಬಡ ಕೂಲಿ ಕಾರ್ಮಿಕ ದಂಪತಿ ಕೇವಲ 1280 ರೂ. ಲೋನ್ ಕಟ್ಟಿಲ್ಲ ಅಂತ ಮನೆಗೆ ನುಗ್ಗಿ 7 ವರ್ಷದ ಹೆಣ್ಣು ಮಗುವನ್ನು ಕರೆದೊಯ್ದ ಕಿರಾತಕರು, ನಿಮ್ಮ ತಾಯಿ ಎಲ್ಲಿ ತೋರಿಸು ಎಂದು ಮಗುವಿಗೆ ಹಿಂಸೆ ನೀಡಿದ್ದಾರೆ ಎನ್ನುವ ಆರೋಪ ಕೇಳಿ ಬಂದಿದೆ. ಟಿ. ನರಸಿಪುರ ತಾಲೂಕಿನ ಜಾಲಹಳ್ಳಿ ಗ್ರಾಮದ ನವೀನ್ ಹಾಗೂ ಪ್ರಮೀಳಾ ಎಂಬ ದಂಪತಿ ಬಜಾಜ್ ಮೈಕ್ರೋ ಫೈನಾನ್ಸ್‌ನಿಂದ 30 ಸಾವಿರ ಸಾಲ ಪಡೆದಿದ್ದರಂತೆ. ಬಳಿಕ ಸಮಯಕ್ಕೆ ಸರಿಯಾಗಿ 13 ತಿಂಗಳು ಲೋನ್ ಕಟ್ಟಿದ್ದಾರಂತೆ.


ಮಗಳೊಂದಿಗೆ ನವೀನ್


ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ

### ಹೆಣ್ಣು ಮಗಳು ಹೊತ್ತೊಯ್ದರು


ಈ ತಿಂಗಳು ಲೋನ್ ಕಟ್ಟೋದು ನಾಲ್ಕು ದಿನ ತಡವಾಗಿದಕ್ಕೆ ಮನೆಗೆ ಹುಡುಕಿಕೊಂಡು ಬಂದಿದ್ದಾರೆ. ಮನೆಗೆ ಬಂದ ಫೈನಾನ್ಸ ಸಿಬ್ಬಂದಿ, ನವೀನ್ ತಾಯಿಗೆ ಬೈದು ಹಣ ಕಟ್ಟುವಂತೆ ಹಿಂಸೆ ಕೊಟ್ಟಿದ್ದಾರೆ. ಬಳಿಕ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಪೂರಿಗಾಲಿ ಗ್ರಾಮದಲ್ಲಿ ಅಜ್ಜಿಯ ಮನೆಯಲ್ಲಿದ್ದ ಮಗುವಿನ ಬಳಿ ತೆರಳಿ ನಿಮ್ಮ ಅಮ್ಮ ಎಲ್ಲಿ ತೋರಿಸು ಬಾ ಎಂದು ಫೈನಾನ್ಸ್ ಸಿಬ್ಬಂದಿಗಳು ಕರೆದೊಯ್ದಿದ್ದರು ಎನ್ನಲಾಗಿದೆ.

ಏನೂ ಅರಿಯದ ಆ ಹೆಣ್ಣು ಮಗುವನ್ನು ರಸ್ತೆಯಲ್ಲೇ ಎಳೆದಾಡಿ ಹಲ್ಲೆ ನಡೆಸಿದ್ದಾರೆ ಎನ್ನುವ ಆರೋಪ ಕೂಡ ಇದೆ. ತಾಳಿ ಅಡವಿಟ್ಟು ದುಡ್ಡು ಕೊಡ್ತೀವಿ ಸಂಜೆ ಬನ್ನಿ ಎಂದ್ರು ಕೇಳದ ಫೈನಾನ್ಸ್ ಸಿಬ್ಬಂದಿ ಈಗಲೇ ಹಣ ಬೇಕು ಎಂದು ಪೀಡಿಸಿದ್ದರಂತೆ. ಮಗಳ ಜೊತೆ ಫೈನಾನ್ಸ್ ಸಿಬ್ಬಂದಿ ನಡೆದುಕೊಂಡ ರೀತಿಗೆ ಪೋಷಕರು ಸಿಟ್ಟಾಗಿದ್ದಾರೆ. ನಾಲ್ಕು ದಿನಗಳ ಹಿಂದೆ ಈ ಘಟನೆ ನಡೆದಿದ್ದು, ಮೈಸೂರು ಮಕ್ಕಳ ಸಮಿತಿ ಕಾರ್ಯಾಚರಣೆ ವೇಳೆ ಈ ಅಮಾನುಷ ಘಟನೆ ವಿಚಾರ ಬೆಳಕಿಗೆ ಬಂದಿದೆ.

### ಸರ್ಕಾರಿ ನಿಯಮಗಳಿಗೆ ಬೆಲೆ ಇಲ್ಲ!

ನಾಗರೀಕ ಸಮಾಜ ತಲೆ ತಗ್ಗಿಸುವ ರೀತಿಯಲ್ಲಿ ಮೈಕ್ರೋ ಫೈನಾನ್ಸ್ ಸಿಬ್ಬಂದಿ ನಡೆದುಕೊಂಡಿರೋದಕ್ಕೆ ಭಾರೀ ಆಕ್ರೋಶ ವ್ಯಕ್ತವಾಗಿದೆ. ಇತ್ತೀಚೆಗೆ ರಾಜ್ಯ ಸರ್ಕಾರ ಮೈಕ್ರೋ ಫೈನಾನ್ಸ್ ಟಾರ್ಚರ್‌ಗೆ ಕಡಿವಾಣ ಹಾಕಲು ಕಠಿಣ ನಿಯಮ ಜಾರಿಗೆ ತಂದಿದೆ. ಮೈಕ್ರೋ ಫೈನಾನ್ಸ್ ಸಿಬ್ಬಂದಿ ಹಣ ವಸೂಲಿ ವಿಚಾರದಲ್ಲಿ ಯಾರಿಗೂ ತೊಂದರೆ ನೀಡಬಾರದು. ಒಂದು ವೇಳೆ ಅಂತಹ ಪ್ರಕರಣ ಬೆಳಕಿಗೆ ಬಂದರೆ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿ ಸಿಎಂ ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದರು. ಅವರ ಆದೇಶಕ್ಕೂ ಕ್ಯಾರೇ ಎನ್ನದ ಸಿಬ್ಬಂದಿ ಹಣ ವಸೂಲಿಗಾಗಿ ಯಾವ ಹಂತದಲ್ಲಾದರೂ ಇಳಿಯುತ್ತಿದ್ದಾರೆ ಅನ್ನೋದಕ್ಕೆ ಮೈಸೂರು ಜಿಲ್ಲೆ ಮತ್ತೆ ಸಾಕ್ಷಿಯಾಗಿದೆ.


ಸಿಪಿಐ ಶ್ರೀಧರ್


ಪಿಎಸ್‌ಐ ಬಿ.ವಿ. ಪ್ರಕಾಶ್

ಈ ಹಿಂದೆ ಹೊಸ ಮಾಲಂಗಿ ಸಮೀಪದ ಸಿಲ್ಕಲ್ ಪುರದ ಕಡೆ ಇದೇ ರೀತಿಯ ಘಟನೆಗಳು ಸಂಭವಿಸಿ ದೊಡ್ಡ ಸುದ್ದಿಯಾಗಿತ್ತು. ಆದರೂ ಸರ್ಕಾರ ಎಚ್ಚೆತ್ತುಕೊಳ್ಳಲಿಲ್ಲ. ಅಂದಹಾಗೆ, ಪ್ರಸ್ತುತ ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಬೆಂದು ಬಸವಳಿದಿರುವ ಜಾಲಹಳ್ಳಿಯ ನವೀನ್ ದಂಪತಿಗಳು ಬಜಾಜ್ ಮೈಕ್ರೋ ಫೈನಾನ್ಸ್ ಸಿಬ್ಬಂದಿ ಹಾಗೂ ಮ್ಯಾನೇಜರ್ ವಿರುದ್ಧ ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತಾರೆ. ಜಾಲಹಳ್ಳಿ ನರಸೀಪುರ ತಾಲ್ಲೂಕಿಗೆ ಸೇರಿದೆಯಾದರೂ, ಹೆಣ್ಣು ಮಗುವಿನ ಕಿಡ್ನಾಪ್ ಘಟನೆ ಜರುಗಿದ್ದು ಪೂರಿಗಾಲಿ ಗ್ರಾಮದಲ್ಲಿ. ಇದು ಮಳವಳ್ಳಿ ತಾಲ್ಲೂಕು ಬೆಳಕವಾಡಿ ಪೊಲೀಸ್ ಠಾಣಾ ವ್ಯಾಪ್ತಿಗೆ ಬರುತ್ತದೆ. ಹೀಗಾಗಿ ಇಲ್ಲಿನ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಮಂಡ್ಯ ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಮಾರ್ಗದರ್ಶನದಲ್ಲಿ ಬೆಳಕವಾಡಿ ಪಿಎಸ್‌ಐ ಪ್ರಕಾಶ್ ಆರೋಪಿಗಳನ್ನು ಬಂಧಿಸಿ ತನಿಖೆ ನಡೆಸುತ್ತಿದ್ದಾರೆ. ☯




ನಾನು ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾಗ ಮಾಲ್ ಒಂದರಲ್ಲಿ ದೀಪ್ತಿಯನ್ನು ಭೇಟಿಯಾದೆ. ಒಂದು ದಿನ, ನಾನು ನಿಲ್ದಾಣದಲ್ಲಿ ಇಳಿದ ತಕ್ಷಣ, ನನ್ನ ಟ್ರಾಲಿಯ ಚಕ್ರ ಮುರಿದುಹೋಯಿತು. ನಾನು ಹೇಗೋ ಅದನ್ನು ಎಳೆಯುತ್ತಿದ್ದಾಗ ಒಬ್ಬ ಹುಡುಗಿ ನನಗೆ ಸಹಾಯ ಮಾಡಲು ಮುಂದಾದಳು. ಅವಳು ಮುಗುಳ್ನಗುತ್ತಾ, ಭಯ್ಯಾ, ನಿನಗೆ ಯಾವುದೇ ಸಮಸ್ಯೆ ಇದ್ದರೆ, ನಾನು ನಿನಗೆ ಸಹಾಯ ಮಾಡುತ್ತೇನೆ ಎಂದು ಹೇಳಿದಳು. ಮೊದಲಿಗೆ ನಾನು ನಿರಾಕರಿಸಿದೆ, ಆದರೆ ನಂತರ ಮೆಟ್ಟಿಲುಗಳ ಉದ್ದವನ್ನು ನೋಡಿ, ನಾನು ಅವಳ ಸಹಾಯವನ್ನು ಸ್ವೀಕರಿಸಿದೆ.

ನಾವು ಟ್ರಾಲಿಯನ್ನು ಮೆಟ್ಟಿಲುಗಳ ಮೇಲೆ ಹತ್ತಿದೆವು ಮತ್ತು ಹೊರಬಂದ ನಂತರ ನಾನು ಅವಳಿಗೆ ಧನ್ಯವಾದ ಹೇಳಿದೆ. ಅವಳು ಲಘು ನಗುವಿನೊಂದಿಗೆ ತೊಂದರೆ ಇಲ್ಲ ಭಯ್ಯಾ ಎಂದು ಉತ್ತರಿಸಿದಳು.

ಅವಳ ಸರಳತೆ ಮತ್ತು ಸಹಾಯ ಮಾಡುವ ಸ್ವಭಾವ ನನ್ನ ಹೃದಯವನ್ನು ಮುಟ್ಟಿತು. ಕೆಲವು ದಿನಗಳ ನಂತರ, ನಾನು ಅವಳನ್ನು ಹತ್ತಿರದ ಅಂಗಡಿಯಲ್ಲಿ ಮತ್ತೆ ನೋಡಿದೆ. ಸಂಭಾಷಣೆಯ ಸಮಯದಲ್ಲಿ, ಅವಳು ನನ್ನ ಮನೆಯ ಬಳಿ ವಾಸಿಸುತ್ತಾಳೆ ಎಂದು ನನಗೆ ತಿಳಿಯಿತು.

ಕ್ರಮೇಣ ನಮ್ಮ ಸಂಭಾಷಣೆ ಹೆಚ್ಚಾಯಿತು. ಅವಳು ಸರಳ ಕುಟುಂಬದಿಂದ ಬಂದವಳು ಮತ್ತು ತನ್ನ ಕುಟುಂಬದ ಅಗತ್ಯಗಳನ್ನು ಪೂರೈಸಲು ಶ್ರಮಿಸುತ್ತಾಳೆ ಎಂದು ಅವಳು ನನಗೆ ಹೇಳಿದಳು. ಅವಳ ಸರಳತೆ ಮತ್ತು ಹೋರಾಟ ನನ್ನ ಹೃದಯವನ್ನು ಮುಟ್ಟಿತು ಮತ್ತು ನಾನು ಅವಳತ್ತ ಆಕರ್ಷಿತನಾದೆ.

ನಾನು ಬೆಂಗಳೂರಿಗೆ ಹಿಂತಿರುಗಿದೆ, ಆದರೆ ದೀಪ್ತಿಯೊಂದಿಗೆ ಫೋನ್‌ನಲ್ಲಿ ಮಾತನಾಡುತ್ತಲೇ ಇದ್ದೆ. ಅವಳ ಧ್ವನಿಯಲ್ಲಿ ಪ್ರತಿ ರಾತ್ರಿ ನನ್ನ ದಿನದ ಆಯಾಸವನ್ನು ಹೋಗಲಾಡಿಸುವ ಒಂದು ಶಾಂತ ಧ್ವನಿ ಇತ್ತು. ನಾನು ಅವಳಿಗೆ ನನ್ನ ಪ್ರೀತಿಯನ್ನು ವ್ಯಕ್ತಪಡಿಸಿದೆ ಮತ್ತು ಅವಳು ನನ್ನ ಭಾವನೆಗಳನ್ನು ಅರ್ಥಮಾಡಿಕೊಂಡಳು ಮತ್ತು ಅದನ್ನು ಒಪ್ಪಿಕೊಂಡಳು. ನಮ್ಮ ಸಂಬಂಧವು ಆಳವಾಯಿತು.

ಕೆಲವು ತಿಂಗಳುಗಳ ನಂತರ, ನಾನು ಅವಳನ್ನು ಬೆಂಗಳೂರಿಗೆ ಬರಲು ಆಹ್ವಾನಿಸಿದೆ, ಅವಳು ಅದನ್ನು ಒಪ್ಪಿಕೊಂಡಳು. ದೀಪ್ತಿ ಬೆಂಗಳೂರಿಗೆ ಬಂದಾಗ, ನಾವು ನಗರದ ಅನೇಕ ಸ್ಥಳಗಳಲ್ಲಿ ಒಟ್ಟಿಗೆ ಸುತ್ತಾಡಿದೆವು. ಅವಳು ತುಂಬಾ ಸಂತೋಷವಾಗಿದ್ದಳು ಮತ್ತು ಅವಳ ಸಂತೋಷವನ್ನು ನೋಡಲು ನಾನು ಉತ್ಸುಕನಾಗಿದ್ದೆ.

ದೀಪ್ತಿಯ ಬಟ್ಟೆಗಳನ್ನೆಲ್ಲಾ ಬಿಚ್ಚಿದೆ. ಮೊದಲ ಬಾರಿಗೆ, ಹುಡುಗಿಯ ದೇಹದ ವಾಸನೆ ನನಗೆ ತುಂಬಾ ಇಷ್ಟವಾಯಿತು, ಉಳಿದೆಲ್ಲ ವಾಸನೆಗಳು ವಿಫಲವಾದವು.

ಮೊದಲ ದಿನದ ಆಯಾಸದ ನಂತರ, ಮರುದಿನ ಬೆಳಿಗ್ಗೆ ನಾನು ಎದ್ದಾಗ, ದೀಪ್ತಿ ನನಗಾಗಿ ಚಹಾ ಮತ್ತು ಉಪಹಾರವನ್ನು ಮಾಡುತ್ತಿದ್ದನ್ನು ನಾನು ನೋಡಿದೆ. ಅವಳ ನಿರಾಳತೆ ಮತ್ತು ವಾತ್ಸಲ್ಯ ನನ್ನನ್ನು ಆಳವಾಗಿ ಮುಟ್ಟಿತು. ನಾವು ಒಟ್ಟಿಗೆ ಉಪಾಹಾರ ಸೇವಿಸಿ ಬಹಳಷ್ಟು ಮಾತನಾಡಿದೆವು.

ಅವಳು ತನ್ನ ವಿಶೇಷ ಗುಣಗಳಿಂದ ನನ್ನ ಹೃದಯವನ್ನು ಗೆದ್ದಳು. ಒಂದು ಸಂಜೆ ಅವಳು ಬಿಹಾರಿ ಶೈಲಿಯಲ್ಲಿ ದಾಲ್-ರೈಸ್ ಮತ್ತು ಭುಜಿಯಾವನ್ನು ಬೇಯಿಸಿದಳು, ಅದು ತುಂಬಾ ರುಚಿಕರವಾಗಿತ್ತು, ನಾನು ಅದನ್ನು ಹೊಗಳುವುದನ್ನು ನಿಲ್ಲಿಸಲಾಗಲಿಲ್ಲ. ಅವಳ ಮೇಲಿನ ನನ್ನ ಪ್ರೀತಿ ಮತ್ತಷ್ಟು ಹೆಚ್ಚಾಯಿತು.

ನಮ್ಮ ಸಂಬಂಧವು ಬಲಗೊಳ್ಳುತ್ತಲೇ ಹೋಯಿತು. ದೀಪ್ತಿ ಹಿಂತಿರುಗಿ ಹೋಗಬೇಕಾದಾಗ, ನಾವು ತುಂಬಾ ದುಃಖಿತರಾಗಿದ್ದೆವು. ನಾನು ಅವಳ ಬಗ್ಗೆ ನನ್ನ ಹೆತ್ತವರಿಗೆ ಹೇಳಿದೆ ಮತ್ತು ಅವಳನ್ನು ಮದುವೆಯಾಗುವ ನನ್ನ ಬಯಕೆಯನ್ನು ವ್ಯಕ್ತಪಡಿಸಿದೆ. ಆದರೆ ದೀಪ್ತಿ ಮದುವೆಗಳಲ್ಲಿ ನೃತ್ಯ ಮಾಡುವ ಮೂಲಕ ತನ್ನನ್ನು ತಾನು ಪೋಷಿಸುತ್ತಿದ್ದಳು ಎಂದು ತಾಯಿಗೆ ತಿಳಿದಾಗ, ಅವರು ಕೋಪಗೊಂಡರು.

ಮಾ ಮತ್ತು ಅಪ್ಪ ದೀಪ್ತಿಯನ್ನು ಮದುವೆಯಾಗಲು ನನಗೆ ಅವಕಾಶ ನೀಡಲಿಲ್ಲ, ನಾನು ಈ ಮದುವೆ ಮಾಡಿದರೆ, ನಾನು ಕುಟುಂಬದೊಂದಿಗಿನ ಸಂಬಂಧವನ್ನು ಮುರಿಯಬೇಕಾಗುತ್ತದೆ ಎಂದು ಅವರು ನನಗೆ ಎಚ್ಚರಿಸಿದರು. ನಾನು ಅವರನ್ನು ಮನವೊಲಿಸಲು ಎಲ್ಲಾ ರೀತಿಯಲ್ಲಿ ಪ್ರಯತ್ನಿಸಿದೆ, ಆದರೆ ಸಮಾಜದ ಭಯದಿಂದ ಅವರು ಒಪ್ಪಲಿಲ್ಲ.

ಐದು ವರ್ಷಗಳು ಕಳೆದಿವೆ, ಆದರೆ ನಾನು ದೀಪ್ತಿಯನ್ನು ಎಂದಿಗೂ ಮರೆಯಲು ಸಾಧ್ಯವಾಗಲಿಲ್ಲ. ಅವಳು ನನಗಾಗಿ ತನ್ನ ಕೆಲಸವನ್ನು ಬಿಟ್ಟಳು ಮತ್ತು ಈಗ ಅವಳು ಕೆಲಸ ಪಡೆಯುವಲ್ಲಿ ತೊಂದರೆಗಳನ್ನು ಎದುರಿಸುತ್ತಿದ್ದಾಳೆ. ನಾನು ಅವಳಿಗೆ ಅನೇಕ ಬಾರಿ ಆರ್ಥಿಕ ಸಹಾಯವನ್ನು ನೀಡಲು ಪ್ರಯತ್ನಿಸಿದೆ, ಆದರೆ ಅವಳು ಪ್ರತಿ ಬಾರಿಯೂ ನಿರಾಕರಿಸಿದಳು.

ಇಂದು, ನನ್ನ ಪ್ರೀತಿಯನ್ನು ಕಳೆದುಕೊಂಡ ನೋವನ್ನು ನಾನು ಅನುಭವಿಸುತ್ತೇನೆ. ಬಹುಶಃ ದೀಪ್ತಿ ಮತ್ತು ನಾನು ಇಬ್ಬರೂ ನಮ್ಮದೇ ಆದ ಸಂದರ್ಭಗಳಿಗೆ ಬಲಿಯಾದೆವು. ಸಮಾಜದ ಸಂಪ್ರದಾಯಗಳು ಮತ್ತು ನಂಬಿಕೆಗಳ ಮುಂದೆ ನಾನು ನನ್ನ ನಿಜವಾದ ಪ್ರೀತಿಯನ್ನು ತ್ಯಜಿಸಬೇಕಾಯಿತು.

ಈ ಕಥೆ ನನ್ನೊಬ್ಬನದ್ದಲ್ಲ, ಸಮಾಜದ ನಿರ್ಬಂಧಗಳಿಂದಾಗಿ ತಮ್ಮ ನಿಜವಾದ ಪ್ರೀತಿಯನ್ನು ಕಳೆದುಕೊಳ್ಳುವ ಎಲ್ಲರ ಕಥೆ. ☯

# ಪ್ರೀತಿ ಕೊಂದ ಕೊಲೆಗಾರ ಆರು ತಿಂಗಳ ಬಳಿಕ ಸಿಕ್ಕಿಬಿದ್ದ!


ಮಧುಶ್ರೀ


ಸತೀಶ

ಅದೊಂದು ಮಣ್ಣಲ್ಲಿ ಮಣ್ಣಾಗುತ್ತಿದ್ದ ಕೊಲೆ ಪ್ರಕರಣ. ಪೊಲೀಸರ ಚಾಣಾಕ್ಷತನ ತನಿಖೆಯಿಂದ ಆರು ತಿಂಗಳ ನಂತರ ಕೊಲೆ ರಹಸ್ಯ ಬಯಲಾಗಿದೆ. ಒಂದೇ ಒಂದು ಮೆಸೇಜ್ ಇಡೀ ಪ್ರಕರಣ ಟ್ವಿಸ್ಟ್ ನೀಡಿದೆ. ಇದೇ ಮೆಸೇಜ್ ಹಿಡಿದುಕೊಂಡು ಹಂತಕನ ಹೆಡೆಮುರಿ ಕಟ್ಟಿದ್ದಾರೆ. ಹೌದು... ದೃಶ್ಯ ಸಿನಿಮಾ ಮಾದರಿಯಲ್ಲಿ ಸಾಕ್ಷಿ ನಾಶ ಮಾಡುತ್ತಿದ್ದ ಕಿಲಾಡಿ ಆರೋಪಿ ಪೊಲೀಸರ ಅತಿಥಿಯಾಗಿದ್ದಾನೆ. ಈ ನಿಗೂಢ ಕೊಲೆಯ ಹಂತಕನ ಹೆಡೆಮುರಿ ಕಟ್ಟಿದ್ದೇ ರೋಚಕವಾಗಿದೆ.

ಮದುವೆಯಾಗು ಎಂದು ಪೀಡಿಸಿದ್ದ ಪ್ರೆಯಿಸಿ ಮಧುಶ್ರೀಯನ್ನು ಕೊಲೆ ಮಾಡಿ ಬಳಿಕ ಹಳ್ಳದಲ್ಲಿ ಹೂತ್ತಿದ್ದ ಪ್ರಕರಣವನ್ನು ಗದಗ ಪೊಲೀಸರು ಭೇದಿಸಿದ್ದಾರೆ. ಗದಗ ತಾಲೂಕಿನ ನಾರಾಯಣಪುರ ಗ್ರಾಮದ ಸತೀಶ್ ಹಿರೇಮಠ ಅದೇ ಗ್ರಾಮದ ಮಧುಶ್ರೀ ಪರಸ್ಪರ ಪ್ರೀತಿಸುತ್ತಿದ್ದರು. ಹೀಗೆ ಒಂದು ದಿನ ಕುಟುಂಬಸ್ಥರ ಕಣ್ತಪ್ಪಿಸಿ ಇಬ್ಬರು ಹಳ್ಳಿ ಗ್ರಾಮದ ಹೊರಹೊಲಯದಲ್ಲಿ ಭೇಟಿಯಾಗಿದ್ದು, ಈ ವೇಳೆ ಮಧುಶ್ರೀ ತನ್ನನ್ನು ಮದುವೆಯಾಗುವಂತೆ ಒತ್ತಾಯಿಸಿದ್ದಾಳೆ. ಬಳಿಕ ಇಬ್ಬರ ನಡುವೆ ಗಲಾಟೆ ನಡೆದಿದ್ದು, ಈ ವೇಳೆ ಸತೀಶ್, ವೇಲ್ ನಿಂದ ಮಧುಶ್ರೀ ಕುತ್ತಿಗೆ ಬಿಗಿದು ಉಸಿರುಗಟ್ಟಿಸಿ ಕೊಲೆ ಮಾಡಿದ್ದಾನೆ. ಬಳಿಕ ಪಕ್ಕದ ಹಳ್ಳದಲ್ಲೇ ಹೂತು ಹಾಕಿ ಏನು ಗೊತ್ತಿಲ್ಲದಂತೆ ಇದ್ದ. ಆದರೆ, ಪೊಲೀಸರಿಗೆ ಸಿಕ್ಕ ಆ ಒಂದು ಮೆಸೇಜ್ ನಿಂದ ಸತೀಶನ ಪ್ರೀತಿ ಕೊಂದ ಕೊಲೆಯ ಕಥೆ ಆಚೆ ಬಂದಿದೆ.

**ಹಂತಕನ ಹೆಡೆಮುರಿ ಕಟ್ಟಿದ್ದೇ ರೋಚಕ**

ಮಧುಶ್ರೀ ಅಂಗಡಿ ಗದಗ ತಾಲೂಕಿನ ನಾರಾಯಣಪುರ ಗ್ರಾಮದ ನಿವಾಸಿ. ಅದೇ ಗ್ರಾಮದ ಸತೀಶ್ ಹಿರೇಮಠ ಎನ್ನುವಾತನ ಜೊತೆಗೆ ಪ್ರೀತಿಸುತ್ತಿದ್ದಳು. ಐದಾರು ವರ್ಷ ಇಬ್ಬರು ಪರಸ್ಪರ ಪ್ರೀತಿ ಮಾಡುತ್ತಿದ್ದರು. ಆದರೆ ಮಧುಶ್ರೀ ಕುಟುಂಬಸ್ಥರಿಗೆ ಈ ಪ್ರೀತಿ ಪ್ರೇಮದ ವಿಷಯ ಗೊತ್ತಾಗಿದೆ. ಹೀಗಾಗಿ ಗದಗನಲ್ಲಿ ಅವರ ಸಂಬಂಧಿಕರ ಮನೆಯಲ್ಲಿ ಬಿಟ್ಟಿದ್ದರು. ಕೆಲವು ತಿಂಗಳು ಕಾಲ ದೂರ ಇದ್ದ ಈ ಜೋಡಿ ಪುನಃ ಒಂದಾಗಿತ್ತು. ಅದು 2024 ಡಿಸೆಂಬರ್ 16ರ ರಾತ್ರಿ ಮಧುಶ್ರೀ ಗದಗ ನಗರದ ಅವರ ಸಂಬಂಧಿಕರ ಮನೆಯಿಂದ ನಾಪತ್ತೆಯಾಗಿದ್ದಳು. ಸಂಬಂಧಿಕರು ಎಲ್ಲಾ ಕಡೆ ಹುಡುಕಾಟ ನಡೆಸಿ ಕೊನೆಗೆ 2025 ಜನವರಿ 12ರಂದು ಬೆಟಗೇರಿ ಬಡಾವಣೆ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣವನ್ನು ದಾಖಲಿಸಿದ್ದರು. ಆಗ ಪೊಲೀಸರು ಸತೀಶ್ ಮೇಲೆ ಅನುಮಾನದಿಂದ ವಿಚಾರಣೆ ಆರಂಭ ಮಾಡಿದ್ದು, ನನಗೆ ಏನು ಗೊತ್ತಿಲ್ಲ ಎಂದು ನಾಟಕ ಮಾಡಿದ್ದ.



**ಕೇಸಿಗೆ ಟ್ವಿಸ್ಟ್ ಕೊಟ್ಟ ಆ ಒಂದು ಮೆಸೇಜ್**

ಅಷ್ಟರಲ್ಲಿ ಇಬ್ಬರು ಒಂದೇ ಬೈಕ್‌ನಲ್ಲಿ ಹೋಗಿರುವ ಸಿಸಿಟಿವಿ ವಿಡಿಯೋ ಸಹ ಸಿಕ್ಕಿತ್ತು. ಇದರ ಆಧಾರದ ಮೇಲೆ ಪೊಲೀಸರು ಮತ್ತೆ ಸತೀಶ್‌ನನ್ನು ವಿಚಾರಣೆಗೆ ಒಳಪಡಿಸಿದ್ದರು. ಆಗ ಬೈಕ್ ಮೇಲೆ ಇಬ್ಬರು ಹೋಗಿದ್ದು ನಿಜ. ಆದರೆ, ಮಧುಶ್ರೀಯನ್ನು ಹಾತಲಗೇರಿ ಗ್ರಾಮದ ಬಳಿ ಬಿಟ್ಟು ನಾನು ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕೆ ಹೋಗಿದ್ದೇನೆ. ಅವಳು ಎಲ್ಲಿಗೆ ಹೋಗಿದ್ದಳೆಂದು ಗೊತ್ತಿಲ್ಲ ಎಂದಿದ್ದ. ಆಗ ಪೊಲೀಸರು ಸತೀಶ್‌ನನ್ನು ಬಿಟ್ಟು ಕಳಿಸಿದ್ದರು. ಕೆಲವು ದಿನಗಳ ನಂತರ ಸತೀಶ್‌ನ ಮೊಬೈಲ್ ಒಂದು ಕಂಪನಿ ಮೆಸೇಜ್ ಬಂದಿತ್ತು. ಆಗಲೇ ನಾಪತ್ತೆ ಕೇಸ್‌ಗೆ ಟ್ವಿಸ್ಟ್ ಸಿಕ್ಕಿದ್ದು. ಈ ಮೆಸೇಜ್ ಜಾಡು ಹಿಡಿದು ಹೋದ ಪೊಲೀಸರಿಗೆ ಸತೀಶನ ನೌಟಂಕಿ ಆಟ ಗೊತ್ತಾಗಿದೆ. ಸತೀಶನ ಮೊಬೈಲ್‌ಗೆ ಬಂದಿದ್ದ ಲೊಕೇಶನ್ ಬೇರೆಯಾಗಿತ್ತು. ಆಗ ಪೊಲೀಸರು ಸತೀಶ್‌ಗೆ ತಮ್ಮದೇಯಾದ ಸ್ಟೈಲ್‌ನಲ್ಲಿ ವಿಚಾರಣೆ ಮಾಡಿದಾಗ ಕೊಲೆ ರಹಸ್ಯ ಬಯಲಿಗೆ ಬಂದಿದೆ.

ಅಂದಹಾಗೇ 2024 ಡಿಸೆಂಬರ್ 16ರಂದು ಪ್ರೇಯಸಿ ಮಧುಶ್ರೀಯನ್ನು ಕರೆದುಕೊಂಡು ಗದಗ ತಾಲೂಕಿನ ನಾರಾಯಣಪುರ ಗ್ರಾಮದ ಹೊರವಲಯದ, ತಮ್ಮ ಜಮೀನಿಗೆ ಹೋಗಿದ್ದ. ಆಗ ಮಧುಶ್ರೀ ಮದುವೆಯಾಗು ಎಂದು ಹಠ ಹಿಡಿದಿದ್ದಾಳೆ. ಇದರಿಂದ ಇಬ್ಬರ ನಡುವೆ ಜಗಳವಾಗಿದ್ದು, ಗಲಾಟೆ ವಿಕೋಪಕ್ಕೆ ಹೋಗಿದೆ. ರೊಚ್ಚಿಗೆದ್ದ ಸತೀಶ್ ಮಧುಶ್ರೀಯ ವೇಲ್ ನಿಂದ ಕುತ್ತಿಗೆಗೆ ಬಿಗಿದು, ಕೊಲೆ ಮಾಡಿದ್ದಾನೆ. ನಂತರ ಪಕ್ಕದ ಹಳ್ಳದಲ್ಲಿ ಅವಳ ಶವವನ್ನು ಹೂತು ಹಾಕಿ, ಏನೂ ಗೊತ್ತಿಲ್ಲದ ರೀತಿ ಇದ್ದ.

ಆಗಾಗ ಬಂದು ಎಲುಬುಗಳನ್ನು ಬೇರೆ ಕಡೆ ಹಾಕಿ, ಸಾಕ್ಷಿ ನಾಶ ಮಾಡಲು ಪ್ರಯತ್ನ ಮಾಡುತ್ತಿದ್ದ. ಆದರೆ, ಅಂದು ಸ್ವಿಚ್ ಆಫ್ ಆದ ಮೊಬೈಲ್‌ಗೆ ಕಂಪನಿಯ ಒಂದು ಮೆಸೇಜ್ ಬಂದಿದ್ದು, ಆರೋಪಿ ಸತೀಶ್ ಹೇಳೋ ಲೊಕೇಶನ್ ಬೇರೆ, ಮೊಬೈಲ್‌ಗೆ ಬಂದಿರೋ ಮೆಸೇಜ್ ಲೊಕೇಶನ್ ಬೇರೆಯಾಗಿತ್ತು. ಹೀಗಾಗಿ ಕೇಸ್ ಬೆನ್ನತ್ತಿದ ಬಡಾವಣೆ ಪೊಲೀಸ್ ಠಾಣೆ ಪಿಎಸ್‌ಐ ಮಾರುತಿ, ಪೊಲೀಸ್ ಸ್ಟೈಲ್‌ನಲ್ಲಿ ವಿಚಾರಣೆ ಮಾಡಿದಾಗ ಕೊಲೆ ಕೃತ್ಯವನ್ನು ಒಪ್ಪಿಕೊಂಡಿದ್ದಾನೆ. ಬಳಿಕ ಶವವನ್ನು ಹೂತು ಹಾಕಿದ ಜಾಗವನ್ನು ತೋರಿಸಿದ್ದಾನೆ. ಸದ್ಯ ದೇಹದ ಕೆಲವು ಎಲುಬು ಸಿಕ್ಕಿದ್ದು ಇನ್ನೂ ಅವಳ ರುಂಡ ಸಿಕ್ಕಿಲ್ಲ. ಹೀಗಾಗಿ ಪೊಲೀಸರು ರುಂಡಕ್ಕಾಗಿ ಶೋಧ ನಡೆಸಿದ್ದಾರೆ.

ಪೊಲೀಸರು ಮಧುಶ್ರೀ ಶವದ ಅವಶೇಷಗಳನ್ನು ಹಳ್ಳದಲ್ಲಿ ಪತ್ತೆ ಮಾಡಿದ್ದಾರೆ. ಡಿಎನ್‌ಎ ಪರೀಕ್ಷೆ ಮಾಡಲು ಕಳುಹಿಸುತ್ತಿದ್ದಾರೆ. ಮದುವೆಯಾಗು ಎಂದಿದ್ದಕ್ಕೆ ಪ್ರಿಯಕರ ಸತೀಶ್ ಪ್ರೆಯಸಿ ಮಧುಶ್ರೀಯನ್ನು ಕೊಲೆ ಮಾಡಿ, ದೃಶ್ಯ ಸಿನಿಮಾ ಮಾದರಿಯಲ್ಲಿ ಸಾಕ್ಷಿ ನಾಶ ಮಾಡಲು ಪ್ರಯತ್ನಿಸಿದ್ದ ಆದರೆ ಅದೊಂದು ಮೆಸೇಜ್ ಆರು ತಿಂಗಳ ನಂತರ ಕೊಲೆಯ ರಹಸ್ಯವನ್ನು ಬಯಲು ಮಾಡಿದೆ. ಪೊಲೀಸರ ಈ ಕಾರ್ಯಾಚರಣೆ ಹ್ಯಾಟ್ಸಾಫ್ ಹೇಳಲೇ ಬೇಕು. ☯

# ಜಮೀನಿನ ವಿವಾದಕ್ಕೆ ವೃದ್ಧ ಮಲ್ಲಪ್ಪನ ಹೆಣ ಉರುಳಿತು!

5 ☜

ಅಷ್ಟಕ್ಕೆ ನಾನು ನಮ್ಮ ತಂದೆಯ ಬಳಿ ಹೋಗಿ ನೋಡಲಾಗಿ ನಮ್ಮ ತಂದೆಗೆ ತೀವ್ರ ರಕ್ತಸ್ರಾವವಾಗಿತ್ತು. ಅಷ್ಟಕ್ಕೆ ನಮ್ಮೂರಿನ ಕಾಳಪ್ಪನ ಮಗ ನಿಂಗಪ್ಪ ಮತ್ತು ಆತನ ಹೆಂಡತಿ ನಾಗಮ್ಮರವರುಗಳು ಬಂದು ನಮ್ಮ ತಂದೆಗೆ ನೀರು ಕುಡಿಸಿದರು. ಅಷ್ಟಕ್ಕೆ ವಿಷಯ ತಿಳಿದು ನಮ್ಮ ತಾಯಿ ಮಹದೇವಮ್ಮರವರು ಸ್ಥಳಕ್ಕೆ ಬಂದರು. ತಕ್ಷಣ ನಾನು 112 ಗೆ ಫೋನ್ ಮಾಡಿ ಬರಮಾಡಿಕೊಂಡು, ಪೊಲೀಸ್‌ರವರ ಸಹಾಯದಿಂದ 112 ವಾಹನದಲ್ಲಿಯೇ ನಮ್ಮ ತಂದೆ ಮಲ್ಲಪ್ಪರವರನ್ನು ಹಾಕಿಕೊಂಡು ಚಾಮರಾಜನಗರ ಸಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಬಂದು ವೈದ್ಯರ ಬಳಿ ನಮ್ಮ ತಂದೆಯನ್ನು ತೋರಿಸಲಾಗಿ ವೈದ್ಯರು ನಮ್ಮ ತಂದೆಯನ್ನು ಪರೀಕ್ಷಿಸಿ ನಮ್ಮ ತಂದೆ ಮೃತಪಟ್ಟಿರುವುದಾಗಿ ತಿಳಿಸಿದರು. ಈಗ ನಮ್ಮ ತಂದೆಯ ಶವವು ಸಿಮ್ಸ್ ಆಸ್ಪತ್ರೆಯ ಶವಾಗಾರದಲ್ಲಿರುತ್ತದೆ. ಆದ್ದರಿಂದ ನಮ್ಮ ತಂದೆಯನ್ನು ಕೊಲೆ ಮಾಡಿರುವ ಮೇಲ್ಕಂಡ ನಾಗಪ್ಪ, ಆತನ ಅಳಿಯ ನಾಗರಾಜು, ಆತನ ಮಕ್ಕಳಾದ ದೊರೆಸ್ವಾಮಿ, ಮೀನಾ ಹಾಗೂ ಇದಕ್ಕೆ ಕುಮ್ಮಕ್ಕು ನೀಡಿರುವ ಅಂಗಡಿ ದೊಡ್ಡಪ್ಪ ಮತ್ತು ಚಿಕ್ಕಮಾದಪ್ಪರವರುಗಳ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳಬೇಕೆಂದು ನೀಡಿರುವ ದೂರಿನ ಮೇರೆಗೆ ವಡ್ಗಲ್ ಪುರ ಗ್ರಾಮದ ಚಿಕ್ಕಣ್ಣಪ್ಪನ ಮಗ ನಾಗಪ್ಪ, ನಾಗಪ್ಪನ ಮಗ ದೊರೆಸ್ವಾಮಿ, 38 ವರ್ಷ, ನಾಗಪ್ಪನ ಮಗಳು ಉಡಿಗಾಲ ಗ್ರಾಮದ ಮೀನಾ ಕೋಂ ನಾಗರಾಜು 36 ವರ್ಷ, ಆಕೆಯ ಪತಿ ನಾಗರಾಜು ಬಿನ್ ಮಹದೇವಪ್ಪ 38 ವರ್ಷ, ಹಾಲಿ ವಾಸ ವಡ್ಗಲ್‌ಪುರ ಗ್ರಾಮ, ಗುರುಮಲ್ಲಪ್ಪನ ಮಗ ಅಂಗಡಿ ದೊಡ್ಡಪ್ಪ, ಚಿನ್ನಪ್ಪನ ಮಗ ಚಿಕ್ಕಮಾದಪ್ಪರವರ ವಿರುದ್ಧ ಚಾಮರಾಜನಗರ ಗ್ರಾಮಾಂತರ ಠಾಣೆ ಪೊಲೀಸರು ಠಾಣೆ ಮೊಕದ್ದಮೆ ಸಂಖ್ಯೆ 97/2025 ಕಲಂ 189(2), 191 (2), 191 (3), 352, 54, 103, ರೆ/ವಿ 190 ಬಿಎನ್‌ಎಸ್ ರೀತ್ಯಾ ಪ್ರಕರಣ ದಾಖಲಿಸಿಕೊಂಡಿದ್ದಾರೆ.


ಪಂಚನಾಮೆ ನಡೆಸುತ್ತಿರುವುದು

ಪ್ರಕರಣ ದಾಖಲಿಸಿಕೊಂಡ ಕೂಡಲೇ ಕಾರ್ಯಪ್ರವೃತ್ತರಾದ ಗ್ರಾಮಾಂತರ ಠಾಣೆ ಆರಕ್ಷಕ ನಿರೀಕ್ಷಕ ಪಿ.ಎನ್. ಶೇಷಾದ್ರಿರವರು ಚಾಮರಾಜನಗರ ಜಿಲ್ಲಾಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತರವರ ಮಾರ್ಗದರ್ಶನದಲ್ಲಿ ಚಾಮರಾಜನಗರ ಡಿವೈಎಸ್ಪಿ ಗಂಗಾಧರರವರ ನೇತೃತ್ವದಲ್ಲಿ ಗ್ರಾಮಾಂತರ ಠಾಣೆ ಆರಕ್ಷಕ ಉಪ ನಿರೀಕ್ಷಕಿ ರುಬೇನ ಬೇಗಂರವರನ್ನೊಳಗೊಂಡ ತಂಡ ರಚಿಸಿ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದರು. ಈ ತಂಡ ಆರೋಪಿಗಳನ್ನು ಬಂಧಿಸಿ ಕರೆತಂದು ಆರಕ್ಷಕ ನಿರೀಕ್ಷಕ ಪಿ.ಎನ್. ಶೇಷಾದ್ರಿರವರ ಮುಂದೆ ನಿಲ್ಲಿಸುತ್ತಾರೆ. ಬಳಿಕ ಪಿ.ಎನ್. ಶೇಷಾದ್ರಿರವರು ಆರೋಪಿಗಳನ್ನು ವಿಚಾರಣೆ ನಡೆಸಿದಾಗ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ. ನಂತರ ಆರೋಪಿಯ ಹೇಳಿಕೆ ದಾಖಲಿಸಿಕೊಂಡು ಜೈಲಿಗೆ ಬಿಟ್ಟು ಬಂದು ಪ್ರಕರಣದ ತನಿಖೆ ಮುಂದುವರೆಸಿದ್ದಾರೆ.

ಒಟ್ಟಿನಲ್ಲಿ ಜಮೀನಿನ ವಿಚಾರಕ್ಕೆ ಎರಡು ಕುಟುಂಬಗಳ ನಡುವೆ ನಿರಂತರವಾಗಿ ನಡೆಯುತ್ತಿದ್ದ ಜಗಳ ಹೆಣ ಬೀಳುವ ಮಟ್ಟಿಗೆ ವಿಕೋಪಕ್ಕೆ ತಿರುಗಿರುವುದು ದೊಡ್ಡ ದುರಂತವೇ ಸರಿ. ☯

ಇರಾನ್ ಆಕಾಶದ ಮೇಲೆ ಇಸ್ರೇಲ್‌ಗೆ ಸಂಪೂರ್ಣ ನಿಯಂತ್ರಣವಿದೆ ಎಂದು ಇಸ್ರೇಲ್ ಹೇಳಿಕೊಂಡಿದ್ದರೆ, ಟೆಲ್ ಅವಿವ್‌ನಲ್ಲಿರುವ ಪ್ರಮುಖ ಗುಪ್ತಚರ ಕೇಂದ್ರದ ಮೇಲೆ ದಾಳಿ ನಡೆಸಿದೆ ಎಂದು ಇರಾನ್ ಹೇಳಿದೆ. ನಾಗರಿಕ ಮತ್ತು ಮಿಲಿಟರಿ ಗುರಿಗಳ ಮೇಲೆ ದಾಳಿಗಳು ನಡೆದಿವೆ ಎಂದು ಇಸ್ರೇಲಿ ಮೂಲಗಳು ದೃಢಪಡಿಸಿವೆ.

ಇರಾನ್‌ನ ಪರಮಾಣು ನೆಲೆಗಳನ್ನು ಗುರಿಯಾಗಿಸಿಕೊಂಡು ಇಸ್ರೇಲ್ ದಾಳಿ ನಡೆಸಿರುವ ಬಗ್ಗೆ ವರದಿಯಾಗಿದೆ. ಇರಾನ್ ಮೇಲಿನ ಇಸ್ರೇಲಿ ದಾಳಿಗಳಲ್ಲಿ ಕನಿಷ್ಠ 585 ಜನರು ಸಾವನ್ನಪ್ಪಿದ್ದಾರೆ ಮತ್ತು 1,326 ಜನರು ಗಾಯಗೊಂಡಿದ್ದಾರೆ ಎಂದು ಅಸೋಸಿಯೇಟೆಡ್ ಪ್ರೆಸ್ ವರದಿ ಮಾಡಿದೆ.



**ಮಧ್ಯಪ್ರಾಚ್ಯ ದಶಕಗಳಾದ ಇಸ್ರೇಲ್ ಹಾಗೂ ಇರಾನ್ ನಡುವಿನ ಕದನ ಬುಧವಾರ 6ನೇ ದಿನಕ್ಕೆ ಕಾಲಿಟ್ಟಿದ್ದು, ಎರಡು ದೇಶಗಳ ನಡುವಿನ ಸಂಘರ್ಷ ತಾರಕಕ್ಕೇರಿದೆ. ಈ ಮಧ್ಯೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್‌ಗೆ ಬೇಷರತ್ತಾಗಿ ಶರಣಾಗುವಂತೆ ಕರೆ ನೀಡಿದ್ದು, ಈ ಕರೆಯನ್ನು ಇರಾನ್ ಧಿಕ್ಕರಿಸಿದ್ದು, ಇಸ್ರೇಲ್ ಮೇಲೆ ಕ್ಷಿಪಣಿ ದಾಳಿಯನ್ನು ಮುಂದುವರಿಸಿದೆ.**

# ಇರಾನ್-ಇಸ್ರೇಲ್ ವಾರ್!

## ಒಂದು ಕಾಲದ ದೋಸ್ತಿಗಳು ದುಷ್ಮನ್ ಆಗಿದ್ದೇಕೆ?

ಇರಾನ್‌ಗೆ ಯುದ್ಧ ನಿಲ್ಲಿಸಿ ಬೇಷರತ್ತಾಗಿ ಶರಣಾಗುವಂತೆ ಇರಾನ್‌ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇರವಾಗಿ ಎಚ್ಚರಿಕೆ ನೀಡಿದ್ದಾರೆ. ಅಮೆರಿಕದ



ತಾಳ್ಮೆ ಕ್ಷೀಣಿಸುತ್ತಿದೆ ಎಂದು ಮಂಗಳವಾರ ಸಾಮಾಜಿಕ ಮಾಧ್ಯಮದಲ್ಲಿ ಎಚ್ಚರಿಸಿರುವ ಟ್ರಂಪ್, ಇರಾನ್ ಬೇಷರತ್ತಾಗಿ ಶರಣಾಗಬೇಕು ಇಲ್ಲವಾದಲ್ಲಿ ಪರಿಸ್ಥಿತಿ ನೆಟ್ಟಗಿರಲ್ಲ ಎಂದು ಹೇಳಿದ್ದಾರೆ. ಈ ಮಧ್ಯೆ ಇರಾನಿನ ದಾಳಿಗಳಿಂದ ಇಸ್ರೇಲ್ ಅನ್ನು ರಕ್ಷಿಸಲು ಮತ್ತು ಅಮೆರಿಕದ ಮಿಲಿಟರಿ ಸ್ಥಾಪನೆಗಳನ್ನು ಗುರಿಯಾಗಿಸುವ ಇರಾನ್‌ನ ದಾಳಿಗೆ ಪ್ರತಿಕ್ರಿಯಿಸಲು ಅಮೆರಿಕವು ಮಧ್ಯಪ್ರಾಚ್ಯಕ್ಕೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಮಿಲಿಟರಿ ವಿಮಾನಗಳು ಮತ್ತು ಯುದ್ಧನೌಕೆಗಳನ್ನು ಸ್ಥಳಾಂತರಿಸುತ್ತಿದೆ.



### ಟೆಹ್ರಾನ್‌ನಲ್ಲಿ ಸ್ಮಶಾನ ಮೌನ

ಇಸ್ರೇಲ್ ದಾಳಿಯಿಂದ ಇರಾನ್‌ನ ರಾಜಧಾನಿ ಟೆಹ್ರಾನ್ ಅಕ್ಷರಶಃ ಕಂಗೆಟ್ಟಿದೆ. ಮಧ್ಯಪ್ರಾಚ್ಯದ ಅತಿದೊಡ್ಡ ನಗರಗಳಲ್ಲಿ ಒಂದಾದ ಟೆಹ್ರಾನ್ ಸುಮಾರು 10 ದಶಲಕ್ಷ ಜನರನ್ನು ಹೊಂದಿದೆ. ಇದು ಸರಿಸುಮಾರು ಇಸ್ರೇಲ್‌ನ ಸಂಪೂರ್ಣ ಜನಸಂಖ್ಯೆಗೆ ಸಮನಾಗಿರುತ್ತದೆ. ಯುದ್ಧ ಪ್ರಾರಂಭವಾದಾಗಿನಿಂದ ಜನರು ಟೆಹ್ರಾನ್‌ನಿಂದ ಪಲಾಯನ ಮಾಡುತ್ತಿದ್ದಾರೆ. ನಗರದಲ್ಲಿ ಸ್ಮಶಾನ ಮೌನ ಆವರಿಸಿದೆ. ಅನೇಕ ಅಂಗಡಿಗಳು ಮುಚ್ಚಲ್ಪಟ್ಟಿವೆ. ಜನರು ತಮ್ಮ ಪ್ರಾಣ ಉಳಿದರೆ ಸಾಕು ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಇದೀಗ ಭಾರತವು ಇರಾನ್‌ನಲ್ಲಿರುವ ನಮ್ಮ ವಿದ್ಯಾರ್ಥಿಗಳನ್ನು ಸ್ಥಳಾಂತರಿಸಿ ದೇಶಕ್ಕೆ ಹಿಂತಿರುಗಲು ವ್ಯವಸ್ಥೆ ಮಾಡಿದೆ.

### ಜಿ7 ಶೃಂಗಸಭೆಯ ಮೇಲೆ ಎಲ್ಲರ ಕಣ್ಣು!

ಇಸ್ರೇಲ್ ಮತ್ತು ಇರಾನ್ ನಡುವೆ ನಿರ್ಮಾಣವಾಗಿರುವ ಉದ್ವಿಗ್ನತೆ ಮತ್ತು ಒತ್ತಡವನ್ನು ನಿವಾರಿಸುವ ಗುರಿಯೊಂದಿಗೆ ಜಿ7 ಶೃಂಗಸಭೆಯಲ್ಲಿ ಭಾಗವಹಿಸಲು ವಿಶ್ವನಾಯಕರು ಕೆನಡಾದಲ್ಲಿ ಸಭೆ ಸೇರಿದ್ದಾರೆ. ಇಸ್ರೇಲ್ ಮತ್ತು ಇರಾನ್ ನಡುವೆ ಕದನ ವಿರಾಮದ ನಿರೀಕ್ಷೆಯನ್ನು ಪರಿಗಣಿಸುತ್ತಿರುವುದಾಗಿ ಟ್ರಂಪ್ ಜಿ7 ನಾಯಕರಿಗೆ ತಿಳಿಸಿದ್ದಾರೆ ಎಂದು ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಹೇಳಿದ್ದಾರೆ. "ವಿಶೇಷವಾಗಿ ಕದನ ವಿರಾಮವನ್ನು ಪಡೆಯಲು ಮತ್ತು ನಂತರ ವಿಶಾಲವಾದ ಚರ್ಚೆಗಳನ್ನು ಪ್ರಾರಂಭಿಸಲು ಒಂದು ಪ್ರಸ್ತಾಪವನ್ನು ನೀಡಲಾಯಿತು" ಎಂದು ಮ್ಯಾಕ್ರನ್ ಹೇಳಿದ್ದಾರೆ.

### ಒಂದು ಕಾಲದ ದೋಸ್ತಿಗಳು!

ಈ ಎರಡೂ ದೇಶಗಳು ಒಂದು ಕಾಲದಲ್ಲಿ ಉತ್ತಮ ಸ್ನೇಹಿತರು ಎಂಬ ವಿಚಾರ ಹಲವರಿಗೆ ತಿಳಿದಿಲ್ಲ. 1948ರಲ್ಲಿ ಇಸ್ರೇಲ್ ಸ್ಥಾಪನೆಯಾದಾಗ, ಮುಸ್ಲಿಂ ಬಹುಸಂಖ್ಯಾತ ಪಶ್ಚಿಮ ಏಷ್ಯಾದ ದೇಶಗಳು ಇಸ್ರೇಲ್ ಅನ್ನು ಒಂದು ದೇಶ ಎಂದು ಗುರುತಿಸಲು ನಿರಾಕರಿಸಿದವು. ಆದಾಗ್ಯೂ, ಶಿಯಾ ಮುಸ್ಲಿಂ ಬಹುಸಂಖ್ಯಾತ ಇರಾನ್ ಮತ್ತು ಟರ್ಕಿ ಇಸ್ರೇಲ್ ಅನ್ನು ದೇಶವಾಗಿ ಗುರುತಿಸಿದವು. ಇದಕ್ಕೆ ಒಂದು ಕಾರಣ ಎರಡೂ ದೇಶಗಳು ಅಮೆರಿಕದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದವು.

ಆ ಸಮಯದಲ್ಲಿ, ಇರಾನ್ ಅನ್ನು ಶಾ ಮೊಹಮ್ಮದ್ ರೆಜಾ ಪಹ್ಲವಿ ಆಳುತ್ತಿದ್ದರು. ಶೀತಲ ಸಮರದ ಸಮಯದಲ್ಲಿ ಇರಾನ್, ಯುನೈಟೆಡ್ ಸ್ಟೇಟ್ಸ್‌ನ ಪ್ರಮುಖ ಮಿತ್ರ ರಾಷ್ಟ್ರವಾಗಿತ್ತು. ಮುಂದಿನ ಎರಡು ದಶಕಗಳ ಕಾಲ, ಮಾಜಿ ಇಸ್ರೇಲ್ ಪ್ರಧಾನಿ ಡೇವಿಡ್ ಬೆನ್-ಗುರಿಯನ್ ತಮ್ಮ 'ಪರಿಧಿ ಸಿದ್ಧಾಂತ'ದ ಮೂಲಕ ಅರಬ್ ಅಲ್ಲದ ದೇಶಗಳೊಂದಿಗೆ ಮೈತ್ರಿ ಮಾಡಿಕೊಳ್ಳಲು ಪ್ರಯತ್ನಿಸಿದರು. ಇಸ್ರೇಲ್ ಇರಾನ್, ಟರ್ಕಿ ಮತ್ತು ಇಥಿಯೋಪಿಯಾದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿತ್ತು. ಒಂದು ಹಂತದಲ್ಲಿ, ಇಸ್ರೇಲಿ ಗೂಢಚಾರ ಸಂಸ್ಥೆ ಮೊಸಾದ್ ಮತ್ತು ಇರಾನಿನ ಖಚಡಚು ಶಸ್ತ್ರಾಸ್ತ್ರ ಮಾರಾಟ ಮತ್ತು ಗುಪ್ತಚರ ಹಂಚಿಕೆಯನ್ನು ಹೆಚ್ಚಿಸಲು ಬಯಸಿದ್ದವು. ಅರಬ್ ದೇಶಗಳೊಂದಿಗೆ 'ಆರು ದಿನಗಳ ಯುದ್ಧ'ದ ನಂತರ ಇರಾನ್ ಇಸ್ರೇಲ್‌ಗೆ ತೈಲವನ್ನು ಪೂರೈಸುವುದನ್ನು ಮುಂದುವರೆಸಿತು. ಇದಕ್ಕೆ ಪ್ರತಿಯಾಗಿ ಇಸ್ರೇಲ್ ಇರಾನ್‌ನಲ್ಲಿ ವ್ಯಾಪಾರ ಮತ್ತು ಮೂಲಸೌಕರ್ಯವನ್ನು ಬೆಂಬಲಿಸಿತು.





### ದೋಸ್ತಿ ದುಷ್ಮನಿಗೆ ತಿರುಗಿದ್ದು...

ಎಲ್ಲವೂ ಚೆನ್ನಾಗಿ ನಡೆಯುತ್ತಿರುವಾಗ, 1979ರಲ್ಲಿ ಇರಾನ್‌ನಲ್ಲಿ 'ಇಸ್ಲಾಮಿಕ್ ಕ್ರಾಂತಿ'ಯ ನಂತರ ಇಸ್ರೇಲ್‌ನೊಂದಿಗಿನ ಇರಾನ್‌ನ ಸಂಬಂಧಗಳು ಬದಲಾದವು. ಶಾ ಮೊಹಮ್ಮದ್ ತನ್ನ ಸ್ಥಾನವನ್ನು ಕಳೆದುಕೊಂಡರು. ಅಯತೊಲ್ಲಾ ರುಹೊಲ್ಲಾ ಖಮೇನಿ ನೇತೃತ್ವದಲ್ಲಿ ಇರಾನ್ ಇಸ್ಲಾಮಿಕ್ ಗಣರಾಜ್ಯವಾಗಿ ಸ್ಥಾಪಿಸಲ್ಪಟ್ಟಿತು. ಎರಡೂ ದೇಶಗಳ ಸ್ಲಾಮಿಕ್ ಅಂಶಗಳು ಮತ್ತು ಪ್ಯಾಲೆಸ್ತೀನ್ ಪರ ಇರಾನ್ ವಕಾಲತ್ತು ವಹಿಸಿದ್ದು ಇಬ್ಬರ ನಡುವಿನ ಗೆಳೆತನ ಹಗೆತನಕ್ಕೆ ತಿರುಗಿತು. ಇರಾನ್, ಇಸ್ರೇಲಿ ಪಾಸ್‌ಪೋರ್ಟ್‌ಗಳನ್ನು ಸ್ವೀಕರಿಸಲು ನಿರಾಕರಿಸಿತು. ಇರಾನ್‌ಷ ಇಸ್ರೇಲ್ ಅನ್ನು 'ಇಸ್ಲಾಂನ ಶತ್ರು' ಮತ್ತು 'ಪುಟ್ಟ ದೆವ್ವ' ಎಂದು ಬಣ್ಣಿಸಿತು.

ಇದರ ಜೊತೆಗೆ, ಇರಾನ್ ಪ್ಯಾಲೆಸ್ತೀನ್‌ನಲ್ಲಿ ಹಮಾಸ್, ಲೆಬನಾನ್‌ನಲ್ಲಿ ಹೆಜ್ಬೊಲ್ಲಾ ಮತ್ತು ಯೆಮೆನ್‌ನಲ್ಲಿ ಹೌತಿಗಳಂತಹ ಪ್ರಾಕ್ಸಿಗಳನ್ನು ಪೋಷಿಸಿತು. 1983ರಲ್ಲಿ ಹೆಜ್ಬೊಲ್ಲಾ ಲೆಬನಾನ್‌ನಲ್ಲಿರುವ ಇಸ್ರೇಲಿ ಮಿಲಿಟರಿ ಪ್ರಧಾನ ಕಚೇರಿಯ ಮುಂದೆ ಆತ್ಮಾಹತ್ಯಾ ದಾಳಿ ನಡೆಸಿತು. ಈ ದಾಳಿಯು ಇಸ್ರೇಲ್ ಮತ್ತು ಪಾಶ್ಚಿಮಾತ್ಯ ದೇಶಗಳನ್ನು ಲೆಬನಾನ್‌ನಿಂದ ಹೊರಹೋಗುವಂತೆ ಮಾಡಿತು.

2020ರ ಡಿಸೆಂಬರ್ ತಿಂಗಳಲ್ಲಿ ಇರಾನ್‌ನ ಪ್ರಸ್ತುತ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ, ಇಸ್ರೇಲ್ ಅನ್ನು 'ಕ್ಯಾನ್ಸರ್ ಗೆಡ್ಡೆ' ಎಂದು ಬಣ್ಣಿಸಿದರು ಮತ್ತು ಅದನ್ನು ತೆಗೆದು ಹಾಕಬೇಕೆಂದು ಕರೆ ನೀಡಿದರು. 2023ರಲ್ಲಿ ಇಸ್ರೇಲ್ ಮೇಲೆ ಹಮಾಸ್ ದಾಳಿಯೊಂದಿಗೆ ಈ ಪ್ರದೇಶದಲ್ಲಿ ಉದ್ವಿಗ್ನತೆ ಪ್ರಾರಂಭವಾಯಿತು. ಆದಾಗ್ಯೂ, ಇರಾನ್ ಈ ದಾಳಿಯ ಹಿಂದೆ ಇತ್ತು ಮತ್ತು ಅದಕ್ಕೆ ಆದೇಶ ನೀಡಿತು ಎಂಬುದು ಇಸ್ರೇಲ್‌ನ ಪ್ರಮುಖ ಆರೋಪವಾಗಿದೆ. ಇದಲ್ಲದೆ, ಇರಾನ್ ಪರಮಾಣು ಶಸ್ತ್ರಾಸ್ತ್ರಗಳಿಂದ ದೂರದಲ್ಲಿದೆ ಎಂದು ಗುಪ್ತಚರ ವರದಿ ಮಾಡಿದ ನಂತರ ಇಸ್ರೇಲ್ ಇರಾನ್ ವಿರುದ್ಧ ವಾಗ್ದಾಳಿ ನಡೆಸುತ್ತಿದೆ. ಯಾವುದೇ ಅರಬ್ ದೇಶವು ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿರಬಾರದು ಎಂಬುದು ಇಸ್ರೇಲ್‌ನ ನೀತಿಯಾಗಿದೆ. ಇದು ತನ್ನ ಅಸ್ತಿತ್ವಕ್ಕೆ ಅಪಾಯವನ್ನುಂಟು ಮಾಡುತ್ತದೆ ಎಂದು ಅದು ನಂಬುತ್ತದೆ.

### ಸಾಂಖಿಕ ದೃಷ್ಟಿಯಿಂದ ಇರಾನ್ ದೊಡ್ಡದು...

ಸಂಖ್ಯಾತ್ಮಕವಾಗಿ ಇರಾನ್‌ಗೆ ಸ್ಪಷ್ಟವಾದ ಮುನ್ನಡೆ ಇದೆ. ಅವರ ಜನಸಂಖ್ಯೆ 88 ಮಿಲಿಯನ್, ಭೂಪ್ರದೇಶವೂ ವಿಶಾಲವಾಗಿದೆ. ಆದರೆ ಇಸ್ರೇಲ್ ಜನಸಂಖ್ಯೆ ಕೇವಲ 9 ಮಿಲಿಯನ್ ಹಾಗೂ ಭೂಪ್ರದೇಶ ಸಣ್ಣದು. ಆದರೆ ಕೇವಲ ಸಂಖ್ಯೆಗಳು ಸಾಕಾಗುವುದಿಲ್ಲ. ಇರಾನ್ ಸೇನೆಯನ್ನು ಸಾಂಪ್ರದಾಯಿಕ ಸೇನೆ (ಸಾಧಾರಣ ಯುದ್ಧ ಹಾಗೂ ಗಡಿರಕ್ಷಣೆ) ಮತ್ತು ಕ್ರಾಂತಿಕಾರಿ ಗಾರ್ಡ್ (ಕ್ಷಿಫಿಠ ಊಟ್ಟಛಿ, ಕ್ಷಿಪಣಿ ವಿಭಾಗ, ಸೈಬರ್ ಆಪರೇಷನ್‌ಗಳು) ಎಂದು ಎರುಡ ಭಾಗಗಳಾಗಿ ವಿಭಜಿಸಲಾಗಿದೆ. ಸಾಮಾನ್ಯ ಸೇನೆಗೆ ಸುಮಾರು 6 ಲಕ್ಷ ಸೈನಿಕರಿದ್ದರೆ, ಗಾರ್ಡ್‌ನಲ್ಲಿ 2 ಲಕ್ಷ ಸೈನಿಕರಿದ್ದಾರೆ. ಗಾರ್ಡ್ ವಿಶೇಷವಾಗಿ ಅಸಮಾನ ಯುದ್ಧ ತಂತ್ರ ಮತ್ತು ಪ್ರಾಕ್ಸಿ ಯುದ್ಧದಲ್ಲಿ ಪರಿಣಿತಿ ಹೊಂದಿದೆ.

ಆದರೆ ಇರಾನ್‌ನ ಸಾಂಪ್ರದಾಯಿಕ ಇಸ್ರೇಲ್ ಮತ್ತು ಅಮೆರಿಕದ ನಿರಂತರ ದಾಳಿಗಳಿಂದ ಹದಗೆಟ್ಟಿವೆ. ಅವರ ಶಸ್ತ್ರಾಸ್ತ್ರಗಳು ಬಹುತೇಕ ಹಳೆಯ ಸೋವಿಯತ್ ಕಾಲಕ್ಕೆ ಸೇರಿವೆ. 1979ರ ಮೊದಲು ಅಮೆರಿಕದಿಂದ ಕೆಲವನ್ನು ಪಡೆದವು ಮತ್ತು ಇತ್ತೀಚಿನ ರಷ್ಯಾದ ಕೆಲವೊಂದು ಶಸ್ತ್ರಾಸ್ತ್ರಗಳು ಸೇನೆಗೆ ಸೇರ್ಪಡೆಗಳಿವೆ. ವಯಸ್ಸಾದ ಯುದ್ಧ ವಿಮಾನಗಳಿರುವುದರಿಂದ ಇರಾನ್ ಇಸ್ರೇಲ್‌ಗೆ ಹೋಲಿಸಿದರೆ ಬಹಳ ಹಿಂದೆ ಉಳಿದಿದೆ. ಆದರೆ ಡ್ರೋನ್ ಯುದ್ಧತಂತ್ರದಲ್ಲಿ ಪರಿಣಿತಿ ಹೊಂದಿದ್ದು, ರಷ್ಯಾಕ್ಕೆ ಖಜಚ ಜಛಿಥ ಡ್ರೋನ್‌ಗಳನ್ನು ಪೂರೈಸುತ್ತಿದೆ.

### ಅಮೆರಿಕ ಬೆಂಬಲವೇ ಇಸ್ರೇಲ್ ಶಕ್ತಿ!

ಇಸ್ರೇಲ್‌ನ ರಕ್ಷಣಾ ತಂತ್ರಜ್ಞಾನ ಅತ್ಯಾಧುನಿಕವಾಗಿದೆ. ದೇಶೀಯ ಶಸ್ತ್ರಾಸ್ತ್ರ ಉತ್ಪಾದನೆ ಮತ್ತು ಯುದ್ಧಾನುಭವ ಹೊಂದಿರುವ ಸೇನೆ ಇದಾಗಿದೆ. ಸಕ್ರಿಯ ಸೇನೆಯಲ್ಲಿ ಕೇವಲ 1,70,000 ಸೈನಿಕರಿದ್ದರೂ ತರಬೇತಿ, ಉಪಕರಣ ಮತ್ತು ಪ್ರಾದೇಶಿಕ ಅನುಭವದಲ್ಲಿ ಇಸ್ರೇಲ್ ಇರಾನ್‌ಗೆ ಒಂದು ಹೆಜ್ಜೆ ಮುಂದಿದೆ. ಇಸ್ರೇಲ್‌ಗೆ ಬಹುಪದರ ಕ್ಷಿಪಣಿ ನಿರೋಧಕ ವ್ಯವಸ್ಥೆ ಇದೆ. ಇದು 2024ರ ಇರಾನ್ ಕ್ಷಿಪಣಿ ದಾಳಿಯ ಹೆಚ್ಚಿನ ಭಾಗವನ್ನು ತಡೆಯಲು ಯಶಸ್ವಿಯಾಗಿತ್ತು.

☞ 11

## ಭಾರತದ ಧರ್ಮ ಸಂಕಟ ಮತ್ತು ನಷ್ಟ!

ಇರಾನ್ ಇಸ್ರೇಲ್ ಯುದ್ಧ ಭಾರತದ ವ್ಯಾಪಾರ, ಉದ್ದಿಮೆ ಹಾಗೂ ಕಾರ್ಯತಂತ್ರದ ಆಯಾಮದ ಸಂಬಂಧಗಳ ಮೇಲೂ ಪರಿಣಾಮ ಬೀರಲಿದೆ. ಇಸ್ರೇಲ್ ಜೊತೆಗಿನ ಭಾರತದ ವ್ಯಾಪಾರ ಇರಾನ್‌ನ ಜೊತೆಗಿನ ವ್ಯಾಪಾರದ ಮೂರು ಪಟ್ಟಾಗಿದ್ದು, 2023-24ರಲ್ಲಿ 4.5 ಬಿಲಿಯನ್ ಡಾಲರ್ ಮೌಲ್ಯ ಹೊಂದಿತ್ತು.


ಇದರಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ವ್ಯಾಪಾರ ಪೆಟ್ರೋಲಿಯಂ ಉತ್ಪನ್ನಗಳಿಗೆ ಸಂಬಂಧಿಸಿತ್ತು. ಮುಖ್ಯವಾಗಿ, ಭಾರತ ಇಸ್ರೇಲ್ ಭಾರತದ ಎರಡನೇ ಅತಿದೊಡ್ಡ ರಕ್ಷಣ ಪೂರೈಕೆದಾರನಾಗಿದೆ. ಇಸ್ರೇಲ್‌ನಿಂದ ಪ್ರಮುಖ ಆಮದುಗಳಲ್ಲಿ ಕ್ಷಿಪಣಿಗಳು, ಡ್ರೋನ್‌ಗಳು, ರೇಡಾರ್‌ಗಳು ಮತ್ತು ಎಲೆಕ್ಟ್ರಾನಿಕ್ ವಾರ್‌ಫೇರ್ ಉತ್ಪನ್ನಗಳು ಸೇರಿದ್ದು, ಇಸ್ರೇಲ್ ಸಹಯೋಗದೊಡನೆ ಭಾರತದಲ್ಲಿ ಹಲವಾರು ಜಂಟಿ ರಕ್ಷಣಾ ಉತ್ಪಾದನಾ ಉದ್ಯಮಗಳನ್ನು ಮತ್ತು ರಕ್ಷಣಾ ಸ್ಟಾರ್ಟಪ್‌ಗಳನ್ನು ಆರಂಭಿಸಲಾಗಿದೆ. 2019ರ ಬಳಿಕ ಇರಾನ್ ಜೊತೆಗಿನ ಭಾರತದ ವ್ಯಾಪಾರ ಭಾರೀ ಕುಸಿತ ಕಂಡಿದೆ. ತನ್ನ ನಿರ್ಬಂಧಗಳ ಹೊರತಾಗಿಯೂ, ಇರಾನ್‌ನಿಂದ ತೈಲ ಆಮದು ನಡೆಸಲು ಭಾರತಕ್ಕೆ ನೀಡಿದ್ದ ಅನುವನ್ನು ಅಮೆರಿಕಾ ಹಿಂಪಡೆದದ್ದು ಇದಕ್ಕೆ ಕಾರಣವಾಗಿತ್ತು. 2018-19ರಲ್ಲಿ, ಭಾರತ ಇರಾನಿನಿಂದ 12 ಬಿಲಿಯನ್ ಡಾಲರ್ ಮೌಲ್ಯದ ತೈಲ ಆಮದು ಮಾಡಿಕೊಂಡಿದ್ದು, ಇದು ದ್ವಿಪಕ್ಷೀಯ ಕೇವಲ 2 ಬಿಲಿಯನ್ ಡಾಲರ್ ಆಗಿದೆ. ಇಂದಿಗೂ ಭಾರತ ಪ್ರಮುಖ ಆಹಾರ ಉತ್ಪನ್ನಗಳಾದ ಅಕ್ಕಿ (734 ಮಿಲಿಯನ್ ಡಾಲರ್), ಸೋಯಾಬೀನ್ ಖಾದ್ಯ (97 ಮಿಲಿಯನ್ ಡಾಲರ್), ಮತ್ತು ಬಾಳೆಹಣ್ಣುಗಳನ್ನು (52 ಮಿಲಿಯನ್ ಡಾಲರ್) ಇರಾನಿಗೆ ರಫ್ತು ಮಾಡುತ್ತಿದ್ದು, ರಾಸಾಯನಿಕಗಳು, ಎಲ್‌ಪಿಜಿ ಮತ್ತು ಪೆಟ್ರೋಲಿಯಂ ಕೋಕ್‌ಗಳನ್ನು ಆಮದು ಮಾಡುತ್ತಿದೆ.

ಈ ವರ್ಷಾರಂಭದಲ್ಲಿ ಅಮೆರಿಕಾ ನಾಲ್ಕು ಭಾರತೀಯ ಸರಕು ಸಾಗಣೆ ಸಂಸ್ಥೆಗಳಾದ ಆಸ್ಟನ್‌ಶಿಪ್ ಮ್ಯಾನೇಜ್‌ಮೆಂಟ್, ಬಿಎಸ್‌ಎಂ ಮರೀನ್, ಕಾಸ್ಮೋಸ್ ಲೈನ್ಸ್ ಮತ್ತು ಫ್ಲಕ್ಸ್ ಮಾರಿಟೈಮ್‌ಗಳ ಮೇಲೆ ಇರಾನಿಯನ್ ತೈಲದ ವ್ಯಾಪಾರ ಮತ್ತು ಸಾಗಾಣಿಕೆಯಲ್ಲಿ ಭಾಗಿಯಾಗಿವೆ ಎಂದು ನಿರ್ಬಂಧ ವಿಧಿಸಿತ್ತು. ಇದು ಜಾಗತಿಕ ರಾಜಕಾರಣದಲ್ಲಿ ಇರಾನಿನ ಇಂಧನದ ವಿಚಾರ ಎಷ್ಟು ಸೂಕ್ಷ್ಮವಾಗಿದೆ ಎನ್ನುವುದನ್ನು ಸೂಚಿಸುತ್ತದೆ.

ಇಷ್ಟಾದರೂ, ಹೆಚ್ಚುತ್ತಿರುವ ತೈಲ ದರಗಳು ಅನಿರೀಕ್ಷಿತ ಪ್ರಯೋಜನಗಳನ್ನೂ ತರಬಲ್ಲದು. ತೈಲ ಶ್ರೀಮಂತ ಮಧ್ಯ ಪೂರ್ವ ರಾಷ್ಟ್ರಗಳಾದ ಯುಎಇ, ಸೌದಿ ಅರೇಬಿಯಾ, ಕುವೈತ್ ಮತ್ತು ಕತಾರ್‌ಗಳು ಹೆಚ್ಚಿನ ರಫ್ತು ಆದಾಯ ಗಳಿಸುವ ಉದ್ದೇಶ ಹೊಂದಿದ್ದು, ವುಗಳು ಹೆಚ್ಚು ಆದಾಯ ಗಳಿಸಿದಾಗ ಮೂಲಭೂತ ವ್ಯವಸ್ಥೆಗಳು, ಸೇವೆ ಮತ್ತು ದೇಶೀಯ ಅಭಿವೃದ್ಧಿಯಲ್ಲಿ ಹೂಡಿಕೆ ನಡೆಸಲು ಮುಂದಾಗಲಿವೆ. ಇದರಿಂದ ವಲಸೆ ಕಾರ್ಮಿಕರಿಗೆ, ಅದರಲ್ಲೂ ಭಾರತೀಯ ಕಾರ್ಮಿಕರಿಗೆ ಬೇಡಿಕೆ ಹೆಚ್ಚಾಗಲಿದೆ.

ಪ್ರಸ್ತುತ 9 ಮಿಲಿಯನ್ ಭಾರತೀಯ ಅರೆ ಕುಶಲ ಮತ್ತು ಕೌಶಲ್ಯ ರಹಿತ ಕಾರ್ಮಿಕರು ಈ ದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರಲ್ಲಿ ಬಹಳಷ್ಟು ಜನರು ನಿರ್ಮಾಣ ಕಾಮಗಾರಿ, ಮನೆ ಕೆಲಸ ಮತ್ತು ನಿರ್ವಹಣಾ ಸೇವೆಗಳಲ್ಲಿ ಕಾರ್ಯಾಚರಿಸುತ್ತಿದ್ದಾರೆ. ತೈಲ ರಫ್ತಿನಿಂದ ಆದಾಯ ಹೆಚ್ಚಾದಂತೆ, ಈ ದೇಶಗಳು ತಮ್ಮ ಯೋಜನೆಗಳನ್ನು ಇನ್ನಷ್ಟು ವಿಸ್ತರಿಸಿ, ಇನ್ನೂ ಹೆಚ್ಚಿನ ಕಾರ್ಮಿಕರನ್ನು ನೇಮಿಸಿಕೊಳ್ಳುವ ಸಾಧ್ಯತೆಗಳಿವೆ. ಇದರಿಂದ ಭಾರತೀಯ ವಲಸಿಗರಿಗೆ ಹೊಸ ಅವಕಾಶಗಳ ಬಾಗಿಲು ತೆರೆಯಲಿವೆ. ಕೇರಳದಂತಹ ರಾಜ್ಯಗಳಿಗೆ ಇದರ ಪ್ರಯೋಜನ ಅತ್ಯಂತ ಹೆಚ್ಚಾಗಲಿದೆ. ಕೇರಳದ 35 ಮಿಲಿಯನ್ ಜನಸಂಖ್ಯೆಯಲ್ಲಿ ಅಂದಾಜು 10% ಈಗಾಗಲೇ ಮಧ್ಯ ಪೂರ್ವದಲ್ಲಿ ಉದ್ಯೋಗ ನಡೆಸುತ್ತಿದ್ದಾರೆ. ಅವರು ಮನೆಗೆ ಕಳುಹಿಸುವ ವಿದೇಶೀ ಹಣ ರವಾನೆ ಕೇರಳದ ಆದಾಯದಲ್ಲಿ 20% ಪಾಲು ಹೊಂದಿದೆ. ಇದು ಮಿಲಿಯಾಂತರ ಜನರ ಕುಟುಂಬಗಳಿಗೆ ಬೆಂಬಲ ನೀಡಲು, ಶಿಕ್ಷಣ, ಆರೋಗ್ಯ ಮತ್ತು ಇತರ ವೆಚ್ಚಗಳನ್ನು ನಿರ್ವಹಿಸಲು ಅನುಕೂಲಕರವಾಗಿದೆ. ಸರಳವಾಗಿ ಹೇಳುವುದಾದರೆ, ಇರಾನ್-ಇಸ್ರೇಲ್ ಯುದ್ಧದ ಪರಿಣಾಮವಾಗಿ ಹೆಚ್ಚುತ್ತಿರುವ ತೈಲ ದರಗಳು ಭಾರತದ ಮೇಲೆ ಒಂದು ರೀತಿಯಲ್ಲಿ ಎರಡು ಅಲಗಿನ ಖಡ್ಗದಂತಿವೆ. ಯುದ್ಧದಿಂದ ಆಮದು ದರ ಹೆಚ್ಚಾಗಿ, ರೂಪಾಯಿ ಮೌಲ್ಯ ದುರ್ಬಲಗೊಳ್ಳಲಿದೆ!!


# ಜೆ.ಜೆ. ನಗರ ರೌಡಿ ವಿಜಯ್ ಕೊಲೆ! ಆರೋಪಿಗಳ ಕಾಲಿಗೆ ಗುಂಡೇಟು!!



ಜನತಾ ಕಾಲೋನಿ ರೌಡಿಡಿ ವಿಜಯ್

**ಬೆಂಗಳೂರಿನ ಆರ್.ಆರ್. ನಗರದ ಷಣ್ಮುಖ ದೇವಸ್ಥಾನದ ಬಳಿ ರೌಡಿ ಶೀಟರ್ ವಿಜಯ್ ಕೊಂದು ಎಸ್ಕೇಪ್ ಆಗಿದ್ದ ಆರೋಪಿಗಳ ಕಾಲಿಗೆ ಜೆ.ಜೆ. ನಗರ ಪೊಲೀಸ್ ಇನ್ಸ್‌ಪೆಕ್ಟರ್ ಕೆಂಪೇಗೌಡ ಗುಂಡು ಹೊಡೆದು ಕೆಡವಿದ್ದಾರೆ! ದೀಪು ಮತ್ತು ಅರುಣ್ ಗುಂಡೇಟು ತಿಂದು ಪೊಲೀಸ್ ಬಲೆಗೆ ಬಿದ್ದ ಆರೋಪಿಗಳಾಗಿದ್ದು, ಇವರು ಅರೆಸ್ಟ್ ಮಾಡಲು ತೆರಳಿದ್ದಾಗ ಹಲ್ಲೆ ಮಾಡಲು ಯತ್ನಿಸಿದ್ದರಿಂದ ಇನ್ಸ್‌ಪೆಕ್ಟರ್ ಕೆಂಪೇಗೌಡ ಆತ್ಮರಕ್ಷಣೆಗಾಗಿ ಗುಂಡು ಹಾರಿಸಿ ಬಂಧಿಸಿದ್ದಾರೆ. ಈ ಸುತ್ತ ಒಂದು ವರದಿ...**


ತಮಿಳುನಾಡು ಮೂಲದ ವಿಜಯ್ ಜೆ.ಜೆ. ನಗರ ಠಾಣಾ ವ್ಯಾಪ್ತಿಯ ಗೋರಿಪಾಳ್ಯ ಖಬ್ರಸ್ತಾನ್ ಪಕ್ಕದ ಜನತಾ ಕಾಲೋನಿಯಲ್ಲಿ ನೆಲೆಸಿದ್ದ. ಈತ ಕಲಾಸಿಪಾಳ್ಯ ಮಾರ್ಕೆಟ್‌ನಲ್ಲಿ ಚಪ್ಪಲಿ ಹೊಲಿಯೋ ಕಾಯಕ ಮಾಡಿಕೊಂಡಿದ್ದ. ಅಲ್ಲಿನ ರೌಡಿಸಂ ಗೊತ್ತಲ್ಲ... ಮಂದೆ ಇವನೂ ರೌಡಿಯಾಗಿ ಜೆ.ಜೆ. ನಗರ, ಕಾಟನ್‌ಪೇಟೆ ಪೊಲೀಸ್ ಠಾಣೆಗಳಲ್ಲಿ ರೌಡಿ ಶೀಟ್ ಓಪನ್ ಮಾಡಿಸಿಕೊಂಡಿದ್ದ. ಗೋರಿಪಾಳ್ಯ, ಕಲಾಸಿಪಾಳ್ಯ, ಕಾಟನ್‌ಪೇಟೆ ಮುಂತಾದ ಕಡೆ ಈತನ ವಿರುದ್ಧ ಐದಾರು ಕೇಸ್ ದಾಖಲಾಗಿದ್ದವು. ಇಂಥ ಹಿನ್ನಲೆಯ ವಿಜಯ್ ಕೆಲ ವಾರಗಳ ಹಿಂದೆ ಯಾವುದೋ ವಿಚಾರಕ್ಕೆ ಕಲಾಸಿಆಳ್ಯದ ರೌಡಿ ಶೀಟರ್ ಅರುಣ್‌ಗೆ ಚೆನ್ನಾಗಿ ಬಡಿದಿದ್ದ. ಇದು ಕೇಸ್ ಆಗಿ ವಿಜಯ್ ಜೈಲ್‌ಗೂ ಹೋಗಿ ಬಂದಾಗಿತ್ತು.



ರೌಡಿಗಳಾದ ಅರುಣ್ ಹಾಗೂ ದೀಪು

### ರಾಜಿಗೆ ಕರೆದು ಕೊಲೆ!

ಹೀಗಿರುವಾಗ, ಒದೆ ತಿಂದು ಕೊತ ಕೊತನೆ ಕುದಿಯುತ್ತಿದ್ದ ಅರುಣ ವಿಜಯ್ ಮೇಲೆ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದ. ಈ ಅರುಣ ಈ ಹಿಂದೆ ಹುಡುಗಿ ಒಂದರ ವಿಚಾರಕ್ಕೆ ಟಿಂಬರ್ ಯಾರ್ಡ್‌ನಲ್ಲಿ ಒಂದು ಕೊಲೆ ಮಾಡಿ ಜೈಲಿಗೆ ಹೋಗಿ ಬಂದಿದ್ದಾನೆ.



ಡಿಸಿಪಿ ಎಸ್. ಗಿರೀಶ್



ಇನ್ಸ್‌ಪೆಕ್ಟರ್ ಕೆಂಪೇಗೌಡ

ಬ್ಯಾಟರಾಯನಪುರ ಪೊಲೀಸ್ ಠಾಣೆಯ ರೌಡಿಶೀಟರ್. ಇವನಿಗೆ ಹೊಡೆದು ಅವಮಾನಿಸಿದ್ದ ವಿಜಯ್ ಮೂರು ದಿವಸಗಳ ಹಿಂದೆ ಜೈಲಿಂದ ಮನೆಗೆ ಬಂದಿದ್ದ. ಅವನ ಬರುವಿಕೆಗಾಗಿಯೇ ಕಾದಿದ್ದ ರೌಡಿ ಅರುಣ, ಜನತಾ ಕಾಲೋನಿಯಲ್ಲಿದ್ದ ತನ್ನ ಫ್ರೆಂಡ್ಸ್ ಮುಖಾಂತರ ವಿಜಯ್ ಜೊತೆ ರಾಜಿಗೆ ಸಿಟ್ಟಿಂಗ್ ಹಾಕಿಸಿದ್ದ. ಕಳೆದ ಶನಿವಾರ ರಾತ್ರಿ ಹಾಗೆ ರಾಜಿ ಪಂಚಾಯ್ತಿಗೆ ಅಂತ ಸೇರಿದ್ದಾಗ ಅರುಣ್ ತನ್ನ ಸ್ನೇಹಿತ ದೀಪುವನ್ನು ಜೊತೆ ಮಾಡಿಕೊಂಡು ವಿಜಯ್‌ನನ್ನು ಜನತಾ ಕಾಲೋನಿ ಒಳಗೆ ಅಟ್ಟಾಡಿಸಿಕೊಂಡು ಭೀಕರವಾಗಿ ಕೊಂದು ಎಸ್ಕೇಪ್ ಆಗಿದ್ದರು!

### ಆರ್.ಆರ್. ನಗರ ಅರಣ್ಯದಲ್ಲಿ...

ಈ ಪ್ರಕರಣ ಜೆ.ಜೆ. ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು, ಬೆಂಗಳೂರು ಪಶ್ಚಿಮ ವಲಯದ ಡಿಸಿಪಿ ಎಸ್. ಗಿರೀಶ್ ಅವರ ಮಾರ್ಗದರ್ಶನದಲ್ಲಿ ಇನ್ಸ್‌ಪೆಕ್ಟರ್ ಕೆಂಪೇಗೌಡ ತನಿಖೆ ಕೈಗೊಂಡಿದ್ದರು. ವಿಜಯ್ ಕೊಂದು ತಲೆಮರೆಸಿಕೊಂಡಿದ್ದ ರೌಡಿಗಳಾದ ಅರುಣ್, ದೀಪು ದಿನಾಂಕ 14-06-2025ರಂದು ಆರ್.ಆರ್. ನಗರದ ಷಣ್ಮುಖ ದೇವಾಲಯ ಸಮೀಪದ ಅರಣ್ಯ ಪ್ರದೇಶದಲ್ಲಿ ಅಡಗಿದ್ದ ಮಾಹಿತಿ ದೊರಕಿತ್ತು.

ಇನ್ಸ್‌ಪೆಕ್ಟರ್ ಕೆಂಪೇಗೌಡ, ಪಿಎಸ್‌ಐಗಳಾದ ಪದ್ಮನಾಭ, ಕುಮಾರ್ ಹಾಗೂ ಕಾನ್‌ಸ್ಟೇಬಲ್ ಕರೀಂಸಾಬ್ ಅತ್ತ ತೆರಳಿ, ಆರೋಪಿಗಳು ಎಣ್ಣೆ ಹೊಡಕೊಂಡು ಹಾಯಾಗಿ ಮಲಗಿದ್ದ ಅಡಗುತಾಣವನ್ನು ಪತ್ತೆಹಚ್ಚಿ ಸುತ್ತುವರೆದು ಬಂಧಿಸಲು ಮುಂದಾಗಿದ್ದಾರೆ. ಆವಾಗ, ಐನಾತಿ ಆರೋಪಿಗಳು ಪೊಲೀಸರ ಮೇಲೆಯೇ ಮುಗಿಬಿದ್ದು ಚಾಕು ಬೀಸಿ ಮತ್ತೆ ತಪ್ಪಿಸಿಕೊಳ್ಳುವ ಯತ್ನ ಮಾಡಿದ್ದಾರೆ! ಯಾವಾಗ ತಮ್ಮ ಸಿಬ್ಬಂದಿ ಮೇಲೆ ಬಿದ್ದರೋ, ಇನ್ಸ್‌ಪೆಕ್ಟರ್ ಕೆಂಪೇಗೌಡ ತಮ್ಮ ಸರ್ವೀಸ್ ರಿವಾಲ್ವಾರ್‌ನಿಂದ ಒಬ್ಬನ ಕಾಲಿಗೆ ಗೋಲಿ ನುಗ್ಗಿಸಿದ್ದಾರೆ! ಪಿಎಸ್‌ಐ ಪದ್ಮನಾಭ ಇನ್ನೊಬ್ಬನ ಕಾಲಿಗೆ ಗೋಲಿ ತೂರಿಸಿದ್ದಾರೆ!!

ನಂತರ ಗಾಯಗೊಂಡಿದ್ದ ಪಿಎಸ್‌ಐ ಕುಮಾರ್, ಕಾನ್‌ಸ್ಟೇಬಲ್ ಕರೀಂಸಾಬ್‌ರನ್ನು ಆಸ್ಪತ್ರೆಗೆ ಸಾಗಿಸುವ ಏರ್ಪಾಟು ಮಾಡಿ, ಆರೋಪಿಗಳನ್ನು ಬಂಧಿಸಿ ವಿಕ್ಟೋರಿಯಾ ಖೈದಿಗಳ ವಾರ್ಡ್‌ಗೆ ಸೇರಿಸಿ ಚಿಕಿತ್ಸೆ ಕೊಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ☯

# ಹಲ್ಲೂ ಇಲ್ಲ ವಿಷವೂ ಇಲ್ಲದ ವಿಶೇಷ ಕಾರ್ಯಪಡೆ ಅಸ್ತಿತ್ವಕ್ಕೆ

ಮಂಗಳೂರು

✍ ಮೋಹನ್ ಬೋಳಂಗಡಿ

ದಕ್ಷಿಣ ಕನ್ನಡ ಉಡುಪಿ ಶಿವಮೊಗ್ಗ ಜಿಲ್ಲೆಗಳ ವ್ಯಾಪ್ತಿಯನ್ನು ಒಳಗೊಂಡಂತಹ ವಿಶೇಷ ಕಾರ್ಯಪಡೆಯೊಂದನ್ನು ಅಸ್ತಿತ್ವಕ್ಕೆ ತರಲಾಗಿದೆ. ಕಾರ್ಕಳದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದಂತಹ ನಕ್ಸಲ್ ನಿಗ್ರಹ ಪಡೆಯಲ್ಲಿ ಇದ್ದಂತಹ ಅಧಿಕಾರಿಗಳ ಪೈಕಿ 240 ಮಂದಿಯನ್ನು ಈ ವಿಶೇಷ ಕಾರ್ಯಪಡೆಗೆ ನಿಯೋಜಿಲಾಗಿದ್ದು, ಅವರೆಲ್ಲರೂ ಮಂಗಳೂರಿಗೆ ಬಂದು ಪಶ್ಚಿಮ ವಲಯದ ಐಜಿಪಿ



ಅಮಿತ್ ಸಿಂಗ್ ಅವರಿಗೆ ವರದಿ ಮಾಡಿದ್ದಾರೆ. ಅವರಿಗೆ ಹಳೆಯ ಜಿಲ್ಲಾಧಿಕಾರಿ ಕಚೇರಿಯ ತಳ ಅಂತಸ್ತಿನಲ್ಲಿ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಲಾಗಿದೆ. ಮಂಗಳೂರು ನಗರ ಆಯುಕ್ತಾಲಯದ ಪಕ್ಕದಲ್ಲಿರುವ ಪೊಲೀಸ್ ಗೆಸ್ಟ್ ಹೌಸ್‌ನಲ್ಲಿ ಕಚೇರಿ ವ್ಯವಸ್ಥೆಯನ್ನು ಮಾಡಲಾಗಿದೆ. ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ಅವರು ಈ ವಿಶೇಷ ಕಾರ್ಯಪಡೆಯ ಮುಖ್ಯಸ್ಥರಾಗಿದ್ದು, ಐಜಿಪಿ ಕಚೇರಿಯ ಆಡಳಿತಾತ್ಮಕ ಡಿವೈಎಸ್ಪಿ ಕೆ.ಯು. ಬೆಳ್ಳಿಯಪ್ಪ ಅವರು ಡಿವೈಎಸ್ಪಿಯಾಗಿದ್ದಾರೆ. ಈ ಕಾರ್ಯಪಡೆಯು ಮೂರು ಜಿಲ್ಲೆಗಳ ವ್ಯಾಪ್ತಿಯನ್ನು ಒಳಗೊಂಡಿದ್ದರೂ ಮಂಗಳೂರು ಕೇಂದ್ರಸ್ಥಾನವಾಗಿದೆ.

**ಕೋಮುಗಲಭೆ ನಿಗ್ರಹ ಪಡೆ!**

ಇಂತಹ ಒಂದು ಕಾರ್ಯಪಡೆ ಈ ಮೂರು ಜಿಲ್ಲೆಗಳಿಗೆ ಅಗತ್ಯವಿದೆಯೇ ಎನ್ನುವ ಪ್ರಶ್ನೆಯನ್ನು ಮುಂದಿಟ್ಟುಕೊಂಡು ವಿಚಾರಿಸಿದರೆ ಇದೊಂದು ಕಾರ್ಯಸಾಧುವಲ್ಲದಂತಹ ಕಾರ್ಯಪಡೆ ಎನ್ನುವುದು ಮನದಟ್ಟಾಗುತ್ತದೆ. ಯಾಕೆಂದರೆ ಈ ಕಾರ್ಯಪಡೆಗೆ ಯಾವುದೇ ಕಾನೂನಾತ್ಮಕವಾದ ಬಲ ಇಲ್ಲ. ಕೇವಲ ರಾಜ್ಯ ಸರಕಾರದ ಗಜೆಟ್ ನೋಟಿಫಿಕೇಶನ್‌ನ ಆಧಾರದಲ್ಲಿ ಈ ಕಾರ್ಯಪಡೆಯನ್ನು ಅಸ್ತಿತ್ವಕ್ಕೆ ತರಲಾಗಿದೆಯೇ ಹೊರತು ಇವರ ಕಾರ್ಯವ್ಯಾಪ್ತಿ ಏನು ಎನ್ನುವುದು ಸ್ಪಷ್ಟವಾಗಿಲ್ಲ. ಈ ಕಾರ್ಯಪಡೆಯನ್ನು ಇತ್ತೀಚೆಗೆ ಉದ್ಘಾಟಿಸಿದಂತಹ ರಾಜ್ಯದ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರೇ ಹೇಳಿದಂತೆ ಈ ಪಡೆ ಕೇವಲ ಸ್ಟ್ರೈಕಿಂಗ್ ಫೋರ್ಸ್ ಮಾತ್ರವೇ ಆಗಿದೆ.

ಈ ಪಡೆಗೆ ಯಾವುದೇ ಪ್ರಕರಣವನ್ನು ದಾಖಲಿಸಿಕೊಳ್ಳುವ, ತನಿಖೆ ಮಾಡುವ, ಅಪರಾಧಿಗಳನ್ನು ಪತ್ತೆ ಹಚ್ಚುವ, ಅಪರಾಧಿಗಳನ್ನು ವಿಚಾರಣೆಗೊಳಪಡಿಸುವ ಯಾವುದೇ ಅಧಿಕಾರವಿಲ್ಲ. ಯಾವುದಾದರೂ ಸಂದರ್ಭದಲ್ಲಿ ಏನಾದರೂ ಗಲಾಟೆ, ದೊಂಬಿ ನಡೆದರೆ ಈ ಪಡೆ ತಕ್ಷಣ ಧಾವಿಸಿ ಅದನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಿದೆ. ಅಂದರೆ ಸ್ಥಳೀಯ ಪೊಲೀಸರಿಗೆ ಗಲಭೆ ನಿಯಂತ್ರಿಸಲು ಸಹಕಾರ ನೀಡಲಿದೆ. ಯಾವುದಾದರೂ ಸಭೆ, ಸಮಾರಂಭ, ಪ್ರತಿಭಟನೆ ನಡೆದರೆ ಅದರ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿ ನಿಭಾಯಿಸಲಿದೆ. ಇಷ್ಟು ಮಾತ್ರದ ಕರ್ತವ್ಯಕ್ಕೆ ವಿಶೇಷ ಕಾರ್ಯಪಡೆ ಎಂಬ ಹೆಸರಿನ ಸುಮಾರು 240 ಅಧಿಕಾರಿ ಸಿಬ್ಬಂದಿ ವರ್ಗವನ್ನು ಒಳಗೊಂಡಂತಹ ಪಡೆಯೊಂದರ ಅಗತ್ಯ ಇದೆಯೇ ಎಂದು ಕೇಳಿದರೆ ಹಿರಿಯ ಅಧಿಕಾರಿಗಳೇ ಹೇಳುತ್ತಾರೆ ಇದೊಂದು ನಾಮ್‌ಕಾವಾಸ್ತೆ ವ್ಯವಸ್ಥೆ. ಎಲ್ಲಿಯೂ ಕೆಲಸ ಮಾಡದಂತಹ ಅಧಿಕಾರಿಗಳಿಗೇ ಪುನರ್ವಸತಿ ಕಲ್ಪಿಸುವ ಪಡೆ ಎಂದು.



ಡಿವೈಎಸ್ಪಿ ಕೆ.ಯು. ಬೆಳ್ಳಿಯಪ್ಪ

**ಯಾಕೆ ಅಸ್ತಿತ್ವಕ್ಕೆ ಬಂತು?**

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬಂದು ಎರಡು ವರ್ಷಗಳು ಕಳೆದಿದೆ. ಜಿಲ್ಲೆಯಲ್ಲಿ ಯಾವುದೇ ರೀತಿಯ ಗಂಭೀರವಾದಂತಹ ಪ್ರಕರಣಗಳು ನಡೆದಿರಲಿಲ್ಲ. ಈ ಜಿಲ್ಲೆ ಕೋಮು ಸೂಕ್ಷ್ಮ ಪ್ರದೇಶ ಎಂದು ಗುರುತಿಸಲ್ಪಟ್ಟಂತಹದು. ಇಲ್ಲಿನ ಮೂಲ ಸಮಸ್ಯೆಗಳೇ ಬೇರೆ. ಇಲ್ಲಿ ಎರಡು



ಕೋಮುಗಳ ಮಧ್ಯೆ ಘರ್ಷಣೆಗಳು ಸಂಭವಿಸಿದಂತಹ ನಿದರ್ಶನಗಳಿವೆ. ಹಲವಾರು ಹತ್ಯಾ ಪ್ರಕರಣಗಳು ಒಂದಕ್ಕೆ ಇನ್ನೊಂದು ಎಂಬಂತೆ ನಡೆದಿದೆ. ಆದರೆ ಪ್ರತಿಯೊಂದು ಪ್ರಕರಣದ ಆರೋಪಿಗಳನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ. ಅದರ ಹಿಂದಿರುವ ಕಾರಣಗಳನ್ನು ಬಯಲಿಗೆಳೆದಿದ್ದಾರೆ. ಇದೀಗ ನಡೆದಂತಹ ಎರಡು ಹತ್ಯಾ ಪ್ರಕರಣಗಳ ಹಿನ್ನೆಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲರಾಗಿದ್ದಾರೆ ಎಂಬ ಕಾರಣವನ್ನು ಮುಂದೊಡ್ಡಿ ಮಂಗಳೂರು ನಗರ ಪೊಲೀಸ್ ಆಯುಕ್ತ ಅನುಪಮ್ ಅಗರ್‌ವಾಲ್ ಅವರನ್ನು ವರ್ಗಾಯಿಸಿ ಈ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯ ಎಸ್ಪಿಯಾಗಿ ಕೆಲವೇ ತಿಂಗಳ ಕಾಲ ಕರ್ತವ್ಯ ನಿರ್ವಹಿಸಿ ದಕ್ಷ ಅಧಿಕಾರಿ ಎಂದು ಛಾಪು ಮೂಡಿಸಿದ್ದ ಸುಧೀರ್‌ಕುಮಾರ್ ರೆಡ್ಡಿಯವರನ್ನು ನೇಮಿಸಲಾಗಿದ್ದರೆ, ದಕ್ಷಿಣ ಕನ್ನಡ ಜಿಲ್ಲಾ ಎಸ್ಪಿಯಾಗಿ ಸುಮಾರು ಒಂದೂವರೆ ವರ್ಷ ಕರ್ತವ್ಯ ನಿರ್ವಹಿಸಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಂಡಿದ್ದಂತಹ ಎಸ್ಪಿ ಯತೀಶ್ ಅವರನ್ನು ವರ್ಗಾಯಿಸಿ ಉಡುಪಿ ಜಿಲ್ಲಾ ಎಸ್ಪಿಯಾಗಿದ್ದ ಡಾ. ಅರುಣ್ ಅವರನ್ನು ನಿಯೋಜಿಸಲಾಗಿದೆ. ಈ ಬದಲಾವಣೆಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಮತ್ತು ಕೋಮು ಸಂಘರ್ಷವನ್ನು ತಡೆಯಲು ಪೊಲೀಸ್ ಇಲಾಖೆಯನ್ನು ಸರ್ವ ಸಜ್ಜಿತಗೊಳಿಸಲು ಸರಕಾರ ಇದೀಗ ಮತ್ತೊಂದು ವಿಶೇಷ ಕಾರ್ಯಪಡೆಯೊಂದನ್ನು ಅಸ್ತಿತ್ವಕ್ಕೆ ತರುವ ಮೂಲಕ ಜನರ ಮನಸ್ಸಿನಲ್ಲಿ ಮೂಡಿರುವ ಭೀತಿಯನ್ನು ದೂರ ಮಾಡಲು ಪ್ರಯತ್ನ ನಡೆಸಿದೆ.



ಕಮೀಷನರ್ ಸುಧೀರ್‌ಕುಮಾರ್ ರೆಡ್ಡಿ

**ಇದು ಸಾಧ್ಯವೇ?**

ವಿಶೇಷ ಕಾರ್ಯಪಡೆಗೆ ಮಂಗಳೂರು ಕೇಂದ್ರಸ್ಥಾನ. ಇಲ್ಲಿಯೇ ಅದರ ಎಲ್ಲಾ ಸಿಬ್ಬಂದಿಗಳಿಗೆ ವಾಸ್ತವ್ಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಕಳೆದ ಕೆಲವು ವರ್ಷಗಳಿಂದ ಈ ಸಿಬ್ಬಂದಿಗಳು ನಕ್ಸಲ್ ನಿಗ್ರಹ ಪಡೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಇತ್ತೀಚೆಗೆ ನಕ್ಸಲ್ ನಾಯಕ ವಿಕ್ರಂ ಗೌಡನ ಎನ್‌ಕೌಂಟರ್ ಈ ಪಡೆಯ ಅತ್ಯುತ್ತಮ ಬೇಟೆ. ಅದರ ಬೆನ್ನಲ್ಲೇ ಅಳಿದುಳಿದ ನಕ್ಸಲರು ಸರಕಾರದ ಪ್ಯಾಕೇಜಿನ ಆಸೆಗೆ ಬಲಿಬಿದ್ದು, ಶರಣಾಗತರಾಗಿ ಜಿಲ್ಲಾಡಳಿತಕ್ಕೆ ಶರಣಾದರೇ ಹೊರತು ಅವರನ್ನು ಪತ್ತೆ ಹಚ್ಚುವಂತಹ ಕಾರ್ಯ ಈ ಪಡೆಯಿಂದ ಸಾಧ್ಯವಾಗಿರಲಿಲ್ಲ. ಆದ್ದರಿಂದ ಈ ಪಡೆಯನ್ನೇ ಬಳಸಿಕೊಂಡು ದಕ್ಷಿಣ ಕನ್ನಡ, ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕೋಮು ಸಂಘರ್ಷವನ್ನು ನಿಯಂತ್ರಿಸಲು ವಿಶೇಷ ಪಡೆಯನ್ನು ರಚಿಸಲಾಗಿದೆ ಯಾದರೂ ಅದಕ್ಕೆ ಕಾನೂನಿನ ಬಲ ಇಲ್ಲ. ಆದ್ದರಿಂದ ಅವರು ಯಾವುದೇ ರೀತಿಯ ಕಾರ್ಯಾಚರಣೆ ನಡೆಸಬೇಕಾಗಿದ್ದರೂ ಸಂಬಂಧಪಟ್ಟವರ ಅನುಮತಿ ಪಡೆಯುವುದು ಅತ್ಯಾವಶ್ಯಕವಾಗಿದೆ. ಇದರಿಂದಾಗಿ ಈ ಪಡೆ ಸಮರ್ಥ ಪೊಲೀಸ್ ಪಡೆಯಾಗಲು ಸಾಧ್ಯವೇ ಇಲ್ಲ. ಒಟ್ಟಾರೆಯಾಗಿ ಸರಕಾರ ಹಳೇ ಸೀಸಕ್ಕೆ ಹೊಸ ಮದ್ಯ ಹೊಯ್ದು ಜನರನ್ನು ಮೋಸಗೊಳಿಸಲು ಯತ್ನಿಸಿದೆ ಎನ್ನುವುದಂತೂ ಸ್ಪಷ್ಟ. ☯

# ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಆರೋಪದ ಮೇಲೆ ಓರ್ವ ಶಿಕ್ಷಕನ ಬಂಧನ!

ಗುರುಬ್ರಹ್ಮ ಗುರುವಿಷ್ಣು ಗುರುದೇವೋ ಮಹೇಶ್ವರ ಗುರುಸಾಕ್ಷಾತ ಪರಬ್ರಹ್ಮ ತಸ್ಮೈಶ್ರೀ ಗುರುವೇ ನಮಃ ಎಂಬ ಎಂಬ ವೇದವಾಕ್ಯ ಅನುವಾದಿಸುವುದು ನಮಗೆ ವಿದ್ಯೆ ಕಲಿಸಿದ ಗುರುವಿಗೆ. ಆದರೆ ಅಂತ ಕೆಲ ಶಿಕ್ಷಕರು ತಾವು ಮಾಡುವ ವೃತ್ತಿ ಮರೆತು ನೀಚಕೃತ್ಯಕ್ಕೆ ಇಳಿಯುವುದು ಎಷ್ಟು ಸಮಂಜಸ. ತಾವು ಪಾಠ ಮಾಡುವ ಮಕ್ಕಳನ್ನು ತಮ್ಮ ಮಕ್ಕಳ ಎಂಬ ಭಾವನೆ ಇರಬೇಕು. ತಮ್ಮ ಕಾಮತೃಷೆಗಾಗಿ ಪುಟ್ಟ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗುವುದು ಅಕ್ಷಮ್ಯ ಅಪರಾಧ. ಅದೇ ರೀತಿಯಲ್ಲಿ ಇಲ್ಲೊಬ್ಬ ಶಿಕ್ಷಕ ಒಬ್ಬಳು ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂಬ ಆರೋಪದಡಿ ಬಾಗಲಕೋಟ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕೋಟೆ ನಗರಿ ಬಾಗಲಕೋಟ ಜಿಲ್ಲಾ ಕೇಂದ್ರ ಸ್ಥಾನವಾಗಿದ್ದು, ನಗರದ ವಿದ್ಯಾಗಿರಿ ನಿವಾಸಿಯಾದ ಮುತ್ತು ಮುಳ್ಳಾ ಎಂಬ ವ್ಯಕ್ತಿ ಬಾಗಲಕೋಟೆ ಶಿಕ್ಷಣ ಇಲಾಖೆಯಲ್ಲಿ ಸುಮಾರು ವರ್ಷಗಳಿಂದ ಸಿಆರ್‌ಪಿ ಆಗಿ ಕೆಲಸ ಮಾಡುತ್ತಿದ್ದು ತನ್ನ ವ್ಯಾಪ್ತಿಯಲ್ಲಿ ಬರುವ ಸರಕಾರಿ ಶಾಲೆಗಳಿಗೆ ಭೇಟಿ ನೀಡಿ ತನ್ನ ಕರ್ತವ್ಯ ನಿಭಾಯಿಸುತ್ತಿದ್ದ

ಸದ್ಯ ಈಗ ಒಬ್ಬಳು ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದ ಎಂಬ ಆರೋಪ ಕೇಳಿ ಬಂದಿದ್ದು ಈ ಪ್ರಕರಣ ಬಾಗಲಕೋಟ ಮಹಿಳಾ ಪೊಲೀಸ್ ಠಾಣೆಯಲ್ಲಿ ಶಿಕ್ಷಕನ ವಿರುದ್ಧ ದೂರು ದಾಖಲಾಗಿದ್ದು ಸದ್ಯ ಪೋಕ್ಸೊ ಅಡಿ ಪ್ರಕರಣ ದಾಖಲಾಗಿದ್ದು ಶಿಕ್ಷಕನನ್ನು ಬಾಗಲಕೋಟ ಪೊಲೀಸರು ಬಂಧಿಸಿ ತನಿಖೆ ಮುಂದುವರಿಸಿದ್ದಾರೆ. ಅಪ್ರಾಪ್ತ ಬಾಲಕಿಯನ್ನು ಸದ್ಯ ವೈದ್ಯಕೀಯ ತಪಾಸಣೆ ನಡಿಸುತ್ತಿದ್ದು ನ್ಯಾಯಾಂಗ ತನಿಖೆಯಲ್ಲಿ ಶಿಕ್ಷಕ ನಡೆಸಿದ ಲೈಂಗಿಕ ದೌರ್ಜನ್ಯ ಆರೋಪ ಸಾಬೀತಾದರೆ ಶಿಕ್ಷಣ ಇಲಾಖೆ ಆತನನ್ನು ಅಮಾನತುಗೊಳಿಸಬೇಕು ಆತನಿಗೆ ಕಠಿಣ ಶಿಕ್ಷೆಯಾಗಬೇಕು ಬಾಲಕಿಗೆ ಸೂಕ್ತ ನ್ಯಾಯ ದೊರಕಬೇಕೆಂಬದು ಸಾರ್ವಜನಿಕರ ಧ್ವನಿಯಾಗಿದೆ.

–ಮಂಜುನಾಥ ಈಶ್ವರ ಕರೋಳಿ



ಬಂಧಿತ ಶಿಕ್ಷಕ ಮುತ್ತು ಮುಳ್ಳಾ

# ಇಳಕಲ್ ನಗರದಲ್ಲಿ ಬಂಗಾರ ಮತ್ತು ಟಿಸಿ ಕಳ್ಳತನ ಮಾಡಿದ ಖದೀಮರು ಅಂದರ್!

**ಬಾಗಲಕೋಟೆ**

✍ ಮಂಜುನಾಥ ಈಶ್ವರ ಕರೋಳಿ

ರಾಜ್ಯದಲ್ಲಿ ಕಳ್ಳತನದಂತಹ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದ್ದು, ಖದೀಮರು ಹಾಡುಹಗಲೇ ತಮ್ಮ ಕೈ ಚಳಕವನ್ನು ತೋರಿಸಿ ಅಟ್ಟಹಾಸ ಮೆರೆಯುತ್ತಿದ್ದಾರೆ. ಹೆಚ್ಚಾಗಿ ಗ್ರಾಮೀಣ ಭಾಗಗಳಲ್ಲಿಯೇ ಕಳ್ಳತನ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿವೆ. ರಾಜ್ಯ ಪೊಲೀಸ್ ಇಲಾಖೆಯು ಸಹ ಇಂತಹ ಘಟನೆಗಳನ್ನು ತಡೆಯುವಲ್ಲಿ ವಿಫಲವಾಗುತ್ತಿದೆ ಎಂದು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿವೆ. ಇನ್ನು ಮುಂದಾದರೂ ಪೊಲೀಸ್ ಇಲಾಖೆ ಈ ಖದೀಮರ ಮಟ್ಟ ಹಾಕಲು ಇನ್ನಾದರೂ ಸೂಕ್ತ ಕ್ರಮಗಳನ್ನು ವಹಿಸಿ ಕಳ್ಳರ ಹೆಡೆಮುರಿ ಕಟ್ಟಬೇಕಿದೆ. ಇಂತಹ ಪ್ರಕರಣಗಳು ಮರುಕಳಿಸಬಾರದು ಎಂಬುದೇ ಸಾರ್ವಜನಿಕರ ಅಹವಾಲಾಗಿದೆ. ಅದೇ ರೀತಿಯಾಗಿ ಬಾಗಲಕೋಟ ಜಿಲ್ಲೆ ಇಳಕಲ್ ತಾಲ್ಲೂಕಿನ ಇಳಕಲ್ ನಗರದಲ್ಲಿ ಸುಮಾರು ಮೂರು ತಿಂಗಳ ಹಿಂದೆ ನಡೆದ ಸರಣಿ ಕಳ್ಳತನದ ಖದೀಮರನ್ನು ಹೆಡೆಮುರಿ ಕಟ್ಟುವಲ್ಲಿ ಇಳಕಲ್ ಪೊಲೀಸರು ಯಶಸ್ವಿಯಾಗಿದ್ದಾರೆ.


ಎಸ್ಪಿ ಅಮರನಾಥ್ ರೆಡ್ಡಿ


ಸಿಪಿಐ ಸುನೀಲ್ ಸವದಿ

ಬಾಗಲಕೋಟೆ ಜಿಲ್ಲೆಯ ಇಳಕಲ್ ತಾಲ್ಲೂಕೂ ಸೀರೆ ಉತ್ಪಾದನೆಯಲ್ಲಿ ಹಾಗೂ ಗ್ರಾನೈಟ್ ಉದ್ಯಮದಲ್ಲಿ ಹೆಸರು ವಾಸಿಯಾದ ತಾಲೂಕು ಜಿಲ್ಲೆಯಲ್ಲಿ ಬಾದಾಮಿ ಐಹೊಳೆ ಮೆಣಬಸದಿ ಪಟ್ಟದಕಲ್ಲು ಇನ್ನು ಹಲವಾರು ವಿಶ್ವ ಪಾರಂಪರಿಕ ತಾಣಗಳಿಗೆ ಹೆಸರುವಾಸಿ. ಈ ತಾಲೂಕಿನಲ್ಲಿ ನೇಕಾರರು ಕಾರ್ಮಿಕ ವರ್ಗ ಕುಟುಂಬಗಳೇ ಹೆಚ್ಚಾಗಿ ಇರುವುದರಿಂದ ನೇಕಾರಿಕೆ ಗ್ರಾನೈಟ್ ಕೆಲಸ ಮಾಡಿಕೊಂಡು ಜೀವನ ನಡಿಸುತ್ತಿದ್ದಾರೆ.

**ಊರದೇವರ ಜಾತ್ರೆಯಲ್ಲಿ ಬಂಗಾರ ಮತ್ತು ಟಿಸಿ ಕಳ್ಳತನ!**

ಇಳಕಲ್ ನಗರದಲ್ಲಿ ಅಂದು ದಿನಾಂಕ 20/03/2025 ರಂದು ಶ್ರೀ ಶರಣ ಬಸವೇಶ್ವರ ಜಾತ್ರೆಗೆ ತೆರಳಿ ಸಂಭ್ರಮಾಚರಣೆಯಲ್ಲಿ ತೊಡಗಿದ್ದು ಅದೇ ದಿನ ರಾತ್ರಿ ಖದೀಮರು ನಗರದಲ್ಲಿ ಬೀಡುಬಿಟ್ಟಿದ್ದು, ಇತ್ತ ಕಡೆ ಊರಿನ ಜಾತ್ರೆ ಹಾಗೂ ಜನ ತಮ್ಮ ತಮ್ಮ ಮನೆಗಳಿಗೆ ಬೀಗ ಹಾಕಿಕೊಂಡು ಸಡಗರದಲ್ಲಿದ್ದರು. ಇತ್ತ ಕಳ್ಳರು ನಗರದಲ್ಲಿ ಗಲ್ಲಿಗಲ್ಲಿಗಳಲ್ಲಿ ತಿರುಗಾಡುತ್ತ ಯಾವ ಮನೆಯನ್ನು ಕನ್ನ ಹಾಕುವುದು ಎಂದು ಹೊಂಚು ಹಾಕುತ್ತಿರುವಾಗ ಶ್ರೀ ಶರಣ ಬಸವೇಶ್ವರ ದೇವಸ್ಥಾನದ ಹಿಂದಿನ ಭಾಗದ ಗಲ್ಲಿಗೆ ಎಂಟ್ರಿ ಕೊಟ್ಟಿದ್ದಾರೆ. ರಾತ್ರಿ ಸಮಯವಾಗಿದ್ದರಿಂದ ಅದೊಂದು ಮನೆ ಬೀಗ ಹಾಕಲಾಗಿತ್ತು. ಇದನ್ನರಿತ ಖದೀಮರು ಆ ಮನೆಯನ್ನು ಟಾರ್ಗೆಟ್ ಮಾಡಿ ಆ ಮನೆಯ ಬೀಗವನ್ನು ಒಡೆದು ಒಳಗೆ ನುಗ್ಗಿ ಬಂಗಾರ ವನ್ನು ಎಗರಿಸಿ ಪರಾರಿಯಾಗಿದ್ದರು.

ಅದೇ ರೀತಿಯಲ್ಲಿ ನಗರದ ಹೊರವಲಯದಲ್ಲಿರುವ ಗ್ರ್ಯಾನೈಟ್ ಫ್ಯಾಕ್ಟರಿಗೆ ನುಗ್ಗಿದ ಕಳ್ಳರು ಅಲ್ಲಿ ಇದ್ದ ವಿದ್ಯುತ್ ಸಂಪರ್ಕ ಕಲ್ಪಿಸುವ ಮೂರು ಟಿಸಿಗಳನ್ನು ಕಳ್ಳತನ ಮಾಡಿ ಪರಾರಿಯಾಗಿದ್ದರು. ಇಡೀ ಇಳಕಲ್‌ನಗರವನ್ನು ಬೆಚ್ಚಿಬೀಳಿಸಿದ ಪ್ರಕರಣ ಇಳಕಲ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿತ್ತು.

**ಪೊಲೀಸರಿಂದ ಬಂಗಾರ ವಶ, ಕಳ್ಳರು ಅಂದರ್!**

ಇಳಕಲ್ ನಗರವನ್ನು ಬೆಚ್ಚಿ ಬೀಳಿಸಿದ ಸರಣಿ ಕಳ್ಳರನ್ನು ಪೊಲೀಸರಿಗೆ ಭಾರಿ ತಲೆನೋವಾಗಿತ್ತು. ಕಳೆದ ಮಾರ್ಚ್ 20ರಂದು ಇಳಕಲ್ ನಗರದ ಶ್ರೀ ಶರಣ ಬಸವೇಶ್ವರ ಜಾತ್ರೆಯಲ್ಲಿ ನಡೆದ ಕಳ್ಳತನ ಪ್ರಕರಣವನ್ನು ಭೇದಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಶರಣ ಬಸವೇಶ್ವರ ದೇವಸ್ಥಾನದ ಹಿಂದೆ ಮನೆಯಲ್ಲಿ ಕಳ್ಳತನವಾದಾಗ ಪೊಲೀಸರಿಂದ ಪರಿಶೀಲನೆ ನಡಿದಿದ್ದು, ಡಾಗ್ ಸ್ಕ್ವಾಡ್ ಮತ್ತು ಬೆರಳಚ್ಚು ತಜ್ಞರಿಂದ ತೀವ್ರ ಶೋಧ ನಡೆಸಿದ ಪೊಲೀಸರು ದಿನಾಂಕ 13/6/2025 ರಂದು ರಾಯಚೂರು ಮೂಲದ ಒಬ್ಬ ವ್ಯಕ್ತಿಯನ್ನು ಬಂಧಿಸಿ ಆತನಿಂದ ಸುಮಾರು 45 ಗ್ರಾಂ ಚಿನ್ನವನ್ನು ವಶಪಡಿಸಿಕೊಂಡು ಆತನನ್ನು ನ್ಯಾಯಾಂಗ ಬಂಧನನಕ್ಕೆ ಒಪ್ಪಿಸಿದ್ದಾರೆ. ಅದರಂತೆ ಇನ್ನೊಂದು ಪ್ರತ್ಯೇಕ ಪ್ರಕರಣವಾದ ವಿದ್ಯುತ್ ಟಿ.ಸಿ.ಯಲ್ಲಿನ ಕಾಪರ್ (ತಾಮ್ರ)ಕ್ಕಾಗಿ ನಗರದ ಹೊರ ವಲಯದಲ್ಲಿರುವ ಗ್ರ್ಯಾನೈಟ್ ಫ್ಯಾಕ್ಟರಿಯಲ್ಲಿನ 3 ಟಿ.ಸಿ.ಗಳನ್ನು ಕಳ್ಳರು ಕದ್ದೊಯ್ದರು. ಸದ್ಯ ಈ ಪ್ರಕರಣ ಸಂಬಂಧವಾಗಿ ಸದ್ಯ ಕೊಪ್ಪಳದ ಒಬ್ಬ ವ್ಯಕ್ತಿಯನ್ನು ಬಂಧಿಸಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಹೆಚ್ಚಿನ ತನಿಖೆ ಮುಂದುವರಿಸಿದ್ದಾರೆ


ಕಳುವಾಗಿದ್ದ ಮನೆಯನ್ನು ಪರಿಶೀಲಿಸುತ್ತಿರುವ ಪೊಲೀಸ್ ಅಧಿಕಾರಿಗಳು

ಬಾಗಲಕೋಟ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ಅವರ ನೇತೃವದಲ್ಲಿ ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಹಾಂತೇಶ ಜಿದ್ದಿ ಹುನಗುಂದ ಸಿಪಿಐ ಸುನಿಲ್ ಸವದಿ, ಇಳಕಲ್ ನಗರ ಠಾಣಾ ಪಿಎಸ್ಐ ಶಹಜಹಾಸ್ ನಾಯಕ್, ಇಳಕಲ್ ನಗರ ಠಾಣಾ ಸಿಬ್ಬಂದಿಗಳು ಕಳ್ಳರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ☯

# ಇರಾನ್-ಇಸ್ರೇಲ್ ವಾರ್!

9 ☞

ಈ ವ್ಯವಸ್ಥೆ ಸಂಪೂರ್ಣ ಸುರಕ್ಷಿತವಲ್ಲದಿದ್ದರೂ, ಹಳೆಯ ದಾಳಿಗಳ ಹಾನಿಯನ್ನು ಕಡಿಮೆ ಮಾಡಿದೆ. ಇಸ್ರೇಲ್‌ಗೆ ಪ್ರಾದೇಶಿಕ ವಾಯು ಪ್ರಭುತ್ವವೂ ಇದೆ, ಅಣು ಶಸ್ತ್ರಾಸ್ತ್ರಗಳೂ ಇವೆ.

ಅಮೆರಿಕದ ಬೆಂಬಲವೂ ಇಸ್ರೇಲ್‌ಗೆ ದೊಡ್ಡ ಶಕ್ತಿಯಾಗಿದೆ. ಅಮೆರಿಕ ಈಗಾಗಲೇ ಇರಾನ್ ಮೇಲೆ ಮುಗಿಬಿದ್ದು ಬಾಂಬ್‌ಗಳ ಸುರಿಮಳೆಗೈಯುತ್ತಿದೆ. ಅಮೆರಿಕದ ವಿಮಾನ ಹಡಗುಗಳು, ಪ್ರಾದೇಶಿಕ ವಾಯುನೆಲೆಗಳು ಮತ್ತು ಸಾವಿರಾರು ಸೈನಿಕರು ಇದ್ದಾರೆ. ಇಸ್ರೇಲ್ ದಾಳಿಗಳಿಂದ ಇರಾನ್‌ನ ಪ್ರಾಕ್ಸಿ ಸಂಘಟನೆಗಳು (ಹಮಾಸ್, ಹೆಜ್ಬೊಲ್ಲಾ) ದುರ್ಬಲಗೊಂಡಿವೆ. ಇರಾನ್‌ನ ವಾಯು ರಕ್ಷಣಾ ವ್ಯವಸ್ಥೆ ಕೂಡ ಇತ್ತೀಚೆಗೆ ಹದಗೆಟ್ಟಿದೆ. ಇರಾನ್ ಭಾರೀ ಪ್ರತೀಕಾರದ ಬೆದರಿಕೆ ನೀಡಿದೆ. ಇದು ಇಸ್ರೇಲ್ ಮಾತ್ರವಲ್ಲ, ಅಮೆರಿಕದ ನೆಲೆಗಳನ್ನೂ ಗುರಿಯಾಗಿಸಬಹುದು. ಆದರೆ ಪ್ರಾಕ್ಸಿಗಳ ದುರ್ಬಲತೆ ಮತ್ತು ರಕ್ಷಣಾ ವ್ಯವಸ್ಥೆಯ ಹಾನಿಯಿಂದ ಇರಾನ್‌ಗೆ ಆಯ್ಕೆಗಳು ಕೂಡ ಕಡಿಮೆಯಾಗಿವೆ. ಇಸ್ರೇಲ್ ಕೂಡ ಇರಾನ್ ಅಣು ರೇಖೆ ದಾಟದಂತೆ ತಡೆಯಲು ಬದ್ಧವಾಗಿದೆ. ಇದರಿಂದ ಯುದ್ಧದ ಅಪಾಯ ಹೆಚ್ಚಾಗಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಎರಡೂ ದೇಶಗಳ ಸೇನಾ ಶಕ್ತಿಗೆ ಸಂಖ್ಯಾತ್ಮಕ, ತಂತ್ರಜ್ಞಾನ, ಅನುಭವ ಮತ್ತು ಜಾಗತಿಕ ಬೆಂಬಲದ ಅಂಶಗಳು ಪ್ರಭಾವ ಬೀರುತ್ತಿವೆ.

**ಇರಾನ್ ಬೆಂಬಲಕ್ಕೆ ನಿಂತ ರಷ್ಯಾ!**

ಇದೀಗ ಯುದ್ಧ ಹತ್ತನೇ ದಿನಕ್ಕೆ ಕಾಲಿಟ್ಟು ಅಮೆರಿಕ ಇಸ್ರೇಲ್ ಪರ ಹೋರಾಡುತ್ತಿರುವ ಈ ಸಂದರ್ಭದಲ್ಲಿ ರಷ್ಯಾ, ಇರಾನ್ ಬೆಂಬಲಕ್ಕೆ ನಿಂತುಬಿಟ್ಟಿದೆ! ರಷ್ಯಾ ಇರಾನ್ ಬೆಂಬಲಕ್ಕೆ ನಿಲ್ಲಲು ಕಾರಣವೇನು ಅಂದರೆ, ಇರಾನ್ ಪರಮಾಣು ಉತ್ಪಾದಿಸುವ ಬುಶರೆನ್



ಪರಮಾಣು ಕೇಂದ್ರಕ್ಕೆ ಇಂಧನ ಪೂರೈಸುವುದು ರಷ್ಯಾ!

**ಬ್ಯುಸಿನೆಸ್ ಡೀಲ್!!**

ಇಸ್ರೇಲ್ ಇರಾನ್ ಯುದ್ಧದಲ್ಲಿ ಇದೀಗ ಅಮೇರಿಕ ರಷ್ಯಾ ನಡುವೆ ದುಷ್ಮನಿ ಹುಟ್ಟಿಕೊಂಡಿರುವುದರಿಂದ ಇದರ ಪರಿಣಾಮ ಇಡೀ ಜಗತ್ತಿನ ಮೇಲಾಗುವ ಅಪಾಯವಿದೆ! ಸಧ್ಯ, ಭಾರತ ಯಾರ ಪರ ಅಥವಾ ವಿರೋಧವಾಗಿ ಮಾತಾಡದೆ ಮೌನಿಯಾಗಿದೆ. ಇದರಿಂದ ಅಮೆರಿಕ ದುಷ್ಮನಿ ಕಟ್ಟಿಕೊಳ್ಳಬೇಕಾದ ಅಪಾಯವಿರುವುದು ಸುಳ್ಳಲ್ಲ! ಒಟ್ಟಾರೆ, ಈಗ ಜಗತ್ತಿನೆಲ್ಲೆಡೆ 'ಯುದ್ಧದಾಹ' ಶುರುವಾಗಿದೆ. ಯಾರು ಯಾರ ಮೇಲೆ ಯಾವಾಗ ಮುಗಿಬೀಳುತ್ತಾರೋ ಹೇಳಲಾಗದು. ಈಗ ರಷ್ಯಾ ವರ್ಸಸ್ ಅಮೆರಿಕ ವಾರ್ ಶುರುವಾದರೆ ಅದನ್ನು ಮೂರನೇ ಮಹಾಯುದ್ಧ ಎಂದೇ ಪರಿಗಣಿಸಬೇಕಾಗುತ್ತದೆ! ☯

# ಶಿಲ್ಲಾಂಗ್ ಹನಿಮೂನ್ ಕಿಲ್ಲಿಂಗ್!!

3 ☞

ಕಸ್ಟಡಿಗೆ ಪಡೆದಿಕೊಂಡು ಅಸಲಿ ತನಿಖೆ ಶುರು ಮಾಡಲಾಯಿತು!

ಖಾಸಿ ಹಿಲ್ಸ್ ಕಣಿವೆಗೆ ಕರೆದೊಯ್ದು ರಾಜಾ ರಘುವಂಶಿ ಕೊಲೆಯಾದ ಸ್ಥಳದಲ್ಲಿ 'ದೃಶ್ಯ' ಮರು ಸೃಷ್ಟಿಸಿ ಅವರೆಲ್ಲ ರಾಜಾನನ್ನು ಹೇಗೆ ಹಿಂಬಾಲಿಸಿದ್ದರು, ಹೇಗೆ ಕೊಂದರು ಎಂಬುದನ್ನೆಲ್ಲ ಚಿತ್ರಿಸಿಕೊಂಡರು. ಬಳಿಕ, ರಾಜಾ ಹಾಗೂ ಸೋನಮ್ ಇಬ್ಬರ ಮನೆಗಳಿಗೂ ಕರೆದೊಯ್ದು ಕುಟುಂಬದವರ ಎದಿರು ನಿಲ್ಲಿಸಿ ಸ್ಟೇಟ್‌ಮೆಂಟ್ ಮಾಡಿದರು.


ಪೊಲೀಸ್ ಕಸ್ಟಡಿಯಲ್ಲಿ ಆರೋಪಿಗಳು

**ತಪ್ಪೊಪ್ಪಿಕೊಂಡಳು ಚಿನಾಲಿ!**

ರಾಜಾ ರಘುವಂಶಿ ಅಷ್ಟು ಸಿಗಿವಂತ ಉದ್ಯಮಿಯಾದರೂ ಚೂರು ಗರ್ವ ಇರಲಿಲ್ಲ. ಡೌನ್ ಟು ಅರ್ಥ್ ಅಂತಾರಲ್ಲ ಹಾಗೆ ಸರಳ ಜೀವಿ. ಮುಖ್ಯವಾಗಿ, ಸಹೃದಯಿ. ಅಂತಾ ಮನುಷ್ಯನನ್ನು ನಯವಾಗಿ ವಂಚಿಸಿ ಕೊಲ್ಲಿಸಿದ್ದಳು ಸೋನಮ್! ವಿಷಯ ಗೊತ್ತಾದ ಬಳಿಕ ಅವಳ ಮುಖವನ್ನು ಅವಳ ಕುಟುಂಬದವರೇ ನೆಟ್ಟಗೆ ನೋಡಲಿಲ್ಲ. ಇನ್ನೂ, ರಾಜಾ ರಘುವಂಶಿ ತಾಯಿ, ಸೋದರ ಸೋದರಿಯರು ಈಕೆ ಇಷ್ಟು ಚೆನ್ನಾಗಿದ್ದಾಳೆ. ಹೆಸರಿಗೆ ತಕ್ಕಂತೆ ಚಿನ್ನ ಅಂದುಕೊಂಡಿದ್ವಿ... ನನಗೆ ಬಾಯ್ ಫ್ರೆಂಡ್ ಇದ್ದಾನೆ, ಈ ಮದುವೆ ಬೇಡ ಅಂದಿದ್ರೆ ಸಾಕಿತ್ತಲ್ಲ... ನಮ್ಮ ಮಗ ಉಳ್ಕೊತಿದ್ದ! ಎಂಥ ಅನ್ಯಾಯ ಮಾಡಿಬಿಟ್ಲು ಕ್ರೂರಿ... ಅಯ್ಯೋ... ಎಂದು ಗೋಳಾಡಿ ಕಣ್ಣೀರಿಟ್ಟಿದ್ದಾರೆ.


ಸೋನಮ್ ತಾಯಿ ಹಾಗೂ ರಘುವಂಶಿ ತಾಯಿ

ಸೋನಮ್‌ಳ ಬಾಯ್ ಫ್ರೆಂಡ್ ರಾಜ್ ಕುಶ್ವಾನಾದರೂ ಸ್ವಲ್ಪ ಯೋಚಿಸಬೇಕಿತ್ತು. ಅವನಿಗೆ ರಾಜಾ ರಘುವಂಶಿ ಮಾಡಿದ್ದ ದ್ರೋಹವಾದರೂ ಏನು? ಅವನಿಗೆ ಸತ್ಯ ಗೊತ್ತಿದ್ರೆ ಸೋನಮ್‌ಳನ್ನು ಮದುವೆ ಆಗ್ತಿದ್ನೇ? ಮೋಸ ಮಾಡಿದ್ದೆಲ್ಲ ಮಿಟುಕಲಾಡಿ ಸೋನಿಯೇ ಅಲ್ವೇ. ಕುಶ್ವಾ ಅವನನ್ನು ಕೊಲ್ಲಬಾರದಿತ್ತು. ಆರೋಪಿಗಳೆಲ್ಲ ಈಗ ನ್ಯಾಯಾಂಗ ಬಂಧನದಲ್ಲಿದ್ದಾರೆ. ಸಾಕ್ಷಿಗಳನ್ನು ನಾಶ ಮಾಡಿ ಪೊಲೀಸರಿಗೆ ಲಂಚ ಕೊಟ್ಟು ಲಾಯರ್‌ಗಳಿಂದ ಆಟ ಆಡಿಸಿ ಬಚಾವ್ ಆಗಲು ಅದೇನು ಕರ್ನಾಟಕ ರಾಜ್ಯವಲ್ಲ! ಮೇಘಾಲಯ! ಅಲ್ಲಿ ಕ್ರೈಂ ಎಸಗಿರೋದು ಪ್ರೂವ್ ಆದರೆ ಮುಗೀತು, ಮರಣ ದಂಡನೆ ಫಿಕ್ಸ್! ☯

# ಭ್ರಷ್ಟರನ್ನು ಬಗ್ಗು ಬಡಿಯುವ ಲೋಕಾಯುಕ್ತರೇ ಭ್ರಷ್ಟರಾದರೆ ಹೇಗೆ?!

4 ☜

ಹಿನ್ನಲೆಯಲ್ಲಿ ಸೇವೆಯಿಂದ ವಜಾಗೊಳಿಸಲಾಗಿತ್ತು. ಸದ್ಯ, ಬಂಧಿತನಾಗಿರುವ ನಿಂಗಪ್ಪನ ಮೊಬೈಲ್ ಫೋನ್ ಅನ್ನು ಸಿಐಡಿ ಇಲಾಖೆಯ ಸೈಬರ್ ಕ್ರೈಂ ವಿಭಾಗಕ್ಕೆ ಕ್ರಿಪ್ಟೋ ಕರೆನ್ಸಿ ವಹಿವಾಟುಗಳ ಪರಿಶೀಲನೆಗಾಗಿ ರವಾನಿಸಲಾಗಿದೆ! ಐನಾತಿ ನಿಂಗಪ್ಪ 'ಬೈನಾನ್ಸ್' ಮತ್ತು 'ಬಿಟ್‌ಗೆಟ್' ಸೇರಿದಂತೆ ಒಟ್ಟು ಎಂಟು ಕ್ರಿಪ್ಟೋ ಕರೆನ್ಸಿ ವಿನಿಮಯ ವೇದಿಕೆಗಳಲ್ಲಿ 4.19 ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಿದ್ದಾರೆ ಎಂದು ತಿಳಿದುಬಂದಿದೆ!

ನಿಂಗಪ್ಪನ ಹೆಸರಿನಲ್ಲಿ ಮತ್ತು ಆತನ ಪತ್ನಿ ಚಂದ್ರಕಲಾ ಹೆಸರಿನಲ್ಲಿ ಹಾಗೂ ಕೆಲವು ಐಪಿಎಸ್ ಅಧಿಕಾರಿಗಳ ಹೆಸರಿನಲ್ಲಿ ಹೂಡಿಕೆ ಮಾಡಲಾಗಿದೆಯಂತೆ! ಲೋಕಾಯುಕ್ತ ಪೊಲೀಸರು ಚಿತ್ರದುರ್ಗದಲ್ಲಿರುವ ನಿಂಗಪ್ಪ ನಿವಾಸದಿಂದ ಸುಮಾರು 90 ಗ್ರಾಂ ಚಿನ್ನದ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ. ಮತ್ತು ಹಲವು ದಾಖಲೆಗಳನ್ನು ಸಹ ವಶಪಡಿಸಿಕೊಂಡಿದ್ದಾರೆ.

> **ಕರ್ನಾಟಕ ಲೋಕಾಯುಕ್ತ, ಬೆಂಗಳೂರು**
>
> ಸಂಖ್ಯೆ:ಲೋಕ್/ಐಎನ್‌ವಿ(ಜಿ)/ಸಿಟಿ-2/ಕ್ರೈಂ.28/2025 ದಿನಾಂಕ: 17.06.2025
>
> **: ಪತ್ರಿಕಾ ಪ್ರಕಟಣೆ :**
>
> ದಿನಾಂಕ:02.06.2025 ರಂದು ನಿಂಗಪ್ಪ ಜಿ @ ನಿಂಗಪ್ಪ ಸಾವಂತ ಬಿನ್ ಲೇಟ್. ಗುಡಿಯಪ್ಪ. 46 ವರ್ಷ, # ವೆಂಕಟೇಶ್ವರ ನಿಲಯ, ಆಶ್ರಮ ರಸ್ತೆ, 5ನೇ ಕ್ರಾಸ್, ವಿಜಯನಗರ, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ-577527. ಸ್ವಂತ ವಿಳಾಸ ತಾಳಕಟ್ಟೆ ಗ್ರಾಮ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. ಎಂಬ ಖಾಸಗಿ ವ್ಯಕ್ತಿಯು ಲೋಕಾಯುಕ್ತ ಅಧಿಕಾರಿಗಳ ಸೋಗಿನಲ್ಲಿ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳ ಹೆಸರುಗಳನ್ನು ಬಳಸಿಕೊಂಡು ಸರ್ಕಾರಿ ಅಧಿಕಾರಿಗಳಿಗೆ ದೂರವಾಣಿ ಮೂಲಕ ಕರೆ ಮಾಡಿ ನಿಮ್ಮ ವಿರುದ್ಧ ದೂರು ದಾಖಲಾಗಿದ್ದು, ದಾಳಿ ಮಾಡುವ ಸಂಭವ ಇರುತ್ತದೆಂದು ಸರ್ಕಾರಿ ಅಧಿಕಾರಿಗಳಿಗೆ ಬೆದರಿಸಿ ಹಣಕ್ಕೆ ಬೇಡಿಕೆ ಇಟ್ಟು ಹಣ ವಸೂಲಿ ಮಾಡುತ್ತಿರುತ್ತಾರೆಂಬ ದೂರಿನ ಮೇರೆಗೆ ಕರ್ನಾಟಕ ಲೋಕಾಯುಕ್ತ ಮೊ.ಸಂ: 28/2025 ಕಲಂ 7A, 7(a) ಲಂಚ ಪ್ರತಿಬಂಧಕ ಕಾಯ್ದೆ, 1988 ರೀತ್ಯಾ ಪ್ರಕರಣ ದಾಖಲಾಗಿ ತನಿಖೆಯಲ್ಲಿರುತ್ತದೆ.
>
> ಮೇಲ್ಕಂಡ ಪ್ರಕರಣದ ತನಿಖೆ ಪ್ರಗತಿಯಲ್ಲಿದ್ದು ಆರೋಪಿ ನಿಂಗಪ್ಪ @ ನಿಂಗಪ್ಪ ಸಾವಂತ ರವರು ಅಬಕಾರಿ ಇಲಾಖೆಯ ವಿವಿಧ ಅಧಿಕಾರಿಗಳಿಂದ ಹಣವನ್ನು ಕಳೆದ 6 ತಿಂಗಳಿನಿಂದ ವಸೂಲಿ ಮಾಡಿದ್ದಾಗಿ ಒಪ್ಪಿಕೊಂಡಿರುತ್ತಾನೆ. ಈ ರೀತಿ ವಸೂಲಿ ಮಾಡಿದ ಹಣವನ್ನು ತನ್ನ ಹಾಗೂ ತನ್ನ ಸಂಬಂಧಿಕರುಗಳ ಹೆಸರಿನಲ್ಲಿ ಕ್ರಿಪ್ಟೋ ಕರೆನ್ಸಿಯಲ್ಲಿ ಹೂಡಿಕೆ ಮಾಡಿರುತ್ತೇನೆಂದು ಒಪ್ಪಿಕೊಂಡಿರುತ್ತಾನೆ. ಆತನ ಮೊಬೈಲ್‌ನ್ನು ಪರಿಶೀಲಿಸಲಾಗಿ [illegible]

### ವ್ಯವಹಾರ ಮಾಡುತ್ತಿದ್ದುದು ಹೇಗೆ?

ಮಾಜಿ ಪೊಲೀಸ್ ನಿಂಗಪ್ಪನ ಕಾರ್ಯ ವಿಧಾನ ಹೇಗಿತ್ತೆಂದರೆ ಐಪಿಎಸ್ ಅಧಿಕಾರಿಗಳ ಹೆಸರಿನಲ್ಲಿ ಮತ್ತು ಲೋಕಾಯುಕ್ತರ ಹೆಸರಿನಲ್ಲಿ ಅವರ ಫೋನ್ ಸಂಖ್ಯೆಯನ್ನು ಸೇವ್ ಮಾಡಿಕೊಳ್ಳುವುದು. ನಂತರ ಲೋಕಾಯುಕ್ತದಲ್ಲಿರುವ ತನ್ನ 'ಮೂಲಗಳಿಂದ' ಈ ವಾರ ರೇಡ್ ಎಲ್ಲೆಲ್ಲಿ? ಎಂದು ತಿಳಿದುಕೊಳ್ಳುವುದು. ನಂತರ ಆಯಾ ಭ್ರಷ್ಟ ಅಧಿಕಾರಿಗಳಿಗೆ ಸ್ಕ್ರೀನ್ ಶಾಟ್‌ಗಳನ್ನು ಕಳುಹಿಸುತ್ತಿದ್ದನು! ಈ ಮೂಲಕ ತಾನು ಉನ್ನತ ಅಧಿಕಾರಿಗಳೊಂದಿಗೆ ನಿಕಟ ಸಂಬಂಧ ಹೊಂದಿದ್ದೇನೆ, ಡೀಲ್ ಮಾಡಿ ನಿಮ್ಮನ್ನು ರಕ್ಷಿಸುತ್ತೇನೆ ಎಂಬ ಭಾವನೆ ಮೂಡಿಸುತ್ತಿದ್ದನು!

''ಇಂದು ಬೆಳಗ್ಗೆ 7 ಜಿಲ್ಲೆಗಳಲ್ಲಿ ಲೋಕಾಯುಕ್ತ ದಾಳಿ. ಜಾಗರೂಕರಾಗಿರಿ'' ಎಂಬಂತಹ ಎಚ್ಚರಿಕೆ ಸಂದೇಶಗಳನ್ನು ಕಳುಹಿಸುತ್ತಿದ್ದನು. ವಿಚಾರಣೆಗಾಗಿ ಲೋಕಾಯುಕ್ತ ಪೊಲೀಸರ ಮುಂದೆ ಹಾಜರಾದ ಅಬಕಾರಿ ಅಧಿಕಾರಿಗಳ ಪ್ರಕಾರ, ನಿಂಗಪ್ಪ ಸಿಮ್ ಕಾರ್ಡ್‌ಗಳನ್ನು ಖರೀದಿಸಿ ಅವುಗಳನ್ನು ಭ್ರಷ್ಟಾಚಾರ ನಿಗ್ರಹ ದಳ ಮತ್ತು ಲೋಕಾಯುಕ್ತದಿಂದ ನಿರ್ದಿಷ್ಟ ಐಪಿಎಸ್ ಅಧಿಕಾರಿಗಳ ಹೆಸರಿನಲ್ಲಿ ಉಳಿಸಿದ್ದನು. ಅಧಿಕಾರಿಗಳನ್ನು ಸಂಪರ್ಕಿಸಿದಾಗ ಈ ಹೆಸರುಗಳು ಕಾಲರ್ ಐಡಿ ಅಪ್ಲಿಕೇಶನ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದವು! ಇದು ತನಿಖಾಧಿಕಾರಿಗಳಲ್ಲಿ ದಿಗ್ಭ್ರಮೆ ಹುಟ್ಟಿಸಿತ್ತು.

ಅಬಕಾರಿ ಇಲಾಖೆ, ಪ್ರಾದೇಶಿಕ ಸಾರಿಗೆ ಕಚೇರಿಗಳು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳನ್ನು ಗುರಿಯಾಗಿಸಿಕೊಂಡು 20,000 ರಿಂದ 25 ಲಕ್ಷ ರೂಪಾಯಿಗಳವರೆಗೆ ಹಣವನ್ನು ಸಂಗ್ರಹಿಸಿದ್ದನು ಎಂದು ಆರೋಪಿಸಲಾಗಿದೆ. ತನಿಖೆಯಿಂದ ತಿಳಿದು ಬಂದಿರುವ ಪ್ರಕಾರ, ಆತ ಅಬಕಾರಿ ಅಧಿಕಾರಿಗಳಿಂದಲೇ ಸುಮಾರು 58 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿದ್ದಾನೆ. ಲೋಕಾಯುಕ್ತ ಪ್ರಧಾನ ಕಚೇರಿಗೆ ಆಗಾಗ್ಗೆ ಭೇಟಿ ನೀಡುವುದು ಕೂಡ ಅನುಮಾನಗಳನ್ನು ಹುಟ್ಟುಹಾಕಿತ್ತು.



ಲೋಕಾಯುಕ್ತ ನ್ಯಾ. ಬಿ.ಎಸ್.ಪಾಟೀಲರು


ಹಿರಿಯ ಅಧಿಕಾರಿಗಳೊಂದಿಗೆ ಸಂಪರ್ಕ ಹೊಂದಿದ್ದಾನೆಂದು ಹೇಳಿಕೊಳ್ಳುವ ಯಾರೋ ಸರ್ಕಾರಿ ಅಧಿಕಾರಿಗಳಿಗೆ ಅನುಮಾನಾಸ್ಪದ ಕರೆಗಳು ಬರುತ್ತಿವೆ ಎಂದು ಲೋಕಾಯುಕ್ತ ಪೊಲೀಸರಿಗೆ ಮಾಹಿತಿದಾರರು ಮಾಹಿತಿ ನೀಡಿದ ನಂತರ ನಿಂಗಪ್ಪ ಲೋಕಾಯುಕ್ತ ಸಬ್‌ಇನ್ಸ್‌ಪೆಕ್ಟರ್ ಆಗಿ ನಾಟಕೀಯತೆ ಮಾಡುತ್ತಿರುವುದು ಬೆಳಕಿಗೆ ಬಂತು. ಬೆಂಗಳೂರಿನಲ್ಲಿರುವ ಲೋಕಾಯುಕ್ತ ಪ್ರಧಾನ ಕಚೇರಿಗೆ ನಿಂಗಪ್ಪ ನಿಯಮಿತವಾಗಿ ಭೇಟಿ ನೀಡುತ್ತಿದ್ದನು. ಕೆಲವು ಐಪಿಎಸ್ ಅಧಿಕಾರಿಗಳನ್ನು ಭೇಟಿಯಾಗುತ್ತಿದ್ದನು.


ನಿಂಗಪ್ಪನನ್ನು ಗುರಿಯಿಟ್ಟುಕೊಂಡ ಅಧಿಕಾರಿಗಳನ್ನು ಸಂಪರ್ಕಿಸಿ ದಾಳಿಯಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡಲು ಹಣ ಕೇಳುತ್ತಿದ್ದನು. ಕೆಲವು ಸಂದರ್ಭಗಳಲ್ಲಿ, ಯುಪಿಐ ವರ್ಗಾವಣೆಯ ಮೂಲಕ ಲಂಚವನ್ನು ಪಡೆಯುತ್ತಿದ್ದನು. ನಂತರ ಮಧ್ಯವರ್ತಿಗಳಿಗೆ ಹಣವನ್ನು ಹಸ್ತಾಂತರಿಸುತ್ತಿದ್ದನು.ನಂತರ ಡಿಜಿಟಲ್ ರೂಪದಲ್ಲಿ ಅವರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸುತ್ತಿದ್ದನು. ನಂತರ ಅದನ್ನು ಡಾಲರ್‌ಗಳಾಗಿ ಪರಿವರ್ತಿಸಿ ಕ್ರಿಪ್ಟೋ ಕರೆನ್ಸಿ ವ್ಯಾಲೆಟ್‌ಗಳಿಗೆ ಅಂಟಿಸಲಾಗುತ್ತಿತ್ತು ಅರ್ಥಾತ್ ವರ್ಗಾಯಿಸಲಾಗುತ್ತಿತ್ತು!

ಅಂತೂ ಇಂತೂ ಐನಾತಿ ಪೊಲೀಸ್ ಪೇದೆ ನಿಂಗಪ್ಪ ಅರೆಸ್ಟ್ ಆಗಿದ್ದಾನೆ. ಈತನನ್ನು ನಂಬಿ ಹೆಗಲ ಮೇಲೆ ಕೂರಿಸಿಕೊಂಡ ತಪ್ಪಿಗೆ ಜೋಶಿಯು ಸೇರಿದಂತೆ ಹತ್ತಾರು ಅಧಿಕಾರಿಗಳು ತಮ್ಮ ಬುಡಕ್ಕೆ ಬಿಸಿ ನೀರು ಬಿಟ್ಟುಕೊಂಡಿದ್ದಾರೆ! ಬಂಧನದ ಭೀತಿಯಿಂದ ಮನೆ ಬಿಟ್ಟು ಕೋರ್ಟ್‌ಗಳ ಬಳಿ ಬೇಲ್‌ಗಾಗಿ ಅಡ್ಡಾಡುತ್ತಿದ್ದಾರೆ! ಲೋಕಾಯುಕ್ತದಲ್ಲಿ ಲಂಚಾವತಾರ ಆರೋಪ ಭುಗಿಲೆದ್ದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕರ್ತವ್ಯ ನಿರ್ವಹಿಸುತ್ತಿರುವ ಅನೇಕ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಹೋಲ್‌ಸೇಲಾಗಿ ಸರ್ಕಾರ ವರ್ಗಾವಣೆ ಮಾಡಲು ಚಿಂತನೆ ನಡೆಸಿದೆ!

ಅಂದಹಾಗೆ, ಲೋಕಾಯುಕ್ತದಲ್ಲಿ 'ಡೀಲ್' ಆರೋಪಿ ಭುಗಿಲೆದ್ದ ಹಿನ್ನೆಲೆಯಲ್ಲಿ ಲೋಕಾಯುಕ್ತ ಬಿ.ಎಸ್. ಪಾಟೀಲ್ ಹಾಗೂ ಇಬ್ಬರು ಉಪ ಲೋಕಾಯುಕ್ತರು ಭಾರಿ ಅಸಮಾಧಾನ ವ್ಯಕ್ತಪಡಿಸಿ ಈ ಬಗ್ಗೆ ಆಂತರಿಕ ತನಿಖೆಗೆ ಆದೇಶಿಸಿದ್ದರು. ನಂತರದಲ್ಲಿ ಬಿಚ್ಚಿಕೊಂಡಿದ್ದೆ ಮಾಜಿ ಪೇದೆ ನಿಂಗಪ್ಪನ ಸುಲಿಗೆ ಕರ್ಮಕಾಂಡ! ಒಳ್ಳೆಯ ಅಧಿಕಾರಿ ಎಂದು ಭಾವಿಸಿದ್ದ 'ಜೋಶಿ'ಯವರ ಇನ್ನೊಂದು ಮುಖ!! ☯

## ಲೋಕಾಯುಕ್ತಕ್ಕೆ ಭೂತದಂತೆ ಕಾಡಿದ್ದ ಭಾಸ್ಕರ್ ರಾವ್ - ಅಶ್ವಿನ್ ರಾವ್!






ಆಗಸ್ಟ್ 11, 2022ರಂದು ಕರ್ನಾಟಕ ಹೈಕೋರ್ಟ್ ಆದೇಶದ ಪ್ರಕಾರ, ಕರ್ನಾಟಕ ಲೋಕಾಯುಕ್ತ ಪೊಲೀಸರನ್ನು ರಾಜ್ಯದಲ್ಲಿ ಪ್ರಾಥಮಿಕ ಭ್ರಷ್ಟಾಚಾರ ವಿರೋಧಿ ಸಂಸ್ಥೆಯಾಗಿ ಮರುಸ್ಥಾಪಿಸಲಾಯಿತು. ರಾಜ್ಯ ನಿಯಂತ್ರಿತ ಭ್ರಷ್ಟಾಚಾರ ನಿಗ್ರಹ ದಳ (ACB) ಅನ್ನು ರದ್ದುಗೊಳಿಸಲಾಯಿತು. ಭ್ರಷ್ಟಾಚಾರವನ್ನು ನಿಯಂತ್ರಿಸುವಲ್ಲಿ ACB ನಿಷ್ಪರಿಣಾಮಕಾರಿಯಾಗಿದೆ ಎಂದು ಹೈಕೋರ್ಟ್ ತೀರ್ಪು ನೀಡಿದ ನಂತರ, ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಾವಧಿಯಲ್ಲಿ ಅದನ್ನು ರದ್ದುಪಡಿಸಲಾಯಿತು!

ಈ ಹಿಂದೆ, ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಭ್ರಷ್ಟಾಚಾರದ ಆರೋಪಗಳ ನಂತರ ಕರ್ನಾಟಕದ ಕಾಂಗ್ರೆಸ್ ಸರ್ಕಾರವು 2016ರಲ್ಲಿ ಎಸಿಬಿಯನ್ನು ರಚಿಸಿತ್ತು! ಕರ್ನಾಟಕದ ಮಾಜಿ ಮುಖ್ಯ ನ್ಯಾಯಮೂರ್ತಿಯಾಗಿದ್ದ ಆಗಿನ ಲೋಕಾಯುಕ್ತ ನ್ಯಾಯಮೂರ್ತಿ ಭಾಸ್ಕರ್ ರಾವ್ ಮತ್ತು ಅವರ ಪುತ್ರ ಅಶ್ವಿನ್ ರಾವ್ ಅವರು ಸುಲಿಗೆ ದಂಧೆಯಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಸರ್ಕಾರವು 2016ರಲ್ಲಿ ಎಸಿಬಿಯನ್ನು ರಚಿಸುವ ಮೂಲಕ ಲೋಕಾಯುಕ್ತದ ಅಧಿಕಾರವನ್ನು ಮೊಟಕು ಗೊಳಿಸಿತ್ತು.

ದಶಕದ ಹಿಂದೆ, ಲೋಕಾಯುಕ್ತ ಹಗರಣದ ತನಿಖೆ ನಡೆಸಿದ್ದ ಕರ್ನಾಟಕ ಪೊಲೀಸ್ ವಿಶೇಷ ತನಿಖಾ ತಂಡವು, ಭ್ರಷ್ಟ ಅಧಿಕಾರಿಗಳನ್ನು ಹಾಗೂ ಲೋಕಾಯುಕ್ತ ಅಧಿಕಾರಿಗಳೊಂದಿಗೆ ಸಂಬಂಧ ಹೊಂದಿರುವ ಪತ್ರಕರ್ತರು, ಸಾರ್ವಜನಿಕ ಸಂಪರ್ಕ ಅಧಿಕಾರಿಗಳು ಮತ್ತು ಇತರೆ ಮಧ್ಯವರ್ತಿಗಳಿಂದ ಸುಲಿಗೆಗೆ ಗುರಿಯಾಗಿಸಿಕೊಂಡಿದ್ದ ಈ ಒಂದು ವಿಧಾನವನ್ನು ಬಹಿರಂಗಪಡಿಸಿದ್ದನ್ನುನಾವಿಲ್ಲಿ ಸ್ಮರಿಸಬಹುದಾಗಿದೆ. ☯

## ತನ್ನ ಮೊಬೈಲ್ ಸಂಖ್ಯೆಗೆ ಅಧಿಕಾರಿಗಳ ಫೋಟೋ!

ನಿಂಗಪ್ಪ ಲೋಕಾಯುಕ್ತ ಅಧಿಕಾರಿಯಂತೆ ನಟಿಸಿ, ತನ್ನ ವಾಟ್ಸಾಪ್ ಸಂಪರ್ಕಗಳಲ್ಲಿ ಸೇವ್ ಆಗಿದ್ದ ಲೋಕಾಯುಕ್ತ ನಿವೃತ್ತ ನ್ಯಾಯಾಧೀಶ ಬಿ.ಎಸ್. ಪಾಟೀಲ್, ಉಪ ಲೋಕಾಯುಕ್ತರು ಹಾಗೂ ಲೋಕಾಯುಕ್ತ ಹಿರಿಯ ಪೊಲೀಸ್ ಅಧಿಕಾರಿಗಳ ಭಾವ ಚಿತ್ರಗಳ ಜೊತೆಗೆ ಅವರ ಹೆಸರುಗಳನ್ನು ಬಳಸಿಕೊಂಡು ಸರ್ಕಾರಿ ಅಧಿಕಾರಿಗಳಿಗೆ ತನ್ನ ಮೊಬೈಲ್ ಫೋನ್ ಮೂಲಕ ಕರೆ ಮಾಡಿ ಭ್ರಷ್ಟಾಚಾರ ವಿರೋಧಿ ದಾಳಿಗಳ ಬಗ್ಗೆ ಬೆದರಿಕೆ ಹಾಕಿದ್ದಾನೆ ಎಂಬುದಾಗಿ ಎರಡನೇ ಎಫ್‌ಐ ಆರ್‌ನಲ್ಲಿ ವಂಚನೆಯ ವಿವರವಿದೆ!



ಎಸ್ಪಿ ವಂಶಿಕೃಷ್ಣ

ಕಳೆದ ಜೂನ್ 2ರಂದು ಸಲ್ಲಿಸಲಾದ ಪೊಲೀಸ್ ದೂರಿನ ಪ್ರಕಾರ, ಇತ್ತೀಚಿನ ತಿಂಗಳುಗಳಲ್ಲಿ ಲೋಕಾಯುಕ್ತ ಅಧಿಕಾರಿಗಳ ಗುರುತನ್ನು ಬಳಸಿಕೊಂಡು ಜನರು ಸುಲಿಗೆ ಮಾಡುತ್ತಿರುವ ಬಗ್ಗೆ ಲೋಕಾಯುಕ್ತ ಪೊಲೀಸರು ಹಲವಾರು ದೂರುಗಳನ್ನು ಸ್ವೀಕರಿಸಿದ ನಂತರ ನಿಂಗಪ್ಪನ ಪ್ರಕರಣ ಬೆಳಕಿಗೆ ಬಂದಿದೆ!

ಬೆದರಿಕೆ ಕರೆಗಳಿಗೆ ಹೆದರಿ ಹಲವಾರು ಸರ್ಕಾರಿ ಅಧಿಕಾರಿಗಳು ನಕಲಿ ಲೋಕಾಯುಕ್ತ ಅಧಿಕಾರಿಗಳೆಂದು ನಟಿಸಿ ಕರೆ ಮಾಡುವವರಿಗೆ ಸಾವಿರಾರು ಮತ್ತು ಲಕ್ಷ ರೂಪಾಯಿ ನಗದು/ಫೋನ್ ಪೇ ಅನ್ನು ತಲುಪಿಸಿದ್ದಾರೆ ಎಂದು ಪೊಲೀಸ್ ದೂರಿನಲ್ಲಿ ತಿಳಿಸಲಾಗಿದೆ!!

ಕೆಲವು ಅಧಿಕಾರಿಗಳು ಈ ಬಗ್ಗೆ ಸ್ವತಃ ಅಥವಾ ಲೋಕಾಯುಕ್ತ ಕಚೇರಿಯಲ್ಲಿ ತಮ್ಮ ಪರಿಚಯಸ್ಥರ ಮೂಲಕ ವಿಚಾರಿಸಿದ ನಂತರ, ನಿಜವಾದ ಅಧಿಕಾರಿಗಳೇ ತಮಗೆ ಬೆದರಿಕೆ ಹಾಕಿಲ್ಲ ಎಂಬ ಮಾಹಿತಿ ಸಿಕ್ಕಿ ಗರಬಡಿಸಿಕೊಂಡು ಸಂಬಂಧಿತ ಪೊಲೀಸ್ ಠಾಣೆಗಳಿಗೆ ದೂರು ನೀಡಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ!

ಇತ್ತೀಚೆಗೆ ತುಮಕೂರು ಕಡೆ ಆರ್‌ಟಿಒ ಅಧಿಕಾರಿಯೊಬ್ಬರು ತನಗೆ ವಂಚನೆ ಆಗಿದ್ದರ ಬಗ್ಗೆ ದೂರು ದಾಖಲಿಸಿದ್ದು, ಸದರಿ ಸುಲಿಗೆ ಪ್ರಕರಣದಲ್ಲಿ ಐನಾತಿ ನಿಂಗಪ್ಪ ಬೆಂಗಳೂರು ನಗರ ದಕ್ಷ ಎಸ್ಪಿ ಕೆ. ವಂಶಿ ಕೃಷ್ಣ ಅವರ ಫೋಟೋವನ್ನು ತನ್ನ ಫೋನ್ ಸಂಖ್ಯೆಗೆ ಡಿಸ್‌ಪ್ಲೇ ಪಿಕ್ಚರ್ ಆಗಿ ಬಳಸಿಕೊಂಡು ವಾಟ್ಸಾಪ್ ಕರೆ ಮಾಡಿ ಹಣಕ್ಕಾಗಿ ಬೇಡಿಕೆ ಇಟ್ಟಿದ್ದ... ಎಂದು ಆರೋಪಿಸಲಾಗಿದೆ!!

ಇತರ ಕೆಲವು ಪ್ರಕರಣಗಳಲ್ಲಿ, ಸುಲಿಗೆ ಚಟುವಟಿಕೆಗಳ ಸಮಯದಲ್ಲಿ ತನ್ನ ಗುರುತಿನ ಚೀಟಿಗಳನ್ನು ಸಾಬೀತುಪಡಿಸಲು ನಿಂಗಪ್ಪ, ತನ್ನಲ್ಲಿದ್ದ ಲೋಕಾಯುಕ್ತ ಅಧಿಕಾರಿಗಳ ಹೆಸರುಗಳೊಂದಿಗೆ ತನ್ನ ಸಂಪರ್ಕ ಪಟ್ಟಿಯ ಸ್ಕ್ರೀನ್ ಶಾಟ್‌ಗಳನ್ನು ಕಳುಹಿಸಿದ್ದಾನೆ ಎಂದು ಕೂಡ ಆರೋಪಿಸಲಾಗಿದೆ! ☯

ಕ್ರೈಂ ಪ್ರಪಂಚ

# ಅವಳ ಸಾವು

ಹುಟ್ಟು ಮತ್ತು ಸಾವು ಇದು ಪ್ರಕೃತಿ ನಿಯಮ ಮತ್ತು ಸೃಷ್ಟಿ ಸಂಕಲ್ಪ. ಈ ಭೂಮಿಯ ಮೇಲೆ ಜನಿಸುವ ಯಾರೇ ಆಗಿರಲಿ ಒಂದಲ್ಲ, ಮತ್ತೊಂದು ದಿವಸ ಸಾಯಲೇಬೇಕು.

ಇಬ್ಬರ ಪ್ರಶ್ನೆ ಏನು?

ಸಾವು ಯಾವಾಗ ಬರುತ್ತದೆ?

'ನೋ ಬಡಿ ನೋಸ್ ಅಂದರೆ ಯಾರೊಬ್ಬರಿಗೂ ಸಹ ಇದು ಗೊತ್ತಿರುವುದಿಲ್ಲ. ಎಲ್ಲಿ, ಯಾವಾಗ, ಯಾವ ರೀತಿ ಸಾವು ಬರುತ್ತದೆ ಎಂಬುದು ಸೃಷ್ಟಿಕರ್ತನ ವಿನಹ ಬೇರೆ ಯಾರಿಗೂ ತಿಳಿದಿರುವುದಿಲ್ಲ.

ಸಾವಿನಲ್ಲಿ ಕೆಲವು ಕಲ್ಪನೆಗಳಿವೆ.

ಸಹಜ ರೀತಿಯ ಸಾವು.

ಅಸಹಜ ಸಾವು.

ಅಕಾಲಿಕ ಮರಣ.

ಆಕಸ್ಮಿಕ ರೀತಿಯ ಸಾವು.

ಈ ಕತೆಯಲ್ಲಿ ಬರುವ ಅವಳ ಸಾವು ಏನು ಅನಿರೀಕ್ಷಿತ ಅಲ್ಲ. ಆದರೂ ಸಹ ಊಹೆ ಮಾಡಲಾಗದ ರೀತಿ ಮತ್ತು ಸಾಮಾನ್ಯ ಕಲ್ಪನೆಗಳಿಗೆ ಸಿಗದಂತೆ ತುಂಬಾ ವಿಭಿನ್ನ ರೀತಿಯಲ್ಲಿ ಬರುತ್ತವೆ.

ಇದು ಅವಳ ಸಾವಿನ ಕತೆ ಮಾತ್ರ ಅಲ್ಲ ಪೊಲೀಸ್ ಅಧಿಕಾರಿಗಳ ಬುದ್ಧಿವಂತಿಕೆಯ ಪರಿಶೋಧನೆಯ ಮಾಲಿಕೆ.

●●●

ಬೆಂಗಳೂರು ಮಹಾನಗರ.

ನಕ್ಷತ್ರ ಡಿಲಕ್ಸ್ ಬಾರ್!

ಶ್ರೀಮಂತರಿಗಾಗಿ ಪ್ರತ್ಯೇಕವಾದ ಜಾಗದಲ್ಲಿ ಕ್ಯಾಬಿನ್‌ಗಳನ್ನು ನಿರ್ಮಿಸಿರುತ್ತಾರೆ. ಈ ಕ್ಯಾಬಿನ್‌ಗೆ ಪ್ರತ್ಯೇಕ ಚಾರ್ಜ್ ಮಾಡಲಾಗುತ್ತದೆ. ಪ್ರೈವೇಸಿ ಬೇಕಾದವರು ಮೊದಲೇ ರಿಸರ್ವ್ ಮಾಡಿಸಿರುತ್ತಾರೆ. ಇಂತಹ ಕ್ಯಾಬಿನ್‌ಗಳಲ್ಲಿ ವೆರೈಟಿಗಳಿವೆ.

ಕ್ಯಾಬಿನ್ ನಂಬರ್-10.

ಅಲ್ಲಿ ಒಬ್ಬ ಕುಳಿತಿದ್ದಾನೆ.

ಅಲ್ಲಿಗೆ ಬಂದು ಮತ್ತು ನಿಮಿಷಗಳಾಗಿವೆ. ಅವನು, ತನ್ನನ್ನು ಈ ಬಾರ್‌ಗೆ ಕರೆಸಿಕೊಂಡಿರುವ ಕಸ್ಟಮರ್ ಮತ್ತು ಫ್ರೆಂಡ್ ಆಗಿರುವ ಚೇತನ್‌ಗಾಗಿ ಕಾಯುತ್ತಿದ್ದಾನೆ.

ಹಾಗಾದರೆ ಇಲ್ಲಿ ಕಾಯುತ್ತಿರುವ ಇವರು ಯಾರು?

ಪ್ರೊಫೆಷನಲ್ ಕ್ರಿಮಿನಲ್.

ಆದರೆ ಆ ರೀತಿ ಅವನ ಅಪಿಯರೆನ್ಸ್ ಇಲ್ಲ. ರೌಡಿ ಮತ್ತು ಪ್ರೊಫೆಷನಲ್ ಕಿಲ್ಲರ್‌ಗಳೆಂದರೆ ಅವರ ಅಪಿಯರೆನ್ಸ್ ಬಗ್ಗೆ ಸಿನಿಮಾ ದೃಶ್ಯಗಳು ನೆನಪಿಗೆ ಬರುತ್ತವೆ.

ರಫ್ ಕ್ಯಾರೆಕ್ಟರ್!

ದಡೂತಿ ಶರೀರದವನು.

ಆದರೆ ಇಲ್ಲಿರುವ ಅವನು ಚಂದನ್ ಬಾಟಿಯ ಎಂಬ ಹೆಸರಿನವನು. ತುಂಬಾ ಡೀಸೆಂಟ್ ಆಗಿದೆ ಅವನ ಅಪಿಯರೆನ್ಸ್. ಆದರೆ ಬೇರೆ ಬೇರೆ ರೀತಿಯ ಕಾನೂನು ಬಾಹಿರ ಕೆಲಸಗಳನ್ನು ಮಾಡಿದ್ದಾನೆ. ಆದರೆ ಅವನು ಮಾಡಿರುವ ಕ್ರಿಮಿನಲ್ ಗೇಮ್‌ಗೆ ಆಧಾರ ಸಿಕ್ಕಿಲ್ಲ ಮತ್ತು ಪೊಲೀಸರಿಗೆ ಇವನ ಬಗ್ಗೆ ಕಿಂಚಿತ್ ಅನುಮಾನ ಬಂದಿಲ್ಲ.

ಕೊಲೆಯಾಗಲಿ ಅಥವಾ ಬೇರೆ ಯಾವುದೇ ಕ್ರಿಮಿನಲ್ ಆಟಗಳಾಗಲಿ ಸೈಲೆಂಟ್ ಆಗಿ ಮತ್ತು ತನ್ನ ಬಗ್ಗೆ ಸಾಕ್ಷಿ, ಆಧಾರ ಉಳಿಯದಂತೆ ತುಂಬಾ ಕೇರ್‌ಫುಲ್ ಆಗಿ ಮತ್ತು ಇಂಟಲಿಜೆಂಟ್ ಆಗಿ ಎಲ್ಲಾ ಮುಗಿಸುತ್ತಾನೆ.

ಅಸಹನೆಯಿಂದ ಚಡಪಡಿಸುತ್ತಾ ಚೇತನ್‌ಗೆ ಫೋನ್ ಮಾಡುತ್ತಿರುವಾಗಲೇ ಅವನು ಬಂದಿದ್ದನು.

'ಯಾಕೆ ಲೇಟು?''

ಬೆಂಗಳೂರಿನವರ ಮಾಮೂಲಿಯ ಉತ್ತರ.

ಟ್ರಾಫಿಕ್ ಜಾಮ್ ಆಗಿತ್ತು.

ಅವರಿಬ್ಬರು ಎದುರು-ಬದರಾಗಿ ಕುಳಿತಿದ್ದಾರೆ. ಚಂದನ್ ಬಾಟಿಯ ''ಡೀಲಿಂಗ್ ಪ್ರಾರಂಭ ಮಾಡುವ ಮೊದಲು ರಿಲ್ಯಾಕ್ಸ್ ಆಗ್ಬೇಕು. ನಂಗೆ ಡ್ರಿಕ್ಸ್ ಮತ್ತು ಸ್ಪೆಷಲ್ ನಾನವೆಜ್, ಸಿಗರೇಟ್ ಬೇಕು'' ಎಂದು ಹೇಳಿದಾಗ ಬೇರರ್‌ಗೆ ಆರ್ಡರ್ ಮಾಡಿದನು.

ಇಬ್ಬರೂ ಎದುರು-ಬದರಾಗಿ ಕುಳಿತು ಸಿಗರೇಟ್ ಸೇದುತ್ತಿದ್ದಾರೆ.

''ನಿನ್ನ ಪ್ರಾಬ್ಲಂ ಏನು?''

ಚಂದನ್ ಬಾಟಿಯ ನಗಾಡಿದನು.

''ಅರೆ... ಯಾಕೆ ನಗುತ್ತಿದ್ದೀಯ?''

''ನನದೆ ಇನ್ನೇನು ಮಾಡಲಿ? ನನಗೆ ಹೆಲ್ಪ್ ಮಾಡೋದು ಅಂದ್ರೇನು ಅಂತ ಗೊತ್ತಿಲ್ಲ. ಕೂಲಿ ತಗೊಂಡು ಕೆಲಸ ಮಾಡ್ತೀನಿ.''

''ನಾನು ನಿನಗೆ ಆ ಕೂಲಿ ಕೊಡ್ತೀನಿ.''

''ಈಗಲೇ ಹೇಳ್ತೀನಿ. ನಾನು ಕ್ರಿಮಿನಲ್ ಆಪರೇಷನ್ ಯಾವ ರೀತಿ ಇರುತ್ತದೆ ಎಂಬುದರ ಆಧಾರದ ಮೇಲೆ ರೇಟ್ ಫಿಕ್ಸ್ ಮಾಡ್ತೀನಿ ಬಟ್...'' ಎಂದು ಹೇಳುತ್ತಿರುವಾಗಲೇ ಚೇತನ್ ''ನಾನು ಕಡಿಮೆ ಮಾಡು, ಡಿಸ್ಕೌಂಟ್ ಕೊಡು ಅಂತ ಕೇಳಲ್ಲ. ನೀನು ಹೇಳಿದಷ್ಟು ಪೇ ಮಾಡ್ತೀನಿ.''

''ಓಕೆ. ನಿನ್ನ ಡೀಲಿಂಗ್ ಬಗ್ಗೆ ಹೇಳು.''

ಅವನೀಗ ಹೇಳಲು ಪ್ರಯತ್ನ ಮಾಡುತ್ತಿರುವಾಗಲೇ ಬೇರರ್ ಇವರು ಆರ್ಡರ್ ಮಾಡಿದ್ದನ್ನೆಲ್ಲಾ ತಂದು ಟೇಬಲ್ ಮೇಲೆ ಜೋಡಿಸಿದನು.

ಬ್ಲೂ ಮಾಂಕ್ ವಿಸ್ಕಿ.

ಸ್ಟ್ರಾಂಗ್ ಬಿಯರ್ (ಚೇತನ್‌ಗೆ).

ಬಟರ್ ಚಿಕನ್.

ತಂದೂರಿ ರೋಟಿ.

ಚಿಲ್ಲಿ ಚಿಕನ್.

ಚಂದನ್ ಬಾಟಿಯ ಚಿಯರ್ಸ್ ಹೇಳಿ ಪ್ರಾರಂಭ ಮಾಡಿದನು. ಚೇತನ್ ಬಿಯರ್ ಚಪ್ಪರಿಸುತ್ತಾ ತುಂಬಾ ಮೆಲುಧ್ವನಿಯಲ್ಲಿ ''ನೀನೊಂದು ಮರ್ಡರ್ ಮಾಡಬೇಕು ಚಂದನ್'' ಎಂದನು.

ಚಂದನ್ ಬಾಟಿಯ ಗಾಬರಿಯಾಗಲಿಲ್ಲ ಅಥವಾ ಆಶ್ಚರ್ಯ ಪಡಲಿಲ್ಲ. ಯಾಕೆ ಅಂದರೆ ಅವನೊಬ್ಬ ಪ್ರೊಫೆಷನಲ್ ರೌಡಿ.

''ಯಾರನ್ನ ಕೊಲೆ ಮಾಡ್ಬೇಕು?''

ಚೇತನ್ ಈಗ ಮೊಬೈಲ್ ತೆಗೆದು ಆನ್ ಮಾಡಿ ಅವನ ಮುಖದ ಮುಂದೆ ಹಿಡಿದನು.

ಆಕರ್ಷಕ ರೂಪವತಿ ಯುವತಿ!

''ಏ... ಸೋ ಬ್ಯುಟಿಫುಲ್. ಕಾಶ್ಮೀರ ಆ್ಯಪಲ್ ತರ ಇರೋ ಇವಳನ್ನ ಅಡ್ಜೆಸ್ಟ್ ಮಾಡ್ಕೊಂಡ್ ಮಜಾ ಮಾಡೋದು ಬಿಟ್ಟು ಮರ್ಡರ್ ಯಾಕೆ ಮಾಡುಸ್ತೀಯ?''

''ಆ ರೀತಿ ಮಾಡಿದಕ್ಕೆ ಆಕ್ಟೋಪಸ್ ಹಿಡಿತಕ್ಕೆ ಸಿಕ್ಕಿಕೊಂಡಿದ್ದೇನೆ.''

ಚಂದನ್ ''ಆಕ್ಟೋಪಸ್ ಹಿಡಿತ ಅಂದ್ರೆ ಬ್ಲಾಕ್‌ಮೇಲ್ ತಾನೆ?''

ಚೇತನ್ ತಲೆಯಾಡಿಸಿದನು.

''ಇವಳು ಯಾರು? ಇವಳ್ಯಾಕೆ ನಿನ್ನ ಬ್ಲಾಕ್‌ಮೇಲ್ ಮಾಡ್ತಾ ಇದ್ದಾಳೆ?''

''ಈ ಫೋಟೋನಾ ಇನ್ನೊಂದು ಸಲ ಸರಿಯಾಗಿ ನೋಡು. ಇವಳ್ಯಾರು ಅಂತ ಗೊತ್ತಾಗುತ್ತೆ'' ಎಂದು ಮೊಬೈಲ್ ಅನ್ನು ಅವನ ಮುಂದೆ ಹಿಡಿದನು.

ಆಕರ್ಷಕ ರೂಪವತಿ!

ಅವನ ಬಾಯಿಂದ ಉದ್ಗಾರ ಬಂದಿತು.

''ಏ... ಇವಳ ಸೀರಿಯಲ್ ನಟಿ. ಶ್ವೇತ ಅಲ್ವ... ಇವಳಿಗೆ ಸಿನಿಮಾದಲ್ಲಿ ಸಹ ಅವಕಾಶ ಸಿಕ್ಕಿದೆ.''

ಚೇತನ್ ತಲೆಯಾಡಿಸಿದನು.

''ಅದು ಸರಿ... ನಿನ್ನನ್ನು ಇವಳ್ಯಾಕೆ ಬ್ಲಾಕ್‌ಮೇಲ್ ಮಾಡ್ತಿದ್ದಾಳೆ. ನಿನ್ನ ಯಾವ ವೀಕ್‌ನೆಸ್‌ನ ಅವಳು ರಹಸ್ಯವಾಗಿಟ್ಟುಕೊಂಡು ಬ್ಲಾಕ್‌ಮೇಲ್ ಮಾಡುತ್ತಿದ್ದಾಳೆ, ಅವಳು ನಿನ್ನಿಂದ ಎಷ್ಟು ಹಣವನ್ನ ಡಿಮ್ಯಾಂಡ್ ಮಾಡುತ್ತಿದ್ದಾಳೆ?''

ಅವನು ನಿಟ್ಟುಸಿರು ಬಿಡುತ್ತಾ ''ಏನು ಮಾಡಲಿ ಚಂದನ್. ಎಲ್ಲಾ ನನ್ನ ಕರ್ಮ. ಶ್ವೇತ ನನ್ನ ಹೆಂಡತಿಯ ಆತ್ಮೀಯ ಗೆಳತಿ. ಶೂಟಿಂಗ್‌ನಲ್ಲಿ ಬಿಡುವು ದೊರೆತಾಗಲೆಲ್ಲಾ ನನ್ನ ಮನೆಗೆ ಬರುತ್ತಿದ್ದಳು. ನನ್ನ ಹೆಂಡತಿನ ಶೂಟಿಂಗ್‌ಗೆ ಸಹ ಕರೆದುಕೊಂಡು ಹೋಗುತ್ತಿದ್ದಳು.''

''ಇದರಲ್ಲಿ ಬ್ಲಾಕ್‌ಮೇಲ್ ಮಾಡುವ ವಿಚಾರ ಏನಿದೆ? ನೀನು ಅವಳ ಜೊತೆ ಸೆಕ್ಸ್ ಲಿಂಕ್ ಇಟ್ಟುಕೊಂಡಿರಬೇಕು. ಅದಕ್ಕೆ ಅವಳು ಮಿಲನದ ದೃಶ್ಯಗಳ ಫೋಟೋ ತೆಗೆದು ಬ್ಲಾಕ್‌ಮೇಲ್ ಮಾಡುತ್ತಿರಬೇಕು. ಇದೇ ತಾನೇ ಸಮಸ್ಯೆ.''

''ಸಮಸ್ಯೆ ನನ್ನದಲ್ಲ. ಆದರೆ ಬ್ಲಾಕ್‌ಮೇಲ್‌ಗೆ ಒಳಗಾಗಿರೋದು ನಿಜ.''

''ಅರ್ಥವಾಗೋ ಹಾಗೆ ಹೇಳು.''

''ನನಗೂ ಆ ಸೀರಿಯಲ್ ನಟಿಗೂ ಯಾವ ರೀತಿಯ ಸಂಬಂಧ ಇಲ್ಲ. ನಾನು ನನ್ನ ಹೆಂಡತಿಗೆ ನಿಷ್ಠವಾಗಿದ್ದೇನೆ. ಯಾವ ರೀತಿಯ ಅನ್ಯಾಯ ಮಾಡಿಲ್ಲ. ಮುಖ್ಯವಾಗಿ ನನ್ನ ಹೆಂಡತಿ ನನ್ನ ತುಂಬಾ ಪ್ರೀತಿ ಮಾಡ್ತಾಳೆ. ನನ್ನ ಸಂಸಾರ ಜೀವನ, ದಾಂಪತ್ಯ ಜೀವನ ಸಂತೋಷ ಮತ್ತು ತೃಪ್ತಿಕರವಾಗಿದೆ ಚಂದನ್.''

ಚಂದನ್ ಬಾಟಿಯ ಗ್ಲಾಸಿನಲ್ಲಿ ಉಳಿದಿರುವ ವಿಸ್ಕಿಯನ್ನು ಕುಡಿದು ಮುಗಿಸಿದ ನಂತರ ತುಂಬಾ ಮೆಲ್ಲಗೆ ಹೇಳಿದನು. ''ನಿನಗೆ ಶ್ವೇತಾಳಿಂದ ಎದುರಾಗಿರೋ ಸಮಸ್ಯೆ ಏನು? ಅವಳ್ಯಾಕೆ ನಿನ್ನ ಬ್ಲಾಕ್‌ಮೇಲ್ ಮಾಡುತ್ತಿದ್ದಾಳೆ'' ಎಂದು ಶೀತಲ ಧ್ವನಿಯಲ್ಲಿ ಆದರೆ ರೇಗುವ ರೀತಿ ಕೇಳಿದನು.

ಚೇತನ್ ಮೊಬೈಲ್ ತೆಗೆದು ಫೋಟೋ ಗ್ಯಾಲರಿ ಓಪನ್ ಮಾಡಿ ಕೆಲವು ಫೋಟೋಗಳನ್ನು ತೋರಿಸಿದನು.

ಪ್ರಣಯ ರೋಚಕ ದೃಶ್ಯ.

ಗಂಡು-ಹೆಣ್ಣಿನ ಆಲಿಂಗನ.

ಚುಂಬನದ ದೃಶ್ಯ.

ಇವೆರಡರ ವಿನಹ ಆ ಹೆಣ್ಣು ಬೆತ್ತಲಾಗಿರುವ ದೃಶ್ಯ ಇಲ್ಲ ಅಥವಾ ಸಂಭೋಗದ ದೃಶ್ಯ ಇಲ್ಲ. ಆ ಹೆಣ್ಣು ಯಾವುದೋ ಅಮಲಿನಲ್ಲಿರುವಂತೆ ಕಂಡು ಬರುತ್ತಿದ್ದಾಳೆ.

''ಈ ಗಂಡು-ಹೆಣ್ಣು ಯಾರು?''

''ಅವಳು ನನ್ನ ಹೆಂಡತಿ.''

''ಮೈಗಾಡ್... ನಿನ್ನ ಹೆಂಡತಿ...''

ಚೇತನ್ ''ಇಲ್ಲ... ಇಲ್ಲ... ಇದರಲ್ಲಿ ನನ್ನ ಹೆಂಡತಿ ತಪ್ಪಿಲ್ಲ. ಅವಳು ಶೀಲ ಕಳೆದುಕೊಂಡಿಲ್ಲ. ಇದು ಸೀರಿಯಲ್ ನಟಿ ಶ್ವೇತ ಆಡಿರುವ ಹೊಸದ ಆಟ ಅಂತ ಹೇಳಬಹುದು. ನನ್ನ ಹೆಂಡತಿನ ಆಗಾಗ ಮನೆಗೆ ಕರೆದುಕೊಂಡು ಹೋಗುತ್ತಿದ್ದಳು. ಪಾನೀಯ ಅಥವಾ ತಿನಿಸುಗಳಲ್ಲಿ ಮಾದಕತೆ ಉಂಟಾಗುವ ಪದಾರ್ಥ ಬೆರೆಸಿದ್ದಾಳೆ. ನನ್ನ ಹೆಂಡತಿ ಸೌಂದರ್ಯವತಿ, ಆದರ್ಶ ಗೃಹಿಣಿ. ಅವಳಿಗೆ ಅಮಲೇರಿಸುವುದು ಸಹ ಗೊತ್ತಿಲ್ಲ. ಯಾಕೋ ತುಂಬಾ ಗಾಢವಾಗಿ ನಿದ್ರೆ ಬಂತು ಶ್ವೇತಾಳ ಮನೇಲಿ ಮಲಗಿಬಿಟ್ಟೆ ಅಂತ ಹೇಳಿದ್ಲು. ಅವಳು ತುಂಬಾ ಮುಗ್ಧೆ. ಒಂದು ವೇಳೆ ಅತ್ಯಾಚಾರ ಅಥವಾ ಅಮಲಿನ ಸಂಭೋಗ ನಡೆದಿದ್ದರೆ ಅವಳಿಗೆ ಗೊತ್ತಾಗಿರುತ್ತಿತ್ತು. ಶ್ವೇತಾಳಿಗೆ ವಿಪರೀತ ಹಣದ ದಾಹ ಇದೆ. ನನ್ನ ಹೆಂಡತಿನ ಈ ರೀತಿ ಸೆಕ್ಸ್ ಜಾಲದಲ್ಲಿ ಬೀಳಿಸಿಕೊಂಡು ನನ್ನಿಂದ ಲಕ್ಷಗಳ ಲೆಕ್ಕದಲ್ಲಿ ಹಣ ವಸೂಲಿ ಮಾಡಲು ಪ್ರಯತ್ನ ಮಾಡಿದ್ದಾಳೆ. ಅವಳು ಶ್ರೀಮಂತರನ್ನು ಬಲೆಗೆ ಹಾಕಿಕೊಂಡು ಪ್ರಣಯ, ಶೃಂಗಾರ ದಾಟ ಆಡಿ ವೀಡಿಯೋ ಕವರೇಜ್ ಮಾಡಿ ಬ್ಲಾಕ್‌ಮೇಲ್ ಮಾಡಿ ಹಣ ವಸೂಲಿ ಮಾಡಿದ್ದಾಳೆ. ನನ್ನನ್ನು ಬಲೆಗೆ ಹಾಕಿಕೊಳ್ಳಲು ಪ್ರಯತ್ನ ಮಾಡಿದ್ಲು. ಆದರೆ ನಾನು ಬಲೆಗೆ ಬೀಳಲಿಲ್ಲ. ಹಾಗಾಗಿ ನನ್ನ ಹೆಂಡತಿನ ಈ ರೀತಿ ಉಪಯೋಗಿಸಿಕೊಂಡು ಬ್ಲಾಕ್‌ಮೇಲ್ ದಂಧೆ ಮಾಡುತ್ತಿದ್ದಾಳೆ. ಅವಳು ಕೇಳುತ್ತಿರುವಷ್ಟು ಹಣ ಕೊಡುವಷ್ಟು ಶ್ರೀಮಂತ ನಾನಲ್ಲ. ಆದ್ದರಿಂದ ನೀನು ನನಗೆ ಹೆಲ್ಪ್ ಮಾಡಲೇಬೇಕು.''

ಚಂದನ್ ಬಾಟಿಯ ಸಿಗರೇಟ್ ಸೇರಿ ಬಾಯಿ ತುಂಬಾ ಹೊಗೆ ತುಂಬಿಸಿಕೊಂಡು ಉಗುಳುತ್ತಾ ''ಆಗಲಿ... ಆಗಲಿ... ನಾನು ಶ್ವೇತಾಳನ್ನ ಮರ್ಡರ್ ಮಾಡಿ, ನೀನು ಅವಳ ಪ್ರೋಗ್ರಾಂ ಬಗ್ಗೆ ತಿಳಿದುಕೊಂಡು ನನಗೆ ಫೋನ್ ಮಾಡಬೇಕು'' ಎಂದನು.

''ಆಗಲಿ ಚಂದನ್. ನನ್ನ ಹೆಂಡತಿಗೆ ಈ ಬ್ಲಾಕ್‌ಮೇಲ್ ಬಗ್ಗೆ ಗೊತ್ತಿಲ್ಲ. ಹಾಗಾಗಿ ಅವಳು ಈಗಲೂ ಸಹ ಶ್ವೇತಾಳ ಜೊತೆ ಸ್ನೇಹದಿಂದ ಇದ್ದಾಳೆ. ಅವಳ ಮೂಲಕ ತಿಳಿದುಕೊಳ್ತೀನಿ. ತುಂಬಾ ಮುಖ್ಯವಾದ ವಿಚಾರ ಹೇಳ್ತೀನಿ. ಬ್ಲಾಕ್‌ಮೇಲ್ ಫೋಟೋಗಳು ಬಹಿರಂಗವಾದ್ರೆ ನನ್ನ ಹೆಂಡತಿ ಹುಚ್ಚಿ ಆಗ್ತಾಳೆ ಅಥವಾ ಭಾವ ಉನ್ಮಾದತೆ ಜಾಸ್ತಿಯಾದ್ರೆ ಆತ್ಮಹತ್ಯೆ ಮಾಡಿಕೊಳ್ಳಬಹುದು. ಇದು ತುಂಬಾ ಮುಖ್ಯ. ಶ್ವೇತಾಳನ್ನು ಕೊಲೆ ಮಾಡುವ ಮೊದಲು ಅವಳ ಮೊಬೈಲ್‌ನಲ್ಲಿರುವ ಸ್ಟಿಲ್ ಫೋಟೋಗಳು ಮತ್ತು ವೀಡಿಯೋ ಕ್ಲಿಪ್ ಅನ್ನು ಡಿಲೀಟ್ ಮಾಡ್ಬೇಕು. ಕೊಲೆಯ ರಹಸ್ಯ ಬಹಿರಂಗ ಆಗಬಾರದು. ಇದರಿಂದ ಬೇರೆ ರೀತಿ ಸಮಸ್ಯೆ ಎದುರಾಗಿ ತೊಂದರೆ ಆಗುತ್ತೆ.''

ಚಂದನ್ ಬಾಟಿಯ ಶೀತಲ ಸ್ವರದಲ್ಲಿ ನಗುತ್ತಾ ''ನಿನಗೆ ಗೊತ್ತಿಲ್ಲ ಅಂತ ಕಾಣುತ್ತೆ. ಇಲ್ಲಿಯತನಕ ಆರು ಮರ್ಡರ್ ಮಾಡಿದ್ದೀನಿ. ಸಣ್ಣ ಸುಳಿವನ್ನೂ ಸಹ ಕೊಲೆ ಮಾಡಿದ್ದ ಜಾಗದಲ್ಲಿ ಬಿಟ್ಟಿಲ್ಲ. ನನಗೆ ಈ ಪ್ರೊಫೆಷನ್ನಲ್ಲಿ ಸಾಕಷ್ಟು ಅನುಭವ ಆಗಿದೆ.''

''ನನಗೆ ವಿಶ್ವಾಸವಿದೆ.''

''ಈಗ ವ್ಯವಹಾರದ ವಿಚಾರ ಮಾತಾಡು.''

''ಶ್ವೇತ ಪ್ರಖ್ಯಾತ ನಟಿ. ಅವಳನ್ನು ಕೊಲೆ ಮಾಡಿ ಎಸ್ಕೇಪ್ ಆಗೋದು ಸುಲಭ ಅಲ್ಲ. ಹಾಗಾಗಿ ಮಾಮೂಲಿ ಕೊಲೆಗಳಿಗಿಂತ ರೇಟು ಜಾಸ್ತಿ ಆಗುತ್ತೆ.''

''ನಿನ್ನ ಡಿಮ್ಯಾಂಡ್ ಎಷ್ಟು?''

''ಹತ್ತು ಲಕ್ಷ.''

ಚೇತನ್ ''ನನ್ನ ಹತ್ತಿರ ಅಷ್ಟೊಂದು ಹಣ ಇಲ್ಲ. ಐದು ಲಕ್ಷ ಕೊಡ್ತೀನಿ. ಒಪ್ಪಿಗೆಯಾದ್ರೆ ಮಾಡು. ಇಲ್ಲದಿದ್ದರೆ ಈ ವ್ಯವಹಾರನ ಇಲ್ಲಿಗೇ ಬಿಟ್ಟುಬಿಡೋಣ'' ಎಂದು ಬೇರರ್‌ನ ಕರೆದು ಬಿಲ್ ಪೇ ಮಾಡಿದನು.

ಚಂದನ್ ಬಾಟಿಯ ಗೆಳೆಯನ ಮುಖವನ್ನು ಕ್ಷಣಗಳ ಕಾಲ ನೋಡಿದ ನಂತರ ''ಆಗಲಿ... ಆಗಲಿ... ನಿನ್ನ ಫ್ರೆಂಡ್‌ಶಿಪ್‌ಗೋಸ್ಕರ ಐದು ಲಕ್ಷಕ್ಕೆ ಒಪ್ಪಿಕೊಂಡಿದ್ದೀನಿ'' ಎಂದನು.

ಚೇತನ್ ಎದ್ದುಗ ಅವನ ಕೈ ಕುಲುಕುತ್ತಾ ''ಓಕೆ ಥ್ಯಾಂಕ್ ಯೂ ಮೈ ಡಿಯರ್ ಫ್ರೆಂಡ್'' ಎಂದನು.

●●●

ಎರಡು ದಿನಗಳ ನಂತರ ಸುದ್ದಿವಾಹಿನಿಗಳಲ್ಲಿ ಅಬ್ಬರದ ಪ್ರಚಾರ ಆಯಿತು.

ಬ್ರೇಕಿಂಗ್ ನ್ಯೂಸ್ ಆಗಿದೆ.

ಪ್ರಖ್ಯಾತ ಸೀರಿಯಲ್ ನಟಿ ಶ್ವೇತ ಅವರನ್ನು ನಿಗೂಢ ಹಂತಕನೊಬ್ಬ ಕೊಲೆ ಮಾಡಿದ್ದಾನೆ. ದೇವನಹಳ್ಳಿಯಿಂದ ಶೂಟಿಂಗ್ ಮುಗಿಸಿಕೊಂಡು ಬರುತ್ತಿದ್ದಾಗ, ರಸ್ತೆಗೆ ಅಡ್ಡಲಾಗಿ ಕಲ್ಲುಗಳನ್ನು ಇಟ್ಟು ಕಾರಿನ ಡ್ರೈವರ್‌ನ ಪ್ರಜ್ಞೆ ತಪ್ಪಿಸಿ, ಶ್ವೇತಾಳ ಗಂಟಲಿನ ಭಾಗವನ್ನು ಚಾಕುವಿನಿಂದ ತಿವಿದು, ಗಂಟಲಿನ ನಾಳ ಮತ್ತು ನರವನ್ನು ಕತ್ತರಿಸಿ ಕೊಲೆ ಮಾಡಲಾಗಿದೆ.

ಪ್ರತಿದಿವಸ ಶೂಟಿಂಗ್‌ಗೆ ಅಥವಾ ಹೊರಗೆ ಹೋಗುವಾಗ ಶ್ವೇತ ವ್ಯಾನಿಟಿ ಬ್ಯಾಗು ತೆಗೆದುಕೊಂಡು ಹೋಗುತ್ತಿದ್ದರು. ಅದರಲ್ಲಿ ಮೊಬೈಲ್ ಮತ್ತು ವಿದೇಶದಿಂದ ತರಿಸಿದ್ದ 'ಎಕ್ಸ್‌ಲಿಯೋ' ಪುಟ್ಟ ಕ್ಯಾಮರ ಇರುತ್ತಿತ್ತು.

ಕೊಲೆಗಾರ ಅವಳನ್ನು ಕೊಲೆ ಮಾಡಿದ ನಂತರ ಆ ವ್ಯಾನಿಟಿ ಬ್ಯಾಗನ್ನು ಎತ್ತಿಕೊಂಡು ಹೋಗಿದ್ದಾನೆ.

ಕೊಲೆಗಾರ ಯಾರು?

ಕೊಲೆಯ ಹಿಂದಿನ ಉದ್ದೇಶ ಏನು?

ಇದರ ಬಗ್ಗೆ ತನಿಖೆ ನಡೆಯುತ್ತಿದೆ.

●●●

ಎಕ್ಸ್‌ಲಿಯೋ ಕ್ಯಾಮರ ಮತ್ತು ಮೊಬೈಲ್ ಅನ್ನು ಚಂದನ್ ಬಾಟಿಯ ಚೇತನ್‌ಗೆ ಕೊಟ್ಟರು. ಬ್ಲಾಕ್‌ಮೇಲ್ ದೃಶ್ಯಗಳ ಸ್ಟಿಲ್ ಫೋಟೋಗಳು ಮತ್ತು ವೀಡಿಯೋ ಕ್ಲಿಪ್

☞ 14

13 ☜

ಅನ್ನು ಡಿಲೀಟ್ ಮಾಡಿ ಆ ಕ್ಯಾಮರ ಮತ್ತು ಮೊಬೈಲ್‌ಅನ್ನು ಗುಂಡಿ ತೆಗೆದು ಮುಚ್ಚಲಾಯಿತು. ಒಂದು ವೇಳೆ ಇದನ್ನು ಎಸೆದಿದ್ದರೆ (ಹೊರಗೆ) ಬೇರೆ ರೀತಿ ಪರಿಣಾಮ ಉಂಟಾಗುತ್ತಿತ್ತು.

ಬೇರೆ ಯಾರಿಗಾದರೂ ಸಿಕ್ಕಿ ಅವರ ಮೂಲಕ ಪೊಲೀಸರ ಕೈ ಸೇರಿದ್ದರೆ, ಸುಳಿವಿನ ಎಳೆ ಹಿಡಿದು ಪತ್ತೆ ಮಾಡುತ್ತಿದ್ದರು.

ಐದು ಲಕ್ಷ ಪೇಮೆಂಟ್ ಮಾಡಿದನು.

ಚಂದನ್ ಬಾಟಿಯ ಗೆಳೆಯನ ಮುಖ ನೋಡಿದ ನಂತರ ಎರಡೂವ ಲಕ್ಷ ರೂಪಾಯಿಯನ್ನು ವಾಪಸ್ ಕೊಟ್ಟನು. ಚೇತನ್ ಗಾಬರಿಯಿಂದ ''ಯಾಕೆ... ಯಾಕೆ ವಾಪಸ್ ಕೊಡುತ್ತಿದ್ದೀಯ'' ಎಂದು ಕೇಳಿದನು.

ಚಂದನ್ ಬಾಟಿಯ ಪ್ರತ್ಯುತ್ತರ ನೀಡದೆ ಅಲ್ಲಿಂದ ಹೊರಟು ಹೋದನು.

●●●

ಬ್ರೇಕಿಂಗ್ ನ್ಯೂಸ್ ಪ್ರಸಾರ ಆಗುತ್ತಿದೆ. ನಗರದ ಪೊಲೀಸರು ಇನ್‌ವೆಸ್ಟಿಗೇಷನ್ ತೀವ್ರಗೊಳಿಸಿದ್ದಾರೆ. ಈ ಪ್ರಕರಣದಲ್ಲಿ ಅವರಿಗೆ ಎರಡು ಬಲವಾದ ಸಾಕ್ಷಿ-ಆಧಾರಗಳು ದೊರೆತಿರೋದ್ರಿಂದ, ಈ ಸುಳಿವಿನ ಜಾಡನ್ನು ಹಿಡಿದು ಬೇಗ ಕೊಲೆಗಾರನನ್ನು ಬಂಧಿಸಲಿದ್ದಾರೆ.

●●●

ಚೇತನ್ ಗಾಬರಿಯಾದನು.

ಸಾಕ್ಷಿ, ಆಧಾರ ದೊರೆತಿದೆ.

ಈ ಚಂದನ್ ಉಡಾಫೆ ರೌಡಿ. ಅವನು ಯಾವಾಗಲು ಕುಡಿದಿರುತ್ತಾನೆ. ಕುಡಿತದ ಅಮಲಿನಲ್ಲಿ ಕೊಲೆ ಮಾಡಲು ಪ್ರಯತ್ನಿಸಿರೋದ್ರಿಂದ ಎಡವಟ್ಟಾಗಿದೆ. ತನಗೆ ಸಂಬಂಧ ಪಡುವ ಬಲವಾದ ಸಾಕ್ಷಿ-ಆಧಾರವನ್ನು ಅಲ್ಲಿ ಬಿಟ್ಟಿದ್ದಾನೆ.

ಪೊಲೀಸರು ಬುದ್ಧಿವಂತರು. ಸಣ್ಣ ಕೂದಲೆಳೆ ಸಿಕ್ಕಿದರೆ ಜಾಡನ್ನು ಹಿಡಿದು ತಲೆಯನ್ನೇ ಹಿಡಿದು ಬಿಡುತ್ತಾರೆ.

ಭಯ, ಆತಂಕ ಜಾಸ್ತಿ ಆಗುತ್ತಿದೆ.

ಪೊಲೀಸರು ಅವನನ್ನು ಬಂಧಿಸಿ ಟಾರ್ಚರ್ ಮಾಡಿದರೆ ಖಂಡಿತಾ ಅವನು ನನ್ನ ಬಗ್ಗೆ ಬಾಯಿ ಬಿಡುತ್ತಾನೆ. ಕೊಲೆ ಮಾಡಿಸಿರೋದು ನಾನೇ ಆಗಿರೋದ್ರಿಂತ ಅಪರಾಧಿಯಾಗಿ ಜೈಲು ಸೇರಬೇಕಾಗುತ್ತದೆ.

ಗಾಬರಿ, ಉದ್ವಿಗ್ನತೆಯಿಂದಲೇ ರೌಡಿ ಗೆಳೆಯನಿಗೆ ಫೋನ್ ಮಾಡಿದನು. ಮೊಬೈಲ್ ಆಫ್ ಆಗಿದೆ.

ಮನೆಯಲ್ಲಿ ಇರಲು ಸಾಧ್ಯವೆ? ಆಫೀಸ್‌ಗೆ ಹೋದರೆ ನೆಮ್ಮದಿಯಿಂದ ಕೆಲಸ ಮಾಡಲು ಸಾಧ್ಯವೇ? ಹಾಗಾಗಿ ಚೇತನ್ ಈಗ ಶ್ವೇತಾಳ ಕೊಲೆ ನಡೆದಿದ್ದ ಜಾಗಕ್ಕೆ ಹೊರಟನು.

●●●

ಬೆಂಗಳೂರಿನ ಹೊರವಲಯದ ಉತ್ತರಹಳ್ಳಿಯ ಸಮೀಪದಲ್ಲಿರುವ 'ಅಲಕಾಪುರ' ಎಂಬ ಗ್ರಾಮದಲ್ಲಿರುವ ನಿರ್ಜನ ರಸ್ತೆಯಲ್ಲಿ ಕೊಲೆ ನಡೆದಿದೆ. ಮೂರು ದಿನಗಳಿಂದ ಅಲಕಾಪುರದಲ್ಲಿ ಶ್ವೇತ ಶೂಟಿಂಗ್‌ನಲ್ಲಿ ಭಾಗವಹಿಸುತ್ತಿದ್ದಳು. ರಾತ್ರಿ ಏಳು ಗಂಟೆ ಸಮಯದಲ್ಲಿ ಶೂಟಿಂಗ್ ಮುಗಿಸಿಕೊಂಡು ಹೊರಟಳು.

ಶೂಟಿಂಗ್ ನಡೆಯುತ್ತಿದ್ದ ಗ್ರಾಮದಿಂದ ಕೊಲೆ ನಡೆದಿರುವ ಜಾಗಕ್ಕೆ ಅರ್ಧ ಮೈಲಿಯ ಅಂತರ ಇದೆ. ಹಾಗಾಗಿ ಕೊಲೆಗಾರ, ಈ ಜಾಗದಲ್ಲಿ ಅಡಗಿಕೊಂಡಿದ್ದಾನೆ ಮತ್ತು ರಸ್ತೆಗೆ ಅಡ್ಡಲಾಗಿ ದಪ್ಪ ಗಾತ್ರದ ಕಲ್ಲುಗಳನ್ನು ಇಟ್ಟಿದ್ದಾನೆ.

ಪೊಲೀಸ್ ಅಧಿಕಾರಿ ಶ್ರೀರಂಗನ್ ಮೊದಲು, ಕಾರು ನಿಂತಿದ್ದ ಸುತ್ತಮುತ್ತಲಿನ ಜಾಗವನ್ನು ತುಂಬಾ ಎಚ್ಚರಿಕೆಯಿಂದ ಪರೀಕ್ಷೆ ಮಾಡಿದನು. ಆಗ ಕಾರಿನ ಮುಂಭಾಗದ ಚಕ್ರದ ಅಡಿಯಲ್ಲಿ ಏನೋ ಬಿದ್ದಿರುವುದು ಕಂಡು ಬಂದಿತು. ಪಿ.ಸಿ.ಗೆ ಸೂಚನೆ ನೀಡಲಾಯಿತು.

ಅದರ ಮೇಲೆ ಕರ್ಚಿಫ್ ಹಾಕಿ ಎತ್ತಿಕೊಂಡು ಪರೀಕ್ಷೆ ಮಾಡಲಾಯಿತು.

ಅದು ಎಟಿಎಂ ಕಾರ್ಡ್!

ಹತ್ತು ನಿಮಿಷಗಳ ಕಾಲ ಸುತ್ತಲು ಹುಡುಕಾಡಿದರೂ ಬೇರೆ ಏನೂ ಸಿಗಲಿಲ್ಲ. ಕಾರಿನ ಒಳಭಾಗವನ್ನು ಪರಿಶೀಲಿಸಲಾರಂಭಿಸಿದನು.

ಅಲ್ಲಿ ಕಂಡಿದ್ದೇನು?

ಆಕರ್ಷಕ ರೂಪವತಿ ಶ್ವೇತಾಳ ಶವ ಹಿಂಭಾಗದ ಸೀಟಿನ ಮೇಲೆ ಅರ್ಧ ಭಾಗ ಉರುಳಿಕೊಂಡಿದೆ. ಗಂಟಲಿನ ಭಾಗದಲ್ಲಿ ಆಳವಾದ ತೀವಿತದ ಗಾಯ. ಆಗಿದೆ.

ರಕ್ತ ಹನಿಗುತ್ತಾ ಸೀಟಿನ ಮೇಲೆ ಹರಡಿದೆ.

ಕೊಲೆಯ ಆಯುಧ ಚಾಕು!

ಆ ಚಾಕು ಗಂಟಲ ಮೂಲಕ ತೂರಿಕೊಂಡು ಹಿಂಭಾಗದಲ್ಲಿ ತುರಿ ಕಾಣುತ್ತಿದೆ. ಅಂದರೆ ಕೊಲೆಗಾರ ಕೊಲೆ ಮಾಡಿದ ಮೇಲೆ ಚಾಕು ತೆಗೆದುಕೊಳ್ಳುವುದನ್ನು ಮರೆತಿರಬೇಕು ಅಥವಾ ಉದಾಸೀನ ಮಾಡಿ ಮರೆತಿರಬೇಕು.

ಶವ ಬಿದ್ದಿರುವ ಭಂಗಿಯ ದೃಶ್ಯದ ಫೋಟೋ ತೆಗೆದು ವೀಡಿಯೋ ಕವರೇಜ್ ಸಹ ಮಾಡಲಾಯಿತು. ನಂತರ ಕರ್ಚಿಫ್‌ನ ತುದಿಯಿಂದ ಹಿಡಿದು ಚಾಕುವನ್ನು ಎಳೆದು ಹೊರಗೆ ತೆಗೆಯಲಾಯಿತು.

ತಾಮ್ರದ ಹಿಡಿ ಇರುವ ಉದ್ದವಾದ ಚಾಕು. ಹಿಂಭಾಗದಲ್ಲಿರುವ ತಾಮ್ರದ ಪಟ್ಟಿಯ ಮೇಲೆ 'ಎಸ್.ಎಲ್.ಆರ್.' ಎಂಬ ಅಕ್ಷರಗಳಿವೆ ಮತ್ತು ತುದಿ ಭಾಗದಲ್ಲಿ ಬೇರೊಂದು ಮಾರ್ಕ್ ಇದೆ...!

ಈ ಮಾರ್ಕ್ ತುಂಬಾ ಮುಖ್ಯ!

ಡ್ರೈವರ್ ಮತ್ತು ಡೆಡ್ ಬಾಡಿಯ ಮತ್ತು ಮೃತಳ ಸಂಬಂಧಿಕರ ಬೆರಳು ಗುರುತುಗಳನ್ನು ಪಡೆದುಕೊಳ್ಳಲಾಯಿತು.

ಚಾಕುವಿನ ಫೋಟೋ ತೆಗೆದು ನಗರದ ಬೇರೆ ಬೇರೆ ವಿಭಾಗದ ಪೊಲೀಸ್ ಸ್ಟೇಷನ್‌ಗಳಿಗೆ, ಕಂಟ್ರೋಲ್ ರೂಮ್ ಮೂಲಕ ಕಳಿಸಲಾಯಿತು.

ಶ್ವೇತಾಳ ಕಾರಿನ ಡ್ರೈವರ್‌ನನ್ನು ವಿಚಾರಣೆ ಮಾಡಲಾಯಿತು. ಅವನ ಹೇಳಿಕೆ ಹಿಂದಿನ ತನಿಖೆಗೆ ಅಗತ್ಯವಾಗಿತ್ತು ಎಂದು ಹೇಳಬಹುದು.

''ನಿನ್ನ ಹೆಸರೇನು?''

''ಗೋದಾಪುರಿ ಕಾಳಪ್ಪ.''

''ಎಷ್ಟು ವರ್ಷಗಳಿಂದ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದೀಯ?''

''ಒಂದೂವರೆ ವರ್ಷದಿಂದ.''

''ಶೂಟಿಂಗ್ ಸ್ಪಾಟ್‌ಗೆ ಕಾರಲ್ಲಿ ಕರೆದುಕೊಂಡು ಹೋಗುತ್ತಿದ್ದವನು ನೀನೇ ತಾನೇ?''

''ಹೌದು ಸಾರ್.''

''ನೆನ್ನೆಯ ದಿವಸ ಏನಾಯಿತು ಅಂತ ಹೇಳು.''

ಗೋದಾವರಿ ಕಾಳಪ್ಪ ''ಸಾರ್ ನೆನ್ನೆ ರಾತ್ರಿ ಶೂಟಿಂಗ್ ಮುಗಿದಾಗ ಏಳೂವರೆ ಆಗಿತ್ತು. ಮನೆಗೆ ಬೇಗ ಹೋಗ್ಬೇಕು ಕೆಲಸ ಇದೆ ಅಂತ ಹೇಳಿದ್ರಿಂದ ನಾನು ತುಂಬಾ ಸ್ಪೀಡ್ ಆಗಿ ಡ್ರೈವಿಂಗ್ ಮಾಡುತ್ತಿದ್ದ. ಆಗ ರಸ್ತೆಗೆ ಅಡ್ಡಲಾಗಿ ಕಲ್ಲುಗಳನ್ನು ಇಟ್ಟಿದ್ದು ಯಾರೋ ರಾಬರರ್ಸ್ ಇರಬೇಕು ಅಂತ, ನಾನು ಸುರಕ್ಷತೆಗಾಗಿ ಸೀಟಿನ ಅಡಿ ಇಟ್ಟಿದ್ದ ಐರನ್ ರಾಡನ್ನು ಎತ್ತಿಕೊಂಡು ಕಾರಿನಿಂದ ಇಳಿದೆ. ಮೇಡಂ ತುಂಬಾ ಗಾಬರಿಯಾಗಿದ್ರು. ನಾನು ಎದುರಿಸಲು ಸಿದ್ದನಾಗಿ ಎಲ್ಲಾ ಕಡೆ ನೋಡುತ್ತಿದ್ದೆ. ಯಾರೋ ಶಬ್ದವಾಗದ ರೀತಿ ಹಿಂಭಾಗದಿಂದ ಬಂದು ನನ್ನ ಮೇಲೆ ಬಿದ್ದರು. ಕೆಮಿಕಲ್ ವಾಸನೆ ಇದ್ದ ಉಂಡೆ ಗಾತ್ರದ ವಸ್ತುವನ್ನು ನನ್ನ ಮೂಗಿಗೆ ಒತ್ತಿದರು. ನಾನು ಪ್ರಜ್ಞೆ ತಪ್ಪಿದೆ. ಮುಂದೆ ಏನಾಯಿತು ಅಂತ ಗೊತ್ತಿಲ್ಲ ಸಾರ್.'

''ಓಕೆ... ಓಕೆ. ನೀನು ಆ ವ್ಯಕ್ತಿನ ನೋಡಲಿಲ್ವ?''

''ಅವನ ಹಿಡಿತದಿಂದ ತಪ್ಪಿಸಿಕೊಳ್ಳಲು ಹೊರಳಾಡುತ್ತಿದ್ದಾಗ ನೋಡಿದ್ದೆ ಸಾರ್. ಆದರೆ ಮುಖದ ಗುರುತು ಸಿಗದ ರೀತಿ ಮಂಕಿ ಕ್ಯಾಪ್ ಮತ್ತು ಮಾಸ್ಕ್ ಹಾಕಿಕೊಂಡಿದ್ದ.''

''ಅವನ ಬಗ್ಗೆ ನಿನಗೆ ಬೇರೆ ಏನಾದರೂ ಸುಳಿವು ಕಂಡಿತ್ತ?''

''ಹಾಂ... ನೋಡಿದ್ದೆ ಸಾರ್.''

''ಕಮಾನ್... ಹೇಳು... ಹೇಳು.''

''ಸಾರ್... ಸಾರ್... ಅವನ ಎಡಗೈನಲ್ಲಿ ತಾಮ್ರದ ಹಿಡಿ ಇದ್ದ ಚಾಕು ಇತ್ತು. ಅದರ ಮೇಲೆ ಎಸ್.ಎಲ್.ಆರ್. ಎಂಬ ಬರಹ ಇತ್ತು.''

ಮೃತಳ ಗಂಟಲಿನಲ್ಲಿ ಚುಚ್ಚಿಕೊಂಡಿದ್ದ ಚಾಕುವಿನ ಮೇಲೆ ಎಸ್.ಎಲ್.ಆರ್. ಎಂಬ ಅಕ್ಷರಗಳಿದ್ದದ್ದು ಪೊಲೀಸರ ಗಮನಕ್ಕೆ ಬಂದಿತ್ತು.

''ಬೇರೆ ಏನಾದರೂ ಹೇಳುವುದಿದೆಯೆ?''

''ಇಲ್ಲ... ಇಲ್ಲ ಸಾರ್.''

ಪೊಲೀಸ್ ಅಧಿಕಾರಿ ಈಗ ಮೃತ ಶ್ವೇತಾಳ ತಂದೆ, ತಾಯಿ ಮತ್ತು ತಮ್ಮನನ್ನು ವಿಚಾರಣೆ ಮಾಡಿದರು. ಅದಕ್ಕೆ ಮೊದಲು ಗುಪ್ತಚರ ಇಲಾಖೆಯ ಪೊಲೀಸ್ ಅಧಿಕಾರಿಗಳು ಫ್ಯಾಮಿಲಿಯ ಶ್ರೀಮಂತಿಕೆ, ಶ್ವೇತಾಳ ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿದ್ದರು.

''ಶ್ವೇತಾಳ ತಂದೆ ನೀವೇ ತಾನೆ?''

ಶ್ರೀಮಂತ ಲಕ್ಷಣಗಳಿರುವ ವ್ಯಕ್ತಿ ತಲೆಯಾಡಿಸುತ್ತಾ ''ಹೌದು ಸಾರ್'' ಎಂದರು.

ನಿಮ್ಮ ಹೆಸರೇನು?''

''ದಾಮೋದರ ರಾಮ್ ಅಂತ.''

''ನಿಮ್ಮ ವೃತ್ತಿ ಏನು?''

''ಡಿಲಕ್ಸ್ ಹೋಟೆಲ್‌ನ ಲಾಡ್ಜ್‌ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೆ. ಶ್ವೇತ ನಟಿಯಾದ ಮೇಲೆ ಕೆಲಸ ಬಿಡಿಸಿದಳು.''

''ಅಂದರೆ ನಿಮಗೆ ಸಂಪಾದನೆ ಇಲ್ಲ.''

''ಇಲ್ಲ ಸಾರ್.''

''ನಿಮ್ಮ ಹೆಂಡತಿ ಅಥವಾ ಮಗ ಕೆಲಸಕ್ಕೆ ಹೋಗುತ್ತಿದ್ದಾರ?''

''ಶ್ವೇತ ತನ್ನ ಅಕ್ಕನನ್ನು ಸೀರಿಯಲ್, ಸಿನಿಮಾ ವ್ಯವಹಾರಗಳಲ್ಲಿ ಸೇರಿಸಿಕೊಂಡಿದ್ದಳು. ಮಗ ಕಾಲೇಜಿನ ಓದು ಪೂರ್ತಿ ಮಾಡಲಿಲ್ಲ. ಕೆಲಸ ಹುಡುಕುತ್ತಿದ್ದಾನೆ.'

''ನಮಗೊಂದು ಮಾಹಿತಿ ಬಂದಿದೆ.''

''ಏನದು ಹೇಳಿ ಸಾರ್.''

''ನಿಮ್ಮ ಮಗಳು ತನ್ನ ಪ್ರಭಾವ ಉಪಯೋಗಿಸಿ ಮೂರು ಸಲ ಕೆಲಸ ಕೊಡಿಸಿದ್ದರೂ ಸಹ ಸರಿಯಾಗಿ ಕೆಲಸ ಮಾಡದೆ ಉಂಡಾಡಿಗುಂಡನ ರೀತಿ ತಿರುಗುತ್ತಿದ್ದಾನಂತೆ.

ಮೃತ ಶ್ವೇತಾಳ ತಾಯಿ ಕೋಪದಿಂದ ''ಮಗಳನ್ನ ಕಳೆದುಕೊಂಡಿರುವ ದುಃಖದಲ್ಲಿ ನಾವು ಇದ್ದೇವೆ. ನೀವು ಕೊಲೆಗೆ ಸಂಬಂಧಪಡದ ಪ್ರಶ್ನೆಗಳನ್ನು ಕೇಳಿ ಟಾರ್ಚರ್ ಮಾಡುತ್ತಿದ್ದೀರಲ್ಲ'' ಎಂದು ರೇಗುವ ರೀತಿ ಹೇಳಿದಳು.

ಪೊಲೀಸ್ ಅಧಿಕಾರಿ ಗಡುಸಾಗಿ ''ನಮಗೇನು ಮಾಡಲು ಬೇರೆ ಕೆಲಸ ಇಲ್ಲದೆ ಅನಗತ್ಯ ಪ್ರಶ್ನೆಗಳನ್ನು ಕೇಳಿ ಟೈಂ ಪಾಸ್ ಮಾಡುತ್ತಿಲ್ಲ, ಕಮಾನ್... ಈಗ ನಿಮ್ಮಿಂದಲೇ ನಮಗೆ ಮುಖ್ಯ ಮಾಹಿತಿ ಸಿಗಲಿ. ಯಾಕೆ ಅಂದರೆ ನಿಮ್ಮ ಗಂಡ ಹೇಳಿದಂತೆ ನಿಮ್ಮ ಮಗಳ ಕಾಲ್‌ಶೀಟ್ ವ್ಯವಹಾರ ನೋಡಿಕೊಳ್ಳುತ್ತಿದ್ದದ್ದು ನೀವೇ ತಾನೆ?''

ಆಕೆ ಚಡಪಡಿಸಿದಳು. ಕೋಪ, ಆವೇಶ ತಣ್ಣಗಾಗಿ ಗಾಬರಿಯಾಗಿದ್ದರು. ತುಂಬಾ ಮೆಲ್ಲಗೆ ''ನನ್ನ ಮಗಳ ಸಲಹೆ, ಪಡೆಯುತ್ತಿದ್ದಳು. ಅವಳ ಪೂರ್ಣ ವ್ಯವಹಾರದ ಬಗ್ಗೆ ಗೊತ್ತಿರಲಿಲ್ಲ.''

''ನೀವು ಬೆಂಗಳೂರಿಗೆ ಮಣಿಪಾಲ್‌ನಿಂದ ಬಂದಿದ್ದು ನಾಲ್ಕು ವರ್ಷಗಳ ಹಿಂದೆ. ಆಗ ನೀವು ತುಂಬಾ ಕಡಿಮೆ ಬಾಡಿಗೆಯ ಸಾಧಾರಣ ಮನೆಯಲ್ಲಿ ಇದ್ದದ್ದು ನಿಜ ತಾನೆ?''

ಗಂಡ-ಹೆಂಡತಿ ಪರಸ್ಪರ ಮುಖ ನೋಡಿಕೊಂಡ ನಂತರ ತಲೆಯಾಡಿಸಿದರು.

''ಈಗ ನೀವು ಬೆಂಗಳೂರಿನ ಸದಾಶಿವನಗರದಲ್ಲಿ ಕೋಟಿಗಳು ಬೆಲೆಬಾಳುವ ಮನೆಯನ್ನು ಕಟ್ಟಿದ್ದೀರ. ಬೇಕಾದಷ್ಟು ಆಸ್ತಿ ಮಾಡಿದ್ದೀರ.''

ಶ್ವೇತಾಳ ತಮ್ಮ ''ಸಾರ್... ಇದನ್ನೆಲ್ಲಾ ಯಾಕೆ ಕೇಳುತ್ತಿದ್ದೀರ?''

''ಕೊಲೆಗೆ ಸಂಬಂಧಪಟ್ಟಿರೋದ್ರಿಂದ ಶ್ವೇತಾಳ ಸಂಭಾವನೆ ಸೀರಿಯಲ್ ಅಭಿನಯಕ್ಕೆ ದಿನಕ್ಕೆ ಮೂರು ಸಾವಿರ ಕೊಡುತ್ತಿದ್ದರು. ಆಮೇಲೆ ಐದು ಸಾವಿರ. ಇತ್ತೀಚೆಗೆ ಆರು ತಿಂಗಳಿಂದ ದಿನಕ್ಕೆ ಹತ್ತು ಸಾವಿರ ಪಡೆಯುತ್ತಿದ್ದಳು. ತಿಂಗಳಲ್ಲಿ ಆಕೆ ಹದಿನಾಲ್ಕು ದಿನ ಮಾತ್ರ ಬೇರೆ ಬೇರೆ ಸೀಯಿರಲ್‌ಗಳಲ್ಲಿ ಅಭಿನಯಿಸುತ್ತಿದ್ದಳು. ಎಲ್ಲಾ ಲೆಕ್ಕ ಹಾಕಿದರೂ ಒಂದು ವರ್ಷಕ್ಕೆ ಹತ್ತು ಲಕ್ಷದ ಆದಾಯ ಬರುತ್ತಿರಲಿಲ್ಲ. ಅಂದ ಮೇಲೆ ಅದು ಹೇಗೆ ಅವಳು ಇಷ್ಟೊಂದು ಆಸ್ತಿ ಮಾಡಲು ಸಾಧ್ಯವಾಯಿತು!

ಮನೆಯವರು ಗಾಬರಿಯಾಗಿದ್ದಾರೆ.

''ನಮಗೆ ಬಂದಿರುವ ಮಾಹಿತಿಯ ಪ್ರಕಾರ ಶ್ರೀಮಂತ ಉದ್ಯಮಿಗಳು, ರಾಜಕಾರಣಿಗಳ ಜೊತೆ ನೈಟ್ ಡ್ಯೂಟಿ ಮಾಡುತ್ತಿದ್ದಳು ಮತ್ತು ಕೆಲಸದ ಜತೆ ಹನಿಮೂನ್ ಟೂರ್ ಹೋಗುತ್ತಿದ್ದಳು.''

ನಾಚಿಕೆ-ಅವಮಾನದಿಂದ ಮನೆಯವರು ತಲೆ ತಗ್ಗಿಸಿದ್ದಾರೆ.

''ಕೆಲವರ ಶೃಂಗಾರ ಆಟಗಳನ್ನು ವೀಡಿಯೋ ಕವರೇಜ್ ಮಾಡಿ ಲಕ್ಷಗಳ ಲೆಕ್ಕದಲ್ಲಿ ಬ್ಲಾಕ್‌ಮೇಲ್ ಡೀಲಿಂಗ್ ಮಾಡುತ್ತಿದ್ದಳು. ಅವಳಿಗೆ ಹಣ... ಹಣ ತುಂಬಾ ಮುಖ್ಯವಾಗಿತ್ತು. ಇವಳಿಂದ ಬ್ಲಾಕ್‌ಮೇಲ್‌ಗೆ ಬಲಿಯಾಗಿದ್ದವರಲ್ಲಿ ಯಾರೋ ಕೊಲೆ ಮಾಡಿ ಸೇಡು ತೀರಿಸಿಕೊಂಡಿದ್ದಾರೆ. ನಿಮಗೆ ನಿಮ್ಮ ಮಗಳ ಈ ದಂಧೆ ಬಗ್ಗೆ ಗೊತ್ತಿರಲೇಬೇಕು. ನೀವು ಅಂತಹವರ ಬಗ್ಗೆ ಸುಳಿವು ನೀಡಿದರೆ ಕೊಲೆಗಾರನನ್ನು ಪತ್ತೇ ಮಾಡಬಹುದು. ಆ ಕುಟುಂಬದವರ್ಯಾರೂ ಈ ವಿಚಾರವಾಗಿ ಮಾಹಿತಿ ನೀಡಲಿಲ್ಲ. ಪೊಲೀಸರಿಗೆ ಕಂಟ್ರೋಲ್ ರೂಮ್‌ನಿಂದ ಮೆಸೇಜ್ ಬಂದಿತು.

'ಎಸ್.ಎಲ್.ಆರ್.' ಎಂಬ ಅಕ್ಷರಗಳಿರುವ ಚಾಕುವನ್ನು ಬಳಸುತ್ತಿದ್ದ ಪ್ರೊಫೆಷನಲ್ ಕಿಲ್ಲರ್ ಯಾರು ಎಂಬುದು ಪತ್ತೆ ಆಯಿತು...!

●●●

ಚೇತನ್‌ಗೆ ಪೊಲೀಸ್ ಇಲಾಖೆಯಲ್ಲಿರುವ ಹೆಡ್ ಕಾನ್‌ಸ್ಟೇಬಲ್ ಆತ್ಮೀಯ ಗೆಳೆಯನಾಗಿದ್ದನು. ಇವನು ಶ್ವೇತಾಳ ಕೊಲೆ ತನಿಖೆ ಬಗ್ಗೆ ಅವನಿಂದ ಮಾಹಿತಿ ಪಡೆಯುತ್ತಿದ್ದನು.

ಕೊಲೆಗಾರ ಒಬ್ಬ ಪ್ರೊಫೆಷನಲ್ ಕಿಲ್ಲರ್...! ಅವನು ಯಾರು ಅಂತ ಪೊಲೀಸರಿಗೆ ಖಚಿತವಾಗಿ ತಿಳಿದಿದೆ. ಅವನನ್ನು ಹಿಡಿಯಲು ಪೊಲೀಸರು ಬಲೆ ಬೀಸಿದ್ದಾರೆ.

ಚೇತನ್‌ಗೆ ಭಯವಾಗಿದೆ. ಚಂದನ್ ಸಹ ಫೋನ್ ಸ್ವಿಚ್ ಆಫ್ ಮಾಡಿಕೊಂಡಿದ್ದಾನೆ. ಮುಂದೇನು ಗತಿ ಎಂದು ಹೆದರಿದ್ದಾನೆ. ಪೊಲೀಸರಿಂದ ತಪ್ಪಿಸಿಕೊಳ್ಳಲು ಊರೂರು ತಿರುಗುತ್ತಿದ್ದಾನೆ. ಅವನು ಎಲ್ಲೇ ಅಡಗಿದ್ದರೂ ಪೊಲೀಸರು ಬಿಡುವುದಿಲ್ಲ.

ಈ ಕೊಲೆಯನ್ನು ಕಿಲ್ಲಿಂಗ್ ಡೀಲಿಂಗ್ ಕೊಟ್ಟು ನಾನು ಮಾಡಿಸಿರೋದ್ರಿಂದ, ಪೊಲೀಸರು ಯಾವ ಗಳಿಗೆಯಲ್ಲಿ ಬೇಕಾದರೂ ನನ್ನನ್ನು ಅರೆಸ್ಟ್ ಮಾಡಬಹುದು ಎಂಬ ಆಲೋಚನೆಗಳಿಂದ ಅವನು ಭೀತನಾಗಿದ್ದಾನೆ.

ಮತ್ತೊಂದು ಮಾಹಿತಿ ಸುದ್ದಿ ಮಾಧ್ಯಮಗಳಿಂದ ತಿಳಿಯಿತು.

ಪೊಲೀಸರು ಕೊಲೆಗಾರನನ್ನು ಮದ್ರಾಸ್‌ನಲ್ಲಿ ಬಂಧಿಸಿದ್ದಾರೆ. ಇನ್ನು ಕೆಲವೇ ಗಂಟೆಗಳಲ್ಲಿ ಬೆಂಗಳೂರಿಗೆ ಕರೆತರುತ್ತಾರೆ.

ಭೀತರಾಗಿ ನಡುಗುತ್ತಿರುವಾಗಲೇ ಕಾಲ್ ಬಂದಿತು.

ಆಶ್ಚರ್ಯ... ಪರಮಾಶ್ಚರ್ಯ...! ಚಂದನ್ ಬಾಟಿಯ ಮಾಡಿದ್ದಾನೆ. ''ನಿನ್ನನ್ನು ಪೊಲೀಸರು ಅರೆಸ್ಟ್ ಮಾಡಿಲ್ವ?''

''ಅರೆಸ್ಟ್ ಯಾಕೆ ಮಾಡ್ತಾರೆ. ಶ್ವೇತಾಳನ್ನು ಕೊಲೆ ಮಾಡಿದ್ದು ನಾನಲ್ಲ. ನನಗಿಂತ ಮೊದಲೇ ಎಸ್.ಎಲ್.ಆರ್. ಎಂಬ (ಸರಗೂರು ಲಕ್ಕಪ್ಪ ರಾಮನ್) ಕೊಲೆ ಮಾಡಿದ್ದ. ಅವಳ ವ್ಯಾನಿಟಿ ಬ್ಯಾಗು ಕಾರಿನ ಸೀಟಿನ ಅಡಿ ಬಿದ್ದಿತ್ತು. ಅದನ್ನು ನಾನು ಎತ್ತಿಕೊಂಡು ಬಂದೆ. ಅದರಲ್ಲಿ ವಿದೇಶಿ ಕ್ಯಾಮರಾ, ಮೊಬೈಲ್ ಇತ್ತು. ಅದನ್ನೆಲ್ಲಾ ನಿನಗೆ ತಂದುಕೊಟ್ಟೆ. ನಾನು ಕೊಲೆ ಮಾಡಿರಲಿಲ್ಲ. ಹಾಗಾಗಿ ನಿನ್ನಿಂದ ಎರಡೂವರೆ ಲಕ್ಷ ಮಾತ್ರ ತಗೊಂಡೆ.'

ಚೇತನ್ ಎದೆ ಒತ್ತಿಕೊಂಡು ಈಗ ತುಂಬಾ ನಿರಾಳವಾಗಿ ಉಸಿರಾಡಿದನು.

ಪೊಲೀಸರು ಎಸ್.ಎಲ್.ಆರ್.ನನ್ನು ವಿಚಾರಣೆ ಮಾಡಿ ನಿಜ ಬಾಯಿ ಬಿಡಿಸಿದರು. ಇವಳಿಂದ ಬ್ಲಾಕ್‌ಮೇಲ್ ಆಟದಿಂದ ಕೋಪಗೊಂಡಿದ್ದ, ಶ್ರೀಮಂತ ಉದ್ಯಮಿ ಸೇಡು ತೀರಿಸಿಕೊಳ್ಳಲು ಈ ಕೊಲೆ ಮಾಡಿಸಿದ್ದನು.

☯

# ನನಗೆ ಸೀಕ್ರೇಟ್ ಆಗಿ ಮದುವೆಯಾಗಿದೆ!
# ಮಕ್ಕಳೂ ಇವೆ ಎಂದ ರಮ್ಯಾ!!

ಒಂದು ಕಾಲದಲ್ಲಿ ಅಪ್ಪು ಅವರ ಜೊತೆಯಾಗಿ ಸ್ಯಾಂಡಲ್‌ವುಡ್‌ ಅನ್ನು ಅಕ್ಷರಶಃ ಆಳಿದವರು ನಟಿ ರಮ್ಯಾ. ಒಂದರ ಮೇಲೊಂದು ಹಿಟ್ ಸಿನಿಮಾ ಕೊಟ್ಟಿದ್ದ ಬ್ಯೂಟಿ ಕ್ವೀನ್ (ಬ್ಯೂಟಿ ವಿತ್ ಬ್ರೈನ್) ರಮ್ಯಾ, ನಂತರದಲ್ಲಿ ಸಿನಿಮಾ ರಂಗದಿಂದ ದೂರ ಸರಿದು ರಾಜಕೀಯ ದಲ್ಲೂ ತಮ್ಮ ಛಾಪು ಮೂಡಿಸಲು ಮುಂದಾಗಿ ಮಂಡ್ಯ ಲೋಕಸಭಾ ಚುನಾವಣೆ ಯಲ್ಲಿ(ಬೈ ಎಲೆಕ್ಷನ್ ನಲ್ಲಿ) ಸ್ಪರ್ಧಿಸಿ ಒಮ್ಮೆ ಸಂಸದೆಯಾಗಿದ್ದರು. ಮುಂದೆ ಏಕೋ ಏನೋ, ಕಾಂಗ್ರೆಸ್ ಪ್ರಿನ್ಸ್‌ಇವರನ್ನು ನಿರ್ಲಕ್ಷಿಸಿದ ಪರಿಣಾಮ, ರಾಜಕೀಯದಿಂದ ನಿವೃತ್ತಿ ಆದರು! ತದ ನಂತರ ಕನ್ನಡ ಚಿತ್ರರಂಗ ಹಾಗೂ ರಾಜಕೀಯ ಎರಡರಿಂದಲೂ ದೂರು ಸರಿದರು.




ಮತ್ತೆ ಈ ಎರಡು ಕ್ಷೇತ್ರದಲ್ಲಿ ಸಕ್ರಿಯವಾಗದ ರಮ್ಯಾ ಅವರು ಹೊಸ ಸಿನಿಮಾ ಮಾಡುತ್ತಾರೆ ಎಂಬ ಸುದ್ದಿ ಆಗಾಗ ಹರಿದಾಡುತ್ತಲೇ ಇದೆ. ಇದರ ನಡುವೆ... ನಟಿ ರಮ್ಯಾ ಇದೀಗ ನಟಿ ಶುಭ್ರ ಅಯ್ಯಪ್ಪನಡೆಸುವ ಯೂಟ್ಯೂಬ್ ಪಾಡ್‌ಕಾಸ್ಟ್‌ನಲ್ಲಿ ಪ್ರತ್ಯಕ್ಷವಾಗಿ ಕೆಲವು ಗಂಟೆಗಳ ಕಾಲ ಹರಟೆ ಹೊಡೆದು ತಮ್ಮ ಜೀವನದ ಕೆಲವು ಮಹತ್ವದ ಸಂಗತಿಗಳನ್ನು ತಿಳಿಸಿದ್ದಾರೆ. ತಮ್ಮ ಬಾಲ್ಯ, ಜನ್ಮಕೊಟ್ಟ ತಂದೆ, ಸರ್ನೇಮ್, ಮದುವೆ ಮತ್ತು ಮಕ್ಕಳ ಕುರಿತು ಮಾತನಾಡಿದ್ದಾರೆ!!

ನಾನು ಚಿಕ್ಕವಳಿದ್ದಾಗ ತುಂಬಾ ಮಾತನಾಡುತ್ತಿದ್ದೆ. ನನ್ನ ವಿದ್ಯಾಭ್ಯಾಸವೆಲ್ಲಾ ಊಟಿಯಲ್ಲೇ ಆಯಿತು. ನನಗೆ ಅಮ್ಮ ಮಾತ್ರ ಇದ್ದದ್ದು, ನಾನು ಚಿಕ್ಕವಳಿದ್ದಾಗಲೇ ಅಪ್ಪನನ್ನು ಕಳೆದುಕೊಂಡೆ! ಊಟಿ ಬೋರ್ಡಿಂಗ್ ಸ್ಕೂಲ್‌ನಲ್ಲಿ ಓದುವಾಗ ಅಪ್ಪನಿಲ್ಲದೇ ಖಾಲಿ ಖಾಲಿ ಅನ್ನಿಸುತ್ತಿತ್ತು. ನನಗೆ ಇದ್ದದ್ದು ಸಿಂಗಲ್ ಪೇರೆಂಟ್. ಎಲ್ಲರೂ ಅವರವರ ಅಪ್ಪನ ಬಗ್ಗೆ ಹೇಳುತಿದ್ದರು. ಆಗ ನಾನು ಅಮ್ಮನ ಹೆಸರು ಹೇಳುತ್ತಿದ್ದೆ. ನನಗೆ ಸರ್‌ನೇಮ್ ಇರಲಿಲ್ಲ, ನಾನು ಭಿನ್ನವಾಗಿ ಕಾಣಿಸುತ್ತಿದ್ದೆ ಎಂದು ವೈಯಕ್ತಿಕ ಮಾಹಿತಿಗಳನ್ನು ಹಂಚಿಕೊಂಡು ತಮ್ಮ ಶಾಲಾ ದಿನಗಳನ್ನು ನೆನಪಿಸಿಕೊಂಡಿದ್ದಾರೆ.

ಚಿಕ್ಕವಳಿದ್ದಾಗ ತುಂಬಾ ಮಾತನಾಡುತ್ತಿದ್ದ ನಾನು ದೊಡ್ಡವಳಾದ ಮೇಲೆ ಇದಕ್ಕೆ ತದ್ವಿರುದ್ಧವಾದೆ. ಅಪ್ಪನಿಲ್ಲದೇ ಖಾಲಿತನ ಅನುಭವಿಸುತ್ತ ಸೈಲೆಂಟ್ ಆದೆ. ಆ ಕಾರಣಕ್ಕೆ ನಾನು ಯಾರೊಂದಿಗೂ ಹೆಚ್ಚು ಮಾತನಾಡುತ್ತಿರಲಿಲ್ಲ, ಮಾತನಾಡಿದರೆ ವೈಯಕ್ತಿಕ ವಿಚಾರಗಳನ್ನು ಹೇಳಿಕೊಳ್ಳಬೇಕಾಗುತ್ತದೆ ಎಂಬ ಆತಂಕವಿತ್ತು. ಸಿನಿಮಾಗೆ ಬಂದ ಮೇಲೆ ನಾನು ಅಂತರ್ಮುಖಿ ಆದೆ. ಯಾರೊಂದಿಗೂ ಹೆಚ್ಚು ಬೆರೆಯು ತ್ತಿರಲಿಲ್ಲ.

ಇನ್ನು ನನ್ನ ಮದುವೆ ವಿಚಾರ ಆಗಾಗ ಚರ್ಚೆಯಲ್ಲಿರುತ್ತದೆ. ಕೆಲವರು ನನಗೇ ಗೊತ್ತಿಲ್ಲದೆ ಅನೇಕ ಸಲ ನನಗೆ ಮದುವೆ ಮಾಡಿಸಿದ್ದಾರೆ! ರಮ್ಯಾಗೆ ಮದುವೆಯಾಗಿ ಮಕ್ಕಳೂ ಆಗಿವೆ!! ರಮ್ಯಾ ಗಂಡ ಮಕ್ಕಳೊಂದಿಗೆ ವಿದೇಶದಲ್ಲಿದ್ದಾರೆ ಎಂದೆಲ್ಲ ಗಾಸಿಪ್ ಹರಡಿತ್ತು!!! ಇದೆಲ್ಲವು ನನಗೆ ವಿಚಿತ್ರ ಅನ್ನಿಸುತ್ತದೆ. ತಮಗೆ ತಾವೇ ಕಲ್ಪನೆ ಮಾಡಿಕೊಂಡು ನನಗೆ ಮದುವೆ ಮಾಡಿದ್ದಾರೆ ಎಂದು ನಗು ನಗುತ್ತಲೇ ಹಾಸ್ಯ ಧಾಟಿಯಲ್ಲಿ ಮಾತನಾಡಿದ್ದಾರೆ.



ಅಂದಹಾಗೆ, ವರ್ಷದ ಹಿಂದೆ ನಟಿ ರಮ್ಯಾ 'ಹಾಸ್ಟೆಲ್ ಹುಡುಗರು' ಸಿನಿಮಾ ಮೂಲಕ ಸ್ಯಾಂಡಲ್ ವುಡ್‌ಗೆ ಕಮ್ ಬ್ಯಾಕ್ ಮಾಡುತ್ತಾರೆ ಎನ್ನಲಾಗಿತ್ತು. ಹಾಸ್ಟೆಲ್... ತಂಡ ಮಾಡಿದ್ದ ಪ್ರೊಮೋ ಶೂಟ್‌ನಲ್ಲಿ ರಮ್ಯಾ ಇದ್ದ ದೃಶ್ಯವು ಇದ್ದುದು ಆ ಸುದ್ದಿಯನ್ನು ನಂಬುವಂತೆ ಮಾಡಿದ್ದು ಸುಳ್ಳಲ್ಲ, ಆದರೆ ರಮ್ಯಾ ಅವರು ಹಾಸ್ಟೆಲ್ ತಂಡದ ವಿರುದ್ಧ ತಿರುಗಿ ಬಿದ್ದು ನನ್ನ ದೃಶ್ಯಗಳನ್ನು ನನ್ನ ಅನುಮತಿ ಇಲ್ಲದೇ ಟ್ರೇಲರ್‌ನಲ್ಲಿ ಬಳಸಿಕೊಳ್ಳಲಾಗಿದೆ ಎಂದು ಕೋರ್ಟ್ ಮೆಟ್ಟಿಲೇರಿದ್ದರು.

ರಮ್ಯಾ ಒಂದು ರೀತಿಯಲ್ಲಿ ನೇರ ಧಿಟ್ಟ ನಿರಂತರ ಹೆಣ್ಣು, ಕಳೆದ ವರ್ಷ ನಟ ದರ್ಶನ್ ಕೇಸ್ ಆದಾಗ, ಮೊನ್ನೆ ಕಾಲ್ತುಳಿದ ಪ್ರಕರಣ ಘಟಿಸಿದಾಗ, ವಿಮಾನ ದುರಂತವಾದಾಗ ರಮ್ಯಾ ಅವರು ತಮ್ಮ ದಿಟ್ಟ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಲೇ ಬಂದಿದ್ದಾರೆ.

ಕಳೆದ ವರ್ಷ 'ಉತ್ತರಾಖಂಡ' ಸಿನಿಮಾದಲ್ಲಿ ನಟ ಧನಂಜಯ್ ಅವರಿಗೆ ಪೂರ್ಣ ಪ್ರಯಾಣದಲ್ಲಿ ನಾಯಕಿಯಾಗಿ ನಟಿಸುವುದಾಗಿ ಒಪ್ಪಿ, ಅದರ ಮುಹೂರ್ತ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ನಂತರ ಅದೇಕೋ ಏನೋ ಆ ಚಿತ್ರದಿಂದಲೂ ಹೊರ ನಡೆದರು. ಅದೇನು ಸಂಭಾವನೆ ಕಮ್ಮಿ ಅಂತಲೋ ಅಥವಾ ಇನ್ನೇನು ತೊಂದರೆಯೋ ಗೊತ್ತಿಲ್ಲ! ರಮ್ಯಾ ಅವರಿಗೆ ಇಂದಿಗೂ ಕೋಟಿ ಲೆಕ್ಕದಲ್ಲಿ ಅಭಿಮಾನಿ ಬಳಗವಿದೆ.ಅವರೆಲ್ಲ ರಮ್ಯಾ ಮತ್ತೆ ಬೆಳ್ಳಿತೆರೆ ಮೇಲೆ ಬರ್ತಾರೇನೋ ಎಂದು ಕಾಯುತ್ತಿದ್ದಾರೆ.

ನೀವೇ ಗಮನಿಸುತ್ತಿದ್ದೀರಲ್ಲ, ಸ್ಯಾಂಡಲ್‌ವುಡ್ ಗಬ್ಬೆದ್ದು ಹೋಗಿದೆ. ರಮ್ಯಾ ದೂರವಾದ ಬಳಿಕ ಇನ್ನೊಬ್ಬ ಒಳ್ಳೆಯ ತಾರೆ ರಾಧಿಕಾ ಪಂಡಿತ್ ಯಶ್ ಕಟ್ಕೊಂಡು ಹೋದರು. ನಂತರ ಊರಿಗೊಬ್ಬಳೇ ಪದ್ಮಾವತಿ.... ಎಂಬಂತೆ ಮೆರೆದವಳು ರಚಿತಾ ರಾಮಿ! ಅವಳ ನಡೆ ನುಡಿ ಮಾನವಂತರಾರಿಗೂ ಹಿಡಿಸುವುದಿಲ್ಲ ಎಂಬುದು ಬಹಿರಂಗ ಸತ್ಯ! ಹೀಗಾಗಿ, ರಮ್ಯಾ ಮತ್ತೆ ಬೆಳ್ಳಿತೆರೆ ಅಲಂಕರಿಸಲಿ ಎಂದು ಹಂಬಲಿಸು ತ್ತಿದ್ದಾರೆ, ಮಾನವಂತ ಚಿತ್ರ ರಸಿಕರು...

# 'ಥಗ್ ಲೈಫ್ ಬಿಡುಗಡೆಯಾದ್ರೆ ನಾವೆಲ್ಲರೂ ಟಿಕೆಟ್ ಖರೀದಿಸಿ ಸಿನಿಮಾ ನೋಡ್ತೇವೆ'

## ಹೀಗೇಕೆ ಹೇಳಿದ್ರು ಕರವೇ ಪ್ರವೀಣ್ ಶೆಟ್ರು?!

ಕಮಲ್ ಹಾಸನ್ ಅವರ 'ಥಗ್ ಲೈಫ್' ಸಿನಿಮಾವನ್ನು ಕರ್ನಾಟಕದಲ್ಲಿ ರಿಲೀಸ್ ಮಾಡಲು ಸುಪ್ರೀಂ ಕೋರ್ಟ್ ಅನುಮತಿ ನೀಡಿರುವ ಬೆನ್ನಲ್ಲೇ ಕರ್ನಾಟಕದಲ್ಲಿ ಕನ್ನಡ ಪರ ಹೋರಾಟಗಾರರಿಗೆ ಪೊಲೀಸರು ನೋಟಿಸ್ ನೀಡಿದ್ದಾರೆ!

ಕಮಲ್ ಹಾಸನ್ ಅವರು ಕರ್ನಾಟಕದ ಜನರ ಕ್ಷಮೆ ಕೇಳದಿದ್ದರೆ, ಇಲ್ಲಿ ಅವರ ಸಿನಿಮಾ ರಿಲೀಸ್ ಮಾಡುವಂತಿಲ್ಲ, ಹಾಗೊಮ್ಮೆ ಮಾಡಿದ್ರೇ ಆದ್ರೆ ಮುಂದಾಗುವ ಹಾನಿಗಳಿಗೆ ಕರ್ನಾಟಕ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ ಎಂದು ಈ ಹಿಂದೆ ಕರ್ನಾಟಕ ರಕ್ಷಣಾ ವೇದಿಕೆ ಯವರು ಎಚ್ಚರಿಸಿದ್ದರು!





ಕರ್ನಾಟಕ ರಕ್ಷಣಾ ವೇದಿಕೆಯ ಪ್ರವೀಣ್ ಶೆಟ್ಟಿ ಬಣ ಹಾಗೂ ನಾರಾಯಣ ಗೌಡ ಬಣ ಜೊತೆಗೆ, ವಾಟಾಳ್ ನಾಗರಾಜ್ ಮತ್ತು ಅವರ ಬೆಂಬಲಿಗರೆಲ್ಲ ಥಗ್ ಲೈಫ್ ಮತ್ತು ಕಮಲ್ ಹಾಸನ್ಗೆ ಭಾರಿ ವಿರೋಧ ವ್ಯಕ್ತಪಡಿಸುತ್ತಿದ್ದರು!! ಈ ಮಧ್ಯೆ ಸುಪ್ರೀಂ ಕೋರ್ಟ್‌ನಿಂದ ಜೂ.17 ರಂದು ತೀರ್ಪು ಹೊರಬಿದ್ದ ಬೆನ್ನಲ್ಲೇ ಇಂದು ಪೊಲೀಸರು ಪ್ರವೀಣ್ ಶೆಟ್ಟಿ ಮತ್ತು ಇತರ ಪ್ರಮುಖ ಕನ್ನಡ ಪರ ಹೋರಾಟಗಾರರಿಗೆ ನೋಟಿಸ್ ನೀಡಿ, ನೀವು ಪ್ರತಿಭಟನೆ ಮಾಡಲು ಇಚ್ಛಿಸಿದರೆ ತೊಂದರೆಯಿಲ್ಲ, ಮಾಡಿ ಕೊಳ್ಳಿ, ಆದರೆ ಫ್ರೀಡಂ ಪಾರ್ಕ್‌ನಲ್ಲಿ ಮಾತ್ರ ಪ್ರತಿಭಟನೆ ಮಾಡಬೇಕು ಎಂದು ತಿಳಿಸಲಾಗಿದೆ!!

ಈಗ ಪ್ರವೀಣ್ ಶೆಟ್ಟಿ ಸೇರಿದಂತೆ ಕನ್ನಡ ಪರ ಹೋರಾಟಗಾರರ ಮನೆಯ ಬಳಿ ಪೊಲೀಸರು ಕಾವಲಿದ್ದಾರೆ! ಈ ವೇಳೆ ಪೊಲೀಸರ ಜೊತೆ ಮಾತನಾಡಿದ ಪ್ರವೀಣ್ ಶೆಟ್ಟಿ 'ಸುಪ್ರೀಂ ಕೋರ್ಟ್ ಹೇಳಿದ್ಮೇಲೆ ಇನ್ನೇನು... ನಾವ್ಯಾವತ್ತೂ ಥಿಯೇಟರ್ ಗಳಿಗೆ ಬೆಂಕಿ ಹಚ್ಚೋ ಮಾತಾಡಿಲ್ಲ, ನಾವಿನ್ನೂ ಹೋರಾಟದ ಬಗ್ಗೆ ಪ್ಲ್ಯಾನ್ ಮಾಡಿಲ್ಲ' ಎಂದಿದ್ದಾರೆ.

ಥಗ್ ಲೈಫ್ ಕುರಿತಂತೆ ಸುಪ್ರೀಂ ಕೋರ್ಟ್ ತೀರ್ಪು ಹೊರಬಿದ್ದ ಬೆನ್ನಲ್ಲೇ ಪ್ರವೀಣ್ ಶೆಟ್ಟಿಅವರು ವಿಡಿಯೊವೊಂದನ್ನ ಮಾಡಿದ್ದಾರೆ. ಇದರಲ್ಲಿ... ಕನ್ನಡ ಚಿತ್ರರಂಗದ ಮತ್ತು ಕನ್ನಡ ಪರ ಹೋರಾಟದ ಅಳಿವು-ಉಳಿವಿನ ಪ್ರಶ್ನೆ ಈಗ ಉದ್ಭವ ಆಗಿದೆ. ಥಗ್ ಲೈಫ್ ಸಿನಿಮಾ ಕರ್ನಾಟಕದಲ್ಲಿ ಬಿಡುಗಡೆಗೆ ಸುಪ್ರೀಂಕೋರ್ಟ್ ಆದೇಶ ಕೊಟ್ಟಿದೆ. ಆದರೆ ಕನ್ನಡಿಗರು ಆ ಸಿನಿಮಾವನ್ನ ತಡೀಬೇಕಾ?-ಬಿಡಬೇಕಾ ಅನ್ನೋ ನಿರ್ಧಾರವನ್ನ ನಾವಿನ್ನೂ ಮಾಡಿಲ್ಲ, ಅದಕ್ಕೂ ಮೊದಲೇ ಪೊಲೀಸರು ಮನೆ ಹತ್ರ ಬಂದಿದ್ದಾರೆ. ಇದನ್ನೆಲ್ಲ ನೋಡಿದ್ರೆ ಮುಂದೆ ಹೋರಾಟ ಮಾಡೋದು ಕಷ್ಟ ಎನ್ನಿಸುತ್ತಿದೆ.....

17 ರ ರಾತ್ರಿಯಿಂದಲೂ 10-15 ಜನ ಪೊಲೀಸರು ಮನೆ ಹತ್ರ ಇದ್ದಾರೆ. ನಮ್ಮನ್ನ ಕಾಯುತ್ತಿದ್ದಾರೆ. ಇದನ್ನೆಲ್ಲ ನೋಡಿದ್ರೆ ಕಾನೂನಲ್ಲಿ ನಮಗೆ ಸ್ವಾತಂತ್ರ್ಯವೇ ಇಲ್ಲವಾ ಎಂಬ ಪ್ರಶ್ನೆ ಉದ್ಭವ ಆಗುತ್ತದೆ ಎಂದು ಹೇಳಿ ಕೊಂಡಿದ್ದಾರೆ.. ಮುಂದುವರಿದು... ಇವತ್ತು ಥಗ್ ಲೈಫ್ ಸಿನಿಮಾವನ್ನ ಎಲ್ಲ ಬಹಿಷ್ಕಾರ ಮಾಡಿದ್ದಾರೆ. ಒಂದು ಪಕ್ಷ ಥಗ್ ಲೈಫ್ ಚಿತ್ರವನ್ನ ಕರ್ನಾಟಕದಲ್ಲಿ ಬಿಡುಗಡೆ ಮಾಡಿದ್ರೆ, ನಾವೆಲ್ಲ ಟಿಕೆಟ್ ಪಡೆದು ಥಿಯೇಟರ್‌ಗೆ ಹೋಗಿ ಸಿನಿಮಾ ನೋಡೋಕೆ ಹೋಗ್ತೇವೆ. ಯಾಕೆಂದ್ರೆ ನಮಗೆ ಸಂವಿಧಾನ ದಲ್ಲಿ ಹಕ್ಕಿದೆ. ಕಮಲ್ ಹಾಸನ್ರಿಗೆ ಕನ್ನಡದ ಬಗ್ಗೆ ಕನಿಷ್ಠ ಗೌರವ ಇಲ್ಲ, ಆ ವ್ಯಕ್ತಿಯ ವಿರುದ್ಧ ಸರ್ಕಾರ ನಿಂತುಕೊಳ್ಳಬೇಕಾಗು ತ್ತದೆ. ಥಗ್ ಲೈಫ್ ಬಿಡುಗಡೆಗೆ ಅವಕಾಶ ಇಲ್ಲ ಎಂದು ಸರ್ಕಾ ರವೇ ಹೇಳಿದೆ. ಹಾಗಿದ್ದಾಗ್ಯೂ ರಿಲೀಸ್ ಆಗಿದ್ರೇ ಆದ್ರೆ... ನಾವೆಲ್ಲ ಕನ್ನಡ ಪರ ಹೋರಾಟ ಗಾರರು ಟಿಕೆಟ್ ಪಡೆದು ಸಿನಿಮಾ ನೋಡೋ ಮುಖಾಂತರ ಸಂದೇಶ ಕೊಡ್ತೇವೆ ಎಂದಿದ್ದಾರೆ!!



ಪ್ರವೀಣ್ ಶೆಟ್ಟಿ ಅವರನ್ನು ಹೊರತುಪಡಿಸಿ ಈ ವಿಚಾರದಲ್ಲಿ ಇನ್ನಾವ ಹೋರಾಟಗಾರರೂ ಬಾಯಿ ಬಿಟ್ಟಿಲ್ಲ! ಅದಿರಲಿ, ಈ ಹಿಂದೆ ಥಗ್ ಲೈಫ್ ರಿಲೀಸ್ ಆದ್ರೆ ಹೋರಾಟ ಮಾಡ್ತೀವಿ, ಮುಂದಾಗೋ ಹಾನಿಗಳಿಗೆ ನಾವು ಜವಾಬ್ದಾರರಲ್ಲ... ಎಂಬಿತ್ಯಾದಿ ಮಾತುಗಳನ್ನಾಡಿದ್ದ ಪ್ರವೀಣ್ ಶೆಟ್ಟಿ ಅವರು ಈಗ್ಯಾಕೆ ಟಿಕೆಟ್ ತಗೊಂಡು ಸಿನಿಮಾ ನೋಡ್ತೇವೆ ಅಂದ್ರು?! ಅನ್ನೋ ಪ್ರಶ್ನೆ ಎದ್ದಿದೆ ಈವಾಗ. ಇದೂ ಕೂಡ ಅವರ ಪ್ರತಿಭಟನೆಯ ಇನ್ನೊಂದು ಸ್ವರೂಪವೇ ಆಗಿರಬಹುದಾ?! ಸುಪ್ರೀಂ ಕೋರ್ಟ್ ಹೇಳಿದ ಮೇಲೆ ವಿರೋಧ ಮಾಡೋಕೆ ಸಾಧ್ಯವಿಲ್ಲ, ಹಾಗಂತ ಕನ್ನಡಕ್ಕೆ ಅವಮಾನ ಮಾಡಿದ ತಮಿಳು ನಟ ಕಮಲ ಹಾಸನ್‌ರನ್ನು ಕ್ಷಮಿಸುವುದಕ್ಕೆ ಆಗುತ್ತಾ?? ಅವರ ಥಗ್ ಲೈಫ್ ಸಿನಿಮಾ ಬಿಡುಗಡೆಯಾಗೋದೂ ಹೋರಾಟಗಾರರಿಗಿರಲಿ, ಕನ್ನಡಿಗರಾರಿಗೂ ಇಷ್ಟವಿಲ್ಲ! ಕರ್ನಾಟಕದ ಮೇಲೆ ಅಷ್ಟು ಪ್ರೀತಿ ಇದೆ ಎಂದು ಭೋಂಗು ಬಿಡುವ ವ್ಯಕ್ತಿ ಕನ್ನಡಿಗರ ಕ್ಷಮೆ ಕೇಳಿ ಅದನ್ನು ಖಚಿತ ಪಡಿಸಬಹುದಿತ್ತು ಅಲ್ಲವೇ? ಸಿನಿಮಾದಂತೆಯೇ ಡ್ರಾಮಾ ಆಡುವ ವ್ಯಕ್ತಿಗೆ ನಾವ್ಯಾಕೆ ಗೌರವ ಕೊಡಬೇಕು ಎಂದು ಮಾತಾಡಿಕೊಳ್ಳುತ್ತಿದೆ ಕನ್ನಡಿಗರ ಗುಂಪು....

ಇನ್ನೊಂದು ಪ್ರಮುಖ ಮಾಹಿತಿ ಏನೆಂದರೆ, 'ಥಗ್ ಲೈಫ್' ಕರ್ನಾಟಕ ಬಿಡುಗಡೆಯ ಹಕ್ಕನ್ನು 8 ಕೋಟಿಗೆ ಖರೀದಿ ಮಾಡಿದ್ದ ವಿತರಕರು ಇದೀಗ ನಾವು ರಿಲೀಸ್ ಮಾಡುವುದಿಲ್ಲ ಎಂದು ಓಪನ್ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ! ಇದಕ್ಕೆ ಕಾರಣ, ಇವರಿಗೆ ಕನ್ನಡದ ಮೇಲಿರುವ ಅಭಿಮಾನ!!

ಜೊತೆಗೆ, ತಮಿಳು, ತೆಲುಗು ಹಾಗೂ ಹಿಂದಿ ಮಳೆಯಾಳ ಭಾಷೆಗಳಲ್ಲಿ ಅದಾಗಲೇ ಬಿಡುಗಡೆಯಾಗಿದ್ದ ಥಗ್ ಲೈಫ್ ಎಲ್ಲಾ ಕಡೆ ಫ್ಲಾಪ್ ಆಗಿರುವುದು!!

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 22.6.2025

# ‘ರಾಮಧೂತ’ನಿಂದ 22 ಲಕ್ಷ ಕಿತ್ತನೇ ನಂದ ಕಿಶೋರ?!

ಸುಧೀರ್ ಅವರ ಜೇಷ್ಠ ಪುತ್ರ ಸ್ಯಾಂಡಲ್ ವುಡ್ ಖ್ಯಾತ ನಟ, ನಿರ್ದೇಶಕ ನಂದ ಕಿಶೋರ್ ಈ ಹಿಂದೆ ನಿರ್ಮಾಪಕರೊಬ್ಬರಿಗೆ 30 ಲಕ್ಷ ದೋಖಾ ಮಾಡಿ, ಕೋರ್ಟ್‌ಗೆ ಅಲೆಯುತ್ತಿದ್ದ ಸುದ್ದಿ ಜಗಜಾಹೀರಾಗಿತ್ತು. ಇದೀಗ ಯುವ ನಟ ಶಬರೀಶ್ (ರಾಮ ಧೂತ ಚಿತ್ರದ ಹೀರೋ) ನಂದ ಕಿಶೋರ್ ಅವರು ತಮ್ಮಿಂದ 22 ಲಕ್ಷ ರೂಪಾಯಿ ಹಣ ಪಡೆದುಕೊಂಡಿದ್ದು, ಈಗ ಹಣವನ್ನ ಹಿಂತಿರುಗಿಸದೆ ಸತಾಯಿಸುತ್ತಿದ್ದಾರೆ... ಎಂದು ಗೋಳಾಡುತ್ತಿದ್ದಾರೆ! ಇಷ್ಟೇ ಅಲ್ಲದೆ, ನಂದ ಕಿಶೋರ್ ಸುದೀಪ್ ಅವರ ಹೆಸರು ಹೇಳಿ ನನಗೆ ಬೆದರಿಕೆ ಸಹ ಹಾಕಿದ್ದಾರೆ ಎಂದು ಆರೋಪಿಸಿದ್ದಾರೆ!!



ರನ್ನ, ವಿಕ್ಟರಿ, ಅಧ್ಯಕ್ಷ, ಟೈಗರ್, ಪೊಗರು ಮುಂತಾದ ಸಿನಿಮಾಗಳನ್ನು ನಿರ್ದೇಶಿಸಿರುವ ನಿರ್ದೇಶಕ ನಂದ ಕಿಶೋರ್ ನಿಜಕ್ಕೂ ಪ್ರತಿಭಾವಂತರೆ. ಆದರೆ, ಸೋದರ ತರುಣ್ ಸುಧೀರ್ ಅವರಲ್ಲಿರುವ ಒಳ್ಳೆ ಗುಣಗಳು ಅಣ್ಣ ನಂದನಲ್ಲಿ ಇಲ್ವೇ ಇಲ್ಲ! ಕೈಯ್ಯಲ್ಲಿ ಸಿನಿಮಾ ಇದ್ದಾಗಲೂ, ಇಲ್ಲದಾಗಲೂ ಇಂಥ ಲಫಡ ಕೆಲಸಗಳನ್ನು ಮಾಡುತ್ತಿರುತ್ತಾರೆ! ಹೀಗಾಗಿ, ಅವರ ಬಳಿ ಯಾರೂ ಹೆಚ್ಚು ದಿನ ಇರಲಾರರು! ಇಷ್ಟಕ್ಕೂ ಯುವ ನಟ ಶಬರಿಶ್ ನಂದ ಕಿಶೋರ್ ಕೈಗೆ ತಗ್ಲಾಕ್ಕೊಂಡಿದ್ದೇಗೆ?

ಈಗ್ಗೆ ಒಂಬತ್ತು ವರ್ಷಗಳ ಹಿಂದೆ ಜಿಮ್ ಒಂದರಲ್ಲಿ ಪರಿಚಯವಾದರಂತೆ. ಪರಿಚಯ ಗೆಳೆತನವಾಗಿ, ನಂದ ಕಿಶೋರ್, ಶಬರೀಶ್ ಅವರನ್ನು ಕಿಚ್ಚ ಸುದೀಪ್ ನಾಯಕತ್ವದ ಸಿಸಿಎಲ್‌ನಲ್ಲಿ ಆಡಿಸುವುದಾಗಿ ಭರವಸೆ ನೀಡಿ, ಶಬರೀಶ್ ಅವರಿಂದ 22 ಲಕ್ಷ ರೂಪಾಯಿ ಹಣ ಪಡೆದುಕೊಂಡಿದ್ದರಂತೆ. ನಾನು ಚಿನ್ನ ಅಡವಿಟ್ಟು ಹಣ ಕೊಟ್ಟಿದ್ದೆ ಎಂದು ಶಬರೀಶ್ ಹೇಳಿಕೊಂಡಿದ್ದಾರೆ!



ಹಣವನ್ನು ಮರಳಿಸುವಂತೆ ಕೇಳಿದರೆ ಬೆದರಿಕೆ ಹಾಕುತ್ತಾರೆ. ನಾನು ಹಣ ಕೇಳಿದಾಗೆಲ್ಲ ಸುದೀಪ್ ಸರ್ ಹೆಸರು ಹೇಳಿ ಏಮಾರಿಸಿದರು. ಸಿನಿಮಾದಲ್ಲಿ ಅವಕಾಶ ಕೊಡ್ತೀನಿ ಅಂತ ಹೇಳಿ ನನಗೆ ಮೋಸ ಮಾಡಿದ್ದಾರೆ. ನಾನು ಕೊಟ್ಟ ಹಣವೂ ಇಲ್ಲ, ಸಿನಿಮಾದಲ್ಲಿಯೂ ಅವಕಾಶ ಕೊಡಲಿಲ್ಲ! ನಾನು ಸಿಸಿಎಲ್‌ನಲ್ಲಿ ಆಡುವ ಕನಸು ಕಟ್ಟಿಕೊಂಡಿದ್ದೆ. ಕೆಸಿಸಿ ಟೂರ್ನಿಯಲ್ಲಿ ನಾನು ಎರಡು ಸೀಸನ್ ಆಡಿದ್ದೇನೆ. ಹಣ ಕೇಳಿದರೆ ನಿನ್ನನ್ನು ಕೆಸಿಸಿಯಿಂದಲೂ ಹೊರ ಹಾಕಿಸ್ತೇನೆ ಅಂತ ಬೆದರಿಕೆ ಹಾಕುತ್ತಿದ್ದರು ನಂದ ಕಿಶೋರ್ ಎಂದು ಶಬರೀಶ್ ಕಣ್ಣೀರಿಟ್ಟಿದ್ದಾರೆ! ನಾನು ನನ್ನ ಸ್ವಂತ ಶ್ರಮದಿಂದ ‘ರಾಮಧೂತ’ ಸಿನಿಮಾ ಮಾಡಿದ್ದೇನೆ. ಶೂಟಿಂಗ್ ಪೂರ್ತಿ ಆಗಿದೆ. ಸಿನಿಮಾ ರಿಲೀಸ್ ಮಾಡಲು ನನ್ನ ಬಳಿ ಹಣ ಇಲ್ಲ, ನನ್ನ ಹಣ ವಾಪಸ್ ಕೊಡಿ ಅಂತ ಕೇಳಿದರೆ ಏನು ಮಾಡ್ಕೊತೀಯಾ ಮಾಡ್ಕೊ ಅಂದಿದ್ದಾರೆ! ನಮ್ಮಂತ ಪುಟ್ಟ ಕಲಾವಿದರು ಹೇಗೆ ಬದುಕೋದು ಗೊತ್ತಾಗ್ತಿಲ್ಲ, ನಾನು ಈ ವಿಚಾರವನ್ನು ಸುದೀಪ್ ಸರ್ ಗಮನಕ್ಕೆ ತರಲು ಪ್ರಯತ್ನ ಪಟ್ಟಾಗ ನನ್ನನ್ನು ತಡೆಯಲಾಯ್ತು. ನನ್ನ ಹಣ ನನಗೆ ಕೊಡದೇ ಇದ್ದರೆ ನಂದ ಕಿಶೋರ್ ವಿರುದ್ಧ ಕಾನೂನು ಮೊರೆ ಹೋಗುತ್ತೇನೆ. ಈ ವಿಷಯವನ್ನು ಸುದೀಪ್ ಸರ್ ಗಮನಕ್ಕೂ ತರುತ್ತೇನೆ. ಫಿಲ್ಮ್ ಚೇಂಬರ್‌ಗೂ ದೂರು ಕೊಡುತ್ತೇನೆ ಎಂದಿದ್ದಾರೆ. ಇವನೆಲ್ಲೋ ಬಾಯಿ ಮಾತಿನ ಶೂರ... ಹೀಗೆಲ್ಲ ಹೇಳಿಕೊಂಡು ಗೋಳಾಡುವ ಬದಲು ನೆಟ್ಟಗೆ ಪೊಲೀಸ್ ಸ್ಟೇಷನ್‌ಗೆ ತೆರಳಿ ದೂರು ನೀಡಲಿ....

# ರಚಿತಾ ರಾಮಿ ಹೊಸ ಆಟಕ್ಕೆ ಬೇಸತ್ತ ನಿರ್ಮಾಪಕರು...

ಡಿ ಬಾಸ್ ಬೆಂಬಲವಿದೆ... ಎಂಬ ಧೈರ್ಯದ ಮೇಲೆ ಬುಲ್ ಬುಲ್ ರಚಿತಾ ರಾಮಿ ಬೇಜಾನ್ ಮೆರೆಯುತ್ತಿದ್ದಾಳೆ ಅಂತ ಅನ್ನಿಸುತ್ತಿಲ್ಲವೇ?! ಅಲ್ರಿ, ಈಯಮ್ಮನಿಗೆ ಕಾಮನ್ ಸೆನ್ಸ್ ಇದ್ರೆ, ಗೆಲ್ಲಲೇ ಬೇಕು ಎಂಬ ಹಠದಿಂದ 23 ನಿಮಿಷ ಹೊಸ ದೃಶ್ಯಗಳ ಶೂಟ್ ಮಾಡಿ ಪುನರ್ ಬಿಡುಗಡೆ ಮಾಡಿದ ತನ್ನದೇ ಸಿನಿಮಾದ ಪ್ರಚಾರ ಕಾರ್ಯಕ್ಕೆ ಹೋಗಲೇ ಬೇಕಿತ್ತು. ಸಿನಿಮಾ ಗೆದ್ರೆ ಅದರ ಹೀರೋಯಿನ್ ತನಗೂ ಹೆಸರು ಬರುತ್ತಿತ್ತು ಅಲ್ವಾ. ನಾನೀಗಾಗಲೇ ಗೆದ್ದು ಕೋಟಿ ಕೋಟಿ ಮಾಡಿಟ್ಟುಕೊಂಡಿದ್ದೇನಲ್ಲ... ನನಗೇಕೆ ಹೆಸರು?! ಈ ಅಹಂಕಾರ ಇದೆಯಲ್ಲ... ಇದೊಂತರ ಕರ್ಮ! ಕರ್ಮ ಯಾರನ್ನೂ ಬಿಡುವುದಿಲ್ಲ! ಒಂದಲ್ಲ ಒಂದಿನ ಸುಡುತ್ತದೆ!!!

ವಿಷಯ ಏನೂಂತ ಗೊತ್ತಿದೆ ಅಲ್ವಾ... ನಾಗಶೇಖರ್ ಸ್ಯಾಂಡಲ್‌ವುಡ್‌ನ ಅತ್ಯುತ್ತಮ ನಿರ್ದೇಶಕರಲ್ಲಿ ಒಬ್ಬರು. ಅವರ ನಿರ್ದೇಶನದ ಅರಮನೆ, ಸಂಜು ವೆಡ್ಸ್ ಗೀತಾ, ಮೈನಾ, ಮಾಸ್ತಿಗುಡಿ, ಅಮರ್... ಮುಂತಾದ ಸಿನಿಮಾಗಳನ್ನು ಚಿತ್ರಿಸಿದ್ದಾರೆ. ಈ ಪೈಕಿ ಮೂರು ಚಿತ್ರಗಳು ಸೂಪರ್ ಹಿಟ್ ಆಗಿವೆ. ಮಾಸ್ತಿಗುಡಿ ಸೋಲಿಗೆ, ಸಾಹಸ ಕಲಾವಿದರಿಬ್ಬರ ದುರ್ಮರಣಕ್ಕೆ ಖಂಡಿತ ನಾಗಶೇಖರ್ ಕಾರಣರಲ್ಲ, ಭೀಮ ವಿಜಯವೇ ಕಾರಣ! ಅಮರ್ ಕತೆ, ಚಿತ್ರಕತೆ ಚೆನ್ನಾಗಿಯೇ ಇತ್ತು, ಆದರೆ, ತೊಡರುಗಾಲಿನ ದುರಾದೃಷ್ಟಕ್ಕೆ ಸಿನಿಮಾ ಸೋತು ಹೋಯ್ತು! ಎಸ್. ಮಹೇಂದರ್ ಅವರ ಗರಡಿಯಲ್ಲಿ ಕಲಿತಿರುವ ನಾಗು ನಿಜಕ್ಕೂ ಒಳ್ಳೆ ಪ್ರತಿಭೆ. ಆದರೆ, ಅವರ ಪ್ರತಿಭೆ ಅನಾವರಣಕ್ಕೆ ಇಲ್ಲಿ ಪ್ರತಿಕೂಲ ಅವಕಾಶಗಳಿಲ್ಲ! ಇದು ನಿಜಕ್ಕೂ ದುರಾದೃಷ್ಟ...





ಅದಿರಲಿ, ಮಾಸ್ತಿಗುಡಿ ಘಟನೆ ಕೆಲವು ವಿದ್ಯಾಮಾನಗಳ ಬಳಿಕ ನಾಗಶೇಖರ್ ಅವರು ತೆಲುಗು, ತಮಿಳತ್ತ ಮುಖ ಮಾಡಿದ್ದರು. ಕನ್ನಡದ ಲವ್ ಮಾಕ್ಟೇಲ್ ಚಿತ್ರವನ್ನ ತೆಲುಗಿನಲ್ಲಿ ನಿರ್ಮಿಸಿ ಹತ್ತಾರು ಕೋಟಿ ಕಳೆದುಕೊಂಡು ಬಂದರು. ತಮಿಳಿನಲ್ಲಿ ಒಂದೊಳ್ಳೆ ಅವಕಾಶ ಸಿಕ್ಕಿತ್ತು. ಸಿರುಗು ತುಟಿಯ ವ್ಯಕ್ತಿಯೊಬ್ಬನ ಸತ್ಯ ಘಟನೆ ಆಧಾರಿತ ಸಿನಿಮಾವದು. ಅದರಲ್ಲಿ ನಾಗಶೇಖರ್ ಅವರೇ ಹೀರೋ. ಅದಿನ್ನೂ ಮುಗಿದಿಲ್ಲ. ಈ ನಡುವೆ ಸಂಜು ವೆಡ್ಸ್ ಗೀತಾ-2 ಮಾಡುವ ಅವಕಾಶ ಒದಗಿಬಂತು. ಶ್ರೀನಗರ ಕಿಟ್ಟಿ ಚಲವಾದಿ ಕುಮಾರ್ ಒತ್ತಾಯದ ಮೇರೆಗೆ ಭಾಗ 2 ಚಿತ್ರಿಸಲು ಒಪ್ಪಿದ ನಾಗಶೇಖರ್‌ಗೆ ರಮ್ಯಾ ಅವರೇ ಇಲ್ಲಿಯೂ ಹೀರೋಯಿನ್ ಆಗಬೇಕು ಎಂಬ ಆಸೆ ಏನೋ ಇತ್ತು. ಆದರೆ, ಮೊದಲ ಭಾಗದಲ್ಲೇ ಆಕೆ ಸತ್ತು ಹೋಗಿದ್ರಲ್ಲ! ಇಲ್ಲಿ ರಿಪೀಟ್ ಮಾಡಲು ಕತೆ ಒಪ್ಪಲಿಲ್ಲ. ಹಾಗಾಗಿ, ರಚಿತಾ ರಾಮ್ ಆಯ್ಕೆ ಮಾಡಿಕೊಂಡರು. ಸಿನಿಮಾ ಚೆನ್ನಾಗಿಯೇ ಮೂಡಿ ಬಂದಿತ್ತು. ಆದರೆ, ಕ್ಲೈಮಾಕ್ಸ್ ಸ್ವಲ್ಪ ಯಡವಟ್ಟು ಆಗಿತ್ತು. ಒಂದೊಳ್ಳೆ ಸಿನಿಮಾ ಸೋಲಬಾರದು ಎಂಬ ಒಂದೇ ಕಾರಣಕ್ಕೆ ಬಿಡುಗಡೆ ಮಾಡಿದ ಮೂರೇ ದಿನಕ್ಕೆ ಸಿನಿಮಾವನ್ನು ಥೀಯೇಟರ್ ಗಳಿಂದ ಹಿಂತೆಗೆದುಕೊಂಡು, ಕೊನೆಯ 23 ನಿಮಿಷಗಳ ದೃಶ್ಯಗಳನ್ನು ಬದಲಿಸಿ ರೀ-ರಿಲೀಸ್ ಮಾಡಿದರು! ಹೀಗೆ ಪುನರ್ ಚಿತ್ರಣಗೊಂಡು ಪುನರ್ ಬಿಡುಗಡೆ ಕಂಡಿರುವ ಸಿನಿಮಾ 4ನೇ ವಾರದಲ್ಲಿ ಪ್ರದರ್ಶನ ಕಾಣುತ್ತಿದೆ ನಿಜ. ಆದರೆ, ಇವತ್ತಿನ ಪೈಪೋಟಿಯಲ್ಲಿ, ಪರಭಾಷಾ ಸಿನಿಮಾಗಳ ಹಾವಳಿಯಲ್ಲಿ ಒಳ್ಳೆ ಪ್ರಚಾರ ಕೊಟ್ರೆ, ಮಾತ್ರ ಸಿನಿಮಾ ಥೀಯೇಟರ್‌ನಲ್ಲಿ ಉಳಿಯೋದು! ಭಾಗ-2ರ ಪ್ರಚಾರ ಕಾರ್ಯಕ್ಕೆ ರಚಿತಾ ರಾಮ್ ಬರಲೇ ಇಲ್ಲ! ನಿರ್ದೇಶಕ ನಿರ್ಮಾಪಕರಿಗೆ ನಖಶಿಖಾಂತ ಉರಿದು ಹೋಗಿದೆ. ಪ್ರೆಸ್ ಮೀಟ್ ಮಾಡಿ ಉಗಿದಿದ್ದಾರೆ. ಜೊತೆಗೆ ಫಿಲಂ ಚೇಂಬರ್‌ನಲ್ಲೂ ದೂರಿದ್ದಾರೆ. ಇದು ತಪ್ಪಾ?



ಇದೀಗ ಬುಲ್ ಬುಲ್ ರಚಿತಾ ರಾಮಿ ಅನ್ನದಾತರ ವಿರುದ್ಧವೇ ತಿರುಗಿ ಬಿದ್ದು ಏನೇನೋ ವದರುತ್ತಿದ್ದಾಳೆ. ನಂದೇನು ತಪ್ಪಿಲ್ಲ ಎಂದು ಮೊಂಡು ವಾದ ಮಂಡಿಸುತ್ತಿದ್ದಾಳೆ. ಇಷ್ಟಕ್ಕೂ ಡಿ ಬಾಸ್, ಮಂತ್ರಿ ಮಹೋದಯರ ಪಾಳೆಯದಲ್ಲಿ ಮೃಷ್ಟಾನ್ನ ಮುಕ್ಕುತ್ತಿರುವ ರಚಿತಾಗೆ ಮುಷ್ಠಿ ಅನ್ನದ ಅವಶ್ಯಕತೆ ಏನಿದೆ ಅಲ್ವಾ! ಇವೆಲ್ಲಾ ಕರ್ಮ ಸುಮ್ಮನೆ ಬಿಡೋದಿಲ್ಲ... ಅಂದಹಾಗೆ, ಉಪ್ಪಿ ರುಪ್ಪಿ ಸಿನಿಮಾದಲ್ಲಿ ನಟಿಸಲು ಒಪ್ಪಿಕೊಂಡು 13 ಲಕ್ಷ ರೂ ಅಡ್ವಾನ್ಸ್ ಪಡೆದುಕೊಂಡಿದ್ದ ರಚಿತಾ ಆಮೇಲೆ ಶೂಟಿಂಗ್‌ಗೂ ಹೋಗಿಲ್ಲ, ಅಡ್ವಾನ್ಸೂ ವಾಪಸ್ ಕೊಟ್ಟಿಲ್ಲ... ಎಂಬುದಾಗಿ ಉಪ್ಪಿ ನಿರ್ಮಾಪಕಿ ವಿಜಯಲಕ್ಷ್ಮಿ ದೂರಿದ್ದಾರೆ!

ಈ ಬಗ್ಗೆ ಪ್ರಶ್ನಿಸಿದರೆ, ಇದನ್ನೆಲ್ಲಾ ಮಾತಾಡುವಂತಿಲ್ಲ, ಸಾ.ರಾ. ಗೋ. ಉತ್ತರಿಸುತ್ತಾರೆ! ಎಂದು ಜಾರಿಕೊಳ್ಳುತ್ತಾಳೆ ರಾಮಿ!!

ನಂದಿಬೆಟ್ಟಕ್ಕೆ ಹೋಗಲು ಪುರುಸೊತ್ತು ಇದೆ, ಸಿನಿಮಾ ಪ್ರಚಾರಕ್ಕೆ ಹೋಗಲು ಟೈಂ ಇಲ್ಲಾ...ಇಂತವಳ ‘ಬೆನ್ನಿಗೆ’ ಗೋವಿಂದು ನಿಂತಿದ್ದಾರಂತೆ. ಗೋವಿಂದ...ಗೋವಿಂದ !!!


## ಪೊಲೀಸ್, ಕೋರ್ಟ್ ಹಾಗೂ ಮಾಧ್ಯಮ ಸಹಾಯವಾಣಿ

- ಗಂಡನಿಂದ ತೊಂದರೆಯೇ? ಪತ್ನಿಯಿಂದ ಕಿರುಕುಳವೇ?
- ಪ್ರೇಮಿಯಿಂದ ಬ್ಲ್ಯಾಕ್‌ಮೇಲ್ ಆಗುತ್ತಿದೆಯೇ?
- ಹೊಸದಾಗಿ ಮದುವೆಯಾಗಿ ಪತಿ ಪತ್ನಿ ಹೊಂದಾಣಿಕೆ ಇಲ್ಲದೆ ನಿಮಗೆ ಕೌನ್ಸಿಲಿಂಗ್ ಅಗತ್ಯವಿದೆಯೇ?
- ಅಣ್ಣ ತಮ್ಮಂದಿರ ನಡುವೆ, ಅಕ್ಕ ತಂಗಿಯರ ನಡುವೆ ಅಥವಾ ದಾಯದಿಗಳ ನಡುವೆ ಜಮೀನು-ಕೋರ್ಟ್ ವ್ಯಾಜ್ಯಗಳಿವೆಯೇ? ಪೊಲೀಸರು ನಿಮ್ಮ ದೂರರ್ಜಿ ತೆಗೆದುಕೊಳ್ಳುತ್ತಿಲ್ಲವೇ? ಅಥವಾ ಅರ್ಜಿಗೆ ಸರಿಯಾಗಿ ಸ್ಪಂಧಿಸುತ್ತಿಲ್ಲವೇ?
- ಪೋಷಕರೇ, ನಿಮ್ಮ ಮಕ್ಕಳು ನಿಮ್ಮ ಆಸ್ತಿ ಪಾಸ್ತಿ ಹೊಡೆದುಕೊಂಡು ಊಟ ಹಾಕದೆ ಮನೆಯಿಂದ ಹೊರ ಹಾಕಿದ್ದಾರೆಯೇ?
- ಅಪರಿಚಿತ ಪುರುಷ/ಮಹಿಳೆ ಯಿಂದ ತೊಂದರೆ (ಬ್ಲ್ಯಾಕ್ ಮೇಲ್) ಆಗುತ್ತಿದೆಯೇ?
- ಮಹಿಳೆಯರೇ/ ಪುರುಷರೇ ಮಹಿಳಾ ಪೊಲೀಸ್ ಠಾಣೆ ಹಾಗೂ ಮಹಿಳಾ ಆಯೋಗದಿಂದ ನಿಮಗೇನಾದರೂ ಸಹಾಯ ಆಗಬೇಕೇ?
- ಹಣ ಕಾಸು ವ್ಯವಹಾರದಲ್ಲಿ ಮೋಸವಾಗಿ ವಸೂಲಿ ಮಾಡಲಾಗದೆ ಪರದಾಡುತ್ತಿದ್ದೀರಾ? ಅಥವಾ ಯಾರಾದರೂ ಸಾಲ ಕೊಟ್ಟು ಬಡ್ಡಿ ಚಕ್ರಬಡ್ಡಿ ವಿಧಿಸಿ ನಿಮ್ಮ ನೆಮ್ಮದಿ ಹಾಳುಗೆಡವಿದ್ದಾರ? ತಾಲೂಕು ಕಚೇರಿ, ನಾಡ ಕಚೇರಿ, ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ನಿಮ್ಮ ಜಮೀನಿಗೆ ಸಂಬಂಧಪಟ್ಟ ಕೆಲಸವಾಗಬೇಕೆ?
- ಯಾರಾದರೂ ಪುಂಡ ಪೋಕರಿಗಳಿಂದ, ರೌಡಿಗಳಿಂದ, ರಾಜಕಾರಣಿಗಳಿಂದ ನಿಮಗೆ ತೊಂದರೆ ಇದೆಯೇ?

ಚಿಂತಿಸಬೇಡಿ - ಹೆದರಬೇಡಿ! ಯಾವುದೇ ಸಮಸ್ಯೆ ಇರಲಿ, ಈ ಎಲ್ಲಾ ಸಮಸ್ಯೆಗಳಿಗೆ ‘ಕಾನೂನು’ ಪರಿಧಿಯೊಳಗೆ ಹೊರಾಡಲು ಮತ್ತು ಗೆಲ್ಲಲು ನಿಮಗೆ ಸಲಹೆ ನೀಡಲು **‘ಪೊಲೀಸ್ ನ್ಯೂಸ್ ಸಹಾಯವಾಣಿ’** ಸಿದ್ದವಿದೆ. ಸಂಬಂಧಪಟ್ಟ ಅಧಿಕಾರಿಗಳು/ ವಕೀಲರು/ ವ್ಯಕ್ತಿಗಳು/ಇಲಾಖೆಯೊಂದಿಗೆ ಮಾತನಾಡಿ ನಿಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಾನೂನು ಹೋರಾಟ ಮಾಡಲು ಬೇಕಾದ ಅತ್ಯುತ್ತಮ ಸಲಹೆ ಸೂಚನೆಗಳನ್ನು ಇಲ್ಲಿ ಕೊಡಲಾಗುತ್ತದೆ.

ಸಂಪರ್ಕಕ್ಕಾಗಿ

9513892666, 8884452699 policenewsreporter@gmail.com


Vol. 41 No. 03 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com